ಲಂಕೇಶ್

ನವೆಂಬರ್ 12, 2008 ರೂ. 12/-




ಅಮೆರಿಕನ್ ಪತ್ರಕರ್ತ ಸ್ಕಾಟ್ ಕಾರ್ನಿಯ ಪತ್ತೇದಾರಿಕೆ

ಡಾನ್‌ಗಳ ಸಮಾಜ ಸೇವೆಯ

ಅಸಲಿ ಮುಖ

ೈಸೂರು: ಸಹಕಾರಿ ಸೊಸೈಟಿಯ ಹೆಗ್ಗಣಗಳು



ಇನ್‌ಸ್ಪೆಕ್ಟರ್ ಆಚಾರ್ ಬಲಿ

ರ್ನಾಟಕ ವಿವಿ ಸಿಂಡಿಕೇಟ್ ಅಲ್ಲ, ಹಿಂಡಿಕೇಟ್!



ಡಿಎಸ್-ಕಾಂಗ್ರೆಸ್ ವಿರುದ್ಧ

ಶೋಭಾ ಸೇಡು

ನಗ್ಗಲ ಮುಳ್ಳು

ಸುಷ್ಮಾ ಮಾದರಿ

ಈಗ ನಮ್ಮ ರಾಜ್ಯದಲ್ಲಿರೋದು 'ಗುಜರಾತ್ ಮಾದರಿ' ಆಡಳಿತವೋ 'ಮೋದಿ ಮಾದರಿ' ಆಡಳಿತವೋ, 'ಬಸವ ಮಾದರಿಯೋ' ಅಥವಾ ಗಾಂಧಿ ಮಾದರಿ'ಯದ್ದೋ ಅನ್ನೋದು ಮುಖ್ಯಮಂತ್ರಿಯವರಿಗೇ ಗೊತ್ತಿಲ್ಲ ಅನ್ನೋ ಅನುಮಾನ ಜನರ ತಲೆತಿನ್ತಾ ಇದೆ. ಒಂದೊಂದು ದಪ ಒಂದೊಂದು ಮಾದರಿ ಆಡಳಿತ ನಂದು ಅಂತ ಹೇಳ್ತಾ ಬದ್ದವರಲ್ಲ ಅದ್ಕೇ ಸಿಕ್ಕಾಬಟ್ಟೆ ಕನ್‌ಫ್ಯೂಸ್ ಆಗದೆ. ನಿಜಕ್ಕೂ ನೋಡಿದರೆ ಇದಾವುದೂ ಅಲ್ಲವಂತೆ. ಅದು 'ಸುಷ್ಮಾ ಮಾದರಿ' ಆಡಳಿತ ಅನ್ನೋದು ಇತ್ತೀಚೆಗೆ ಬಯಲಿಗೆ ಬರ್ತಾ ಇದೆಯಂತೆ. ಅರೆರೆ ಊರ ಮುಂದಲ ಮಾರಿ ಹಣೆಯಂತೆ ಅಲಂಕರಿಸಿಕೊಳ್ಳುವ ಈ ಕುಂಕುಮಧಾರಿಣಿದೂ ಒಂದು ಮಾದರಿ ಅಂತ ಇದೆಯ, ಇದ್ದರೆ ಯಾವುದು ಅದು ಅಂದರೆ, ಮೊಣಕ್ಕೈಗೆ ತುಪ್ಪ ಸವರೋದು ಅಂತಾರಲ್ಲ ಅದೇ ಸುಷ್ಮಾ ಮಾದರಿ ಅಂತೆ! ಎಲಎಲಾ ಇದಾವ ಮಾದರಿಯು ಎಂಬುದಾಗಿ ಯಕ್ಷಗಾನ ಪಾತ್ರದಂತೆ ವಿಚಾರಿಸಲಾಗಿ ತಿಳಿದು ಬಂದದ್ದು ಎಂದರೆ... ಸುಷ್ಮಾ ಸ್ವರಾಜ್ ಕೇಂದ್ರ ಸಚಿವರಾಗಿದ್ದರಲ್ಲ ಆಗ ನಡೆದ ಘಟನೆ ಇದು. ಮಂತ್ರಿಣಿಗೆ ಆಪ್ತರಾಗಿದ್ದ ಸಂಸದರೊಬ್ಬರು ಅವರ ಸ್ನೇಹಿತರೊಬ್ಬರ ಜೊತೆ ಬಂದರಂತೆ. ಆ ಸ್ನೇಹಿತರಿಗೆ ಮಂತ್ರಿಣಿ ಇಲಾಖೆಯಲ್ಲಿ ಒಂದು ಕೆಲಸ ಆಗಬೇಕಿತ್ತಂತೆ. ಅದು ಬಲೇ ಇಕ್ಕಟ್ಟಿನ ಕೆಲಸ ಅಂತೆ. ಮಾಡಲು ಸಾಧ್ಯವೇ ಇರಲಿಲ್ಲವಂತೆ. ಆದರೂ ನಸುನಗುತ್ತಾ 'ನೀವೇ ಬಂದಿದೀರಿ ಅಂದ್ಮೇಲೆ ಇಲ್ಲ ಅಂತ ಹ್ಯಾಗೆ ಹೇಳೋದು. ನಾನು ಸಾಧ್ಯ ಆದಷ್ಟು ಪ್ರಯತ್ನಿಸ್ತೀನಿ' ಅಂದರಂತೆ. ಆಶ್ವಾಸನೆಯಿಂದ ಅವರು ಖುಷಿ ಆದರಂತೆ. ಕೆಲಸ ಆಗದೆ ಇದ್ದರೂ ಬೆಣ್ಣೆಯಲ್ಲಿ ಕೂದಲು ತೆಗೆದ ಹಾಗೆ ಆಡಿದ ಮಾತು, ಅವರು ನಡೆದುಕೊಂಡ ರೀತಿಯಿಂದ ಅವರಿಬ್ಬರೂ ತೃಪ್ತಿಗೊಂಡರಂತೆ! ಇದನ್ನು ಸುಷ್ಮಾ ಅವರೇ ಹೇಳಿದ್ದಾರೆ. ಯಡ್ಯೂರಪ್ಪನವರು ಹೋದ ಹೋದ ಕಡೆ ಎಲ್ಲ ಆಶ್ವಾಸನೆಗಳ ಸುರಿಮಳೆ ಹರಿಸುತ್ತಿರುವುದರನ್ನು ನೋಡಿದರೆ ಇದು ಖಂಡಿತ 'ಸುಷ್ಮಾ ಮಾದರಿ' ಅನ್ನಿಸುತ್ತೆ ಅಲ್ವಾ...



ಸ್ವದೇಶಿ ಚಿಕಿತ್ಸೆ!

ನಿಸರ್ಗದ ಕರೆ.

ಅದನ್ನು ತೀರಿಸಿಕೊಳ್ಳುವುದು ಎಲ್ಲಿ?

ನಿಸರ್ಗದಲ್ಲಿ!

ಜನರು ಇದರಲ್ಲಿ ನಂಬಿಕೆ ಇಟ್ಟಿದ್ದಾರಾ ಅನ್ನೋ ಅನುಮಾನ ಏಕೈಕ ಮಹಿಳಾ ಮಂತ್ರಿ ಶೋಭಾ ಕರಂದ್ಲಾಜೆಯವರನ್ನು ಕಾಡುತ್ತಿದೆಯಂತೆ. ಅವರು ಇತ್ತೀಚೆಗೆ ಉತ್ತರಕನ್ನಡದ ಹಲವಾರು ಹಳ್ಳಿಗಳಿಗೆ ಭೇಟಿ ನೀಡಿದ್ದರಂತೆ. ನಿರ್ಮಲ ಗ್ರಾಮ ಯೋಜನೆ ಅಡಿ ಎಲ್ಲಾ ಮನೆಗಳಲ್ಲೂ ಶೌಚಾಲಯ ನಿರ್ಮಿಸಬೇಕು ಅಂತ ಇದ್ದ ಅವರಿಗೆ ಆಶ್ಚರ್ಯ ಕಾದಿತ್ತಂತೆ. ಪ್ರತಿ ಮನೆಯಲ್ಲೂ ಅವು ಇದ್ದವಂತೆ! ಅರೆರೆ ಇದೇನು ಮನೆಯಲ್ಲಿ ಶೌಚಾಲಯ ಇದ್ದರೂ ಬಯಲಿಗೆ ಹೋಗ್ತಾರಲ್ಲ ಅನ್ನೋ ಕುತೂಹಲ ಕೆರಳಿತಂತೆ. ಶೌಚಾಲಯದ ಬಾಗಿಲು ತೆಗೆದು ನೋಡಿದರೆ ಅವು ಕುರಿಕೊಪ್ಪ ಆಗಿದ್ದವಂತೆ! ಓಹೋ ಇವರಿಗೆ ಕಕ್ಕಸು ಕಟ್ಟಿಸಿಕೊಟ್ಟರೆ ಸಾಲದು ಅದನ್ನು ಬಳಸುವ ವಿಧಾನವನ್ನು ಕಲಿಸಬೇಕು ಅಂತ ಮನದಟ್ಟಾಯಿತಂತೆ. 'ಶೌಚಾಲಯ ಬಳಸುವ ಕಲಿಕೆ' ಎಂಬ ಪ್ರತ್ಯೇಕ ವಿಭಾಗ ತೆರೆಯುತ್ತಾರೋ ಏನೋ ತಿಳಿದು ಬಂದಿಲ್ಲ.

ಇದನ್ನು ಪತ್ರಿಕೆಯಲ್ಲಿ ಓದಿದಾಗ ಒಂದು ಅನುಮಾನ ಕಾಡಿತು. ಗ್ರಾಮೀಣ ಪ್ರದೇಶದ ಗಂಡಸರು ಎಲ್ಲೆಂದರಲ್ಲಿ ಪಂಚೆ ಮೇಲೆತ್ತಿ ನಿಸರ್ಗದ ಕರೆಗೆ ಓಗೊಡುತ್ತಾರೆ, ಸೀರೆಯುಟ್ಟ ಮಹಿಳೆಯರಿಗೆ ಈ ಕಷ್ಟವೇ ಇಲ್ಲ, ನಡೀತಾ ನಡೀತಾನೆ ಅದನ್ನು ಪೂರೈಸಿಕೊಳ್ಳುತ್ತಾರೆ. ಕರೆ ಹಿಂದಿನಿಂದ ಬಲವಾಗಿ ಬಂತು ಅನ್ನಿ ಗಂಡಸರು ಎಂತಹದ್ದಾದರೂ ಮರೆ ಹುಡುಕಿದರೆ ಹೆಂಗಸರಿಗೆ ಉಟ್ಟಸೀರೆಯನ್ನೇ ಎರಡು ಕೈನಿಂದ ಅಡ್ಡಹಿಡಿದು ಇತರರಿಗೆ ಸಹಾಯ ಮಾಡುತ್ತಾರೆ. ಶೌಚಾಲಯವನ್ನೇ ಬಳಸಿ ಬಳಸಿ ರೂಢಿಯಾದರೇನಾಗುತ್ತೆ, ಅದನ್ನು ಬೇರೆ ಕಡೆ ಬಳಸಬೇಕಾದರೆ ಕಾಸು ಬಿಚ್ಚಬೇಕು. ಬೋರ್ಡಿನಲ್ಲಿ ಎರಡು ರೂಪಾಯಿ ಅಂತ ಬರೆದಿದ್ದರೂ ಜೋಗದಂತಹ ಪ್ರವಾಸಿಕೇಂದ್ರಗಳಲ್ಲಿ ಅದು ಸೀಸನ್ ಇದ್ದಾಗಿನ ರೇಟು, ಸೀಸನ್ನಿನ ರೇಟೇ ಬೇರೆ ಇದೆ ಅಂತ ಹೇಳಿ ಐದು, ಏಳು ಹಿಂಗೆ ಬೇಕಾಬಿಟ್ಟಿ ವಸೂಲು ಮಾಡ್ತಾರಂತೆ. ಸೀಸನ್ನು ಅಂದರೆ ಜೋಗದ ಸೀಸನ್ನೋ, ನಿಸರ್ಗದ ಕರೆಯ ಸೀಸನ್ನೋ ಅನ್ನೋದು ತಿಳಿದುಬಂದಿಲ್ಲ, ಇಂತಹ ಭ್ರಷ್ಟ ವ್ಯವಸ್ಥೆಯಿಂದ ಪಾರಾಗಲು ಇಂತಹ ದುಬಾರಿ ಶೌಚಾಲಯಗಳನ್ನು ಬಳಸುವುದರ ಬದಲು 'ಸ್ವದೇಶಿ ಮಾದರಿ'ಯಲ್ಲಿ ನಿಸರ್ಗದ ಕರೆನೀಗಿಕೊಳ್ಳುವುದೇ ಉತ್ತಮವಾ ಅಂತ...

ಹುಡುಕಾಟ!

ಸಂಶೋಧನಾ ಧುರೀಣ ಎಸ್.ಎಲ್. ಭೈರಪ್ಪನವರ ಮುಖದಲ್ಲಿ ಅಸಹನೆ ಮಡುಗಟ್ಟಿತ್ತು, ಮತಾಂತರಿಗಳ ಅವಾಂತರದಿಂದ ಹಿಂದೂ ಧರ್ಮ ಪಾರುಮಾಡುವುದು ಹೇಗೆ ಅನ್ನೋ ಪ್ರಶ್ನೆ ಅವರನ್ನು ಕಾಡುತ್ತಿತ್ತು, ಇದ್ದಕ್ಕಿದ್ದಂತೆ 'ಷಂಡರು ಎಲ್ಲ ಷಂಡರು' ಎನ್ನುತ್ತಾ ಕೋಪದಿಂದ ಕುದಿದರು. 'ಯಾರು ಸಾರ್' ಅಂದೆ. 'ಇನ್ನಾರು ಒಕ್ಕಲಿಗರು, ಲಿಂಗಾಯತರು' ಗುಡುಗಿದರು.

ಇವಕ್ಕೆಲ್ಲಾ ಕಾರಣ ಇತ್ತು.

'ಆವರಣ' ಬರೆದರು. ಒಕ್ಕಲಿಗರು ಸಾಬರ ವಿರುದ್ಧ ಸಿಡಿದೇಳುವುದನ್ನು ಕಾಣಲು ಚಾತಕಪಕ್ಷಿಯಂತೆ ಕಾದಿದ್ದರು. ಅದು ಕೂಡಿಬರಲಿಲ್ಲ

ಲಿಂಗಾಯತರ ಹಿಡಿದರು.

ಮತಾಂತರದ ವಿರುದ್ಧ ಲೇಖನ ಬರೆದು ಕಿರಿಸ್ತಾನರಿಂದ ಆಗುತ್ತಿರುವ ಅನಾಹುತಗಳನ್ನು ಎಳೆಎಳೆಯಾಗಿ ಬಿಡಿಸಿದರು. ಶಾಂತಿಗಾಗಿ ನೊಬೆಲ್ ಪ್ರಶಸ್ತಿ ಯನ್ನು ಮದರ್ ಥೆರೇಸಾಗೆ ಕೊಟ್ಟವರು ಶತಾಯುಷಿ ಸಿದ್ಧಗಂಗಾಮಠದ ಶ್ರೀಗಳಿಗೆ ನೀಡಲಿಲ್ಲ ಎಂಬ ಮೂಲಭೂತ ಪ್ರಶ್ನೆಯನ್ನು ಎತ್ತಿದರು.

ಲಿಂಗಾಯತರಿಗೆ ಇದು ಸಮಸ್ಯೆ ಆಗಿ ಕಾಡಲೇ ಇಲ್ಲ!

ಮುಂದೇನು? ಯಾರನ್ನು ಹಿಡಿಯುವುದು?

ಕುರುಬರನ್ನ? ದಲಿತರನ್ನ?

ಈ 'ಸಂಶೋಧನೆ'ಯಲ್ಲೇ ಮುಳುಗಿದರು ಭೈರಪ್ಪ ಅವರು.

ಎಚ್ಚರ ಆಯಿತು. ಹಾಳಾದ ಮಧ್ಯಾಹ್ನದ ನಿದ್ದೆ... ಎಂತೆಂತಹವೋ ದರಿದ್ರ ಕನಸು ಬೀಳ್ತವೆ!

■ ಎಚ್.ಎಲ್.ಕೇಶವಮೂರ್ತಿ



Quote-Unquote

[…] ಕೇಂದ್ರ ಮತ್ತು ರಾಜ್ಯ ಸರ್ಕಾರಗಳಿಗೆ ಭೋನ್ಸಾಲ ಮಿಲಿಟರಿ ಅಕಾಡೆಮಿಯ ಚಟುವಟಿಕೆಗಳ ಬಗ್ಗೆ ಗೊತ್ತಿರಲಿಲ್ಲ ಎಂದಾಗಲಿ, ದೇಶದ ವಿವಿಧ ಭಾಗಗಳಿಂದ ಬಂದಿದ್ದ ಭಜರಂಗದಳದ ಗೂಂಡಾಗಳಿಗೆ ಅಲ್ಲಿ ಶಸ್ತ್ರಾಸ್ತ್ರ ತರಬೇತಿಗಳನ್ನು ನೀಡಲಾಗುತ್ತಿತ್ತು ಎಂಬುದು ಗೊತ್ತಿರಲಿಲ್ಲ ಎಂಬುದನ್ನಾಗಲೀ ನಾವು ನಂಬಬೇಕೆ? ಬಾಂಬ್ ಸ್ಫೋಟಗಳು ಪಕ್ಕಕ್ಕಿರಲಿ, ಕೋಮುವಾದಿ ಸಂಘಟನೆಯೊಂದು ಶಸ್ತ್ರಾಸ್ತ್ರ ತರಬೇತಿ ನೀಡುತ್ತಿರುವುದನ್ನು ಕಾನೂನು ವಿರೋಧಿ ಎಂದು ಪರಿಗಣಿಸಲಿಲ್ಲ ಯಾಕೆ? ಹಾಗೆ ಪರಿಗಣಿಸಿ ಮುಸಲ್ಮಾನರ ಮತ್ತು ಕ್ರಿಶ್ಚಿಯನ್ನರ ವಿರುದ್ಧ ಹಿಂಸಾಕೃತ್ಯಗಳಲ್ಲಿ ತೊಡಗಿದ್ದ ಭಜರಂಗದಳವನ್ನು ನಿಷೇಧಿಸಲಿಲ್ಲ ಯಾಕೆ?

ಭಯೋತ್ಪಾದನೆಯಲ್ಲಿ ಸಂಘಪರಿವಾರ ಮತ್ತದರ ಸಾಧು-ಸಾಧ್ವಿಗಳ ಪಾತ್ರ ಮಾತ್ರವಲ್ಲ, ಸೈನ್ಯದಲ್ಲಿನ ಅದರ ಸಂಪರ್ಕಗಳು ಮತ್ತು ಬಿಜೆಪಿಯ ಪಾತ್ರ ಕೂಡ ತೀಕ್ಷ್ಣವಾದ ತನಿಖೆಗೆ ಒಳಪಡಿಸಬೇಕಿದೆ. ಅಷ್ಟೇ ಅಲ್ಲ, ಭಯೋತ್ಪಾದನೆ, ಕೋಮುದ್ವೇಷ ಮತ್ತು ಇತರೆ ಧರ್ಮದವರನ್ನು ಮದುವೆಯಾಗಿರುವ ಮಹಿಳೆಯರ ಅಪಹರಣ ಪ್ರಕರಣಗಳಲ್ಲಿ ಭಜರಂಗದಳ, ವಿಶ್ವಹಿಂದೂ ಪರಿಷತ್ ಮತ್ತು ಸಂಘ ಪರಿವಾರದ ಇತರೆ ಸಂಘಟನೆಗಳ ಪಾತ್ರದ ಬಗ್ಗೆ ಪ್ರೈಮಾ ಫೇಸೀ ಸಾಕ್ಷ್ಯಗಳಿದ್ದರೆ ಆ ಸಂಘಟನೆಗಳನ್ನು ಕೂಡಲೇ ನಿಷೇಧಿಸಬೇಕಿದೆ.

ಸೆಪ್ಟೆಂಬರ್ 2006 ರಲ್ಲಿ ಮಾಲೆಗಾಂವ್‌ನಲ್ಲಿ ಸಂಭವಿಸಿದ ಬಾಂಬ್ ಸ್ಫೋಟ ಮತ್ತು ಇತ್ತೀಚೆಗೆ ಮೊಡಾಸಾದಲ್ಲಿ ನಡೆದ ಸ್ಫೋಟಗಳಿಗೆ ಸಂಬಂಧಿಸಿದಂತೆ ಅಖಿಲ ಭಾರತೀಯ ವಿದ್ಯಾರ್ಥಿ ಪರಿಷತ್ತಿನ ಮಾಜಿ ನಾಯಕಿ ಮತ್ತು ಹಾಲಿ ಸಾಧ್ವಿ ಎಂದು ಕರೆಸಿಕೊಳ್ಳುವ ಪ್ರಗ್ಯಾಸಿಂಗ್ ಎಂಬಾಕೆಯನ್ನು ಬಂಧಿಸಲಾಗಿದೆ. ಆದರೆ ಸಂಘ ಪರಿವಾರವು ಒಂದೆಡೆ ತನಗೂ ಈ ಸ್ವಾಧ್ವಿಗೂ ಸಂಬಂಧವೇ ಇಲ್ಲ ಎನ್ನುತ್ತಿದ್ದರೆ, ಇನ್ನೊಂದೆಡೆ "ಸಾಧ್ವಿಯೊಬ್ಬಾಕೆ ಭಯೋತ್ಪಾದಕಿ ಆಗಿರಲು ಸಾಧ್ಯವೇ ಇಲ್ಲ" ಎನ್ನುತ್ತಿದೆ. ಬಿಜೆಪಿಯ ವಕ್ತಾರ ವೆಂಕಯ್ಯನಾಯ್ಡು ಅಂತೂ "ಕಾನೂನಿನನ್ವಯ ಆಕೆಯ ವಿರುದ್ಧದ ಆರೋಪಗಳು ಸಾಬೀತಾಗುವವರೆಗೂ ಆಕೆಯನ್ನು ನಿರ್ದೋಷಿ ಎಂದೇ ಪರಿಗಣಿಸಬೇಕು" ಎಂದೂ, "ಹಿಂದೂ ಭಯೋತ್ಪಾದನೆ ಎಂಬ ಪದಬಳಕೆ ಸರಿಯಲ್ಲ" ಎಂದೂ ಎಲ್ಲರಿಗೆ ಕಿವಿಮಾತು ಹೇಳುತ್ತಿದ್ದಾರೆ.

ಆದರೆ ಒಂದುಕ್ಷಣ ಕಲ್ಪಿಸಿಕೊಳ್ಳಿ: ಇದೇ 'ಸಾಧ್ವಿ' ಜಾಗದಲ್ಲಿ 'ಮೌಲ್ವಿ' ಪದ ಇದ್ದಿದ್ದರೆ ಏನಾಗುತ್ತಿತ್ತು? ಇದೇ ಬಿಜೆಪಿ ಆತನ ರಕ್ತಕ್ಕಾಗಿ ಘರ್ಜಿಸುತ್ತಿತ್ತು, ಜಾಮಿಯಾ ನಗರ್ ಪ್ರಕರಣ ಕುರಿತಂತೆ ಬಂಧನಕ್ಕೊಳಗಾದ ಯುವಕರ ಬಗ್ಗೆ ಬಿಜೆಪಿ ಇದೇ ರೀತಿಯ "ಕಾನೂನಿನನ್ವಯ" ಎಂಬ ಉದಾರತೆಯನ್ನು ತೋರಲಿಲ್ಲ. ಬದಲಾಗಿ ಆ ಯುವಕರಿಗೆ ವಕೀಲರ ನೆರವು ನೀಡಿದ ಜಾಮಿಯಾ ಮಿಲ್ಲಿಯಾ ವಿಶ್ವವಿದ್ಯಾಲಯದ ವೈಸ್ ಛಾನ್ಸಲರ್ ಅವರನ್ನು ತರಾಟೆಗೆ ತೆಗೆದುಕೊಂಡಿತು; ಸ್ಫೋಟಗಳಿಗೆ ಸಂಬಂಧಿಸಿದ ಆರೋಪಿಗಳ ವಕಾಲತ್ತು ವಹಿಸಿದ್ದ ವಕೀಲರನ್ನು ಸಂಘಪರಿವಾರದ ಗೂಂಡಾಗಳು ಥಳಿಸಿದರು. ಅಂದರೆ ಅವರ ಪ್ರಕಾರ, ಭಯೋತ್ಪಾದನೆಯ ಆರೋಪವನ್ನು ಹೊತ್ತಿರುವ ಮುಸಲ್ಮಾನ ಯುವಕರು ಮಾತ್ರ ಅಮಾಯಕರಾಗಿದ್ದರೂ ಅಪರಾಧಿಗಳು; ಮಾತ್ರವಲ್ಲ ತಾವು ನಿರಪರಾಧಿಗಳು ಎಂದು ಸಾಬೀತುಪಡಿಸುವ ಅರ್ಹತೆಯೂ ಇಲ್ಲದವರು!

'ಸಾಧ್ವಿ' ಪ್ರಗ್ಯಾ ಬಿಜೆಪಿ ಪರವಾಗಿ ಚುನಾವಣಾ ಪ್ರಚಾರಗಳಲ್ಲಿ ಭಾಗವಹಿಸಿದ್ದಳು, ಬಿಜೆಪಿಯ ಅಧ್ಯಕ್ಷ ರಾಜನಾಥ್ ಸಿಂಗ್ ಮತ್ತು ಮಧ್ಯಪ್ರದೇಶದ ಮುಖ್ಯಮಂತ್ರಿ ಶಿವರಾಜ್ ಸಿಂಗ್ ಚೌಹಾನ್ ಜೊತೆ ಸಾರ್ವಜನಿಕ ಸಭೆಗಳಲ್ಲಿ ಕಾಣಿಸಿಕೊಂಡಿದ್ದಳು ಎಂಬುದಕ್ಕೆ ಸಾಕಷ್ಟು ಸಾಕ್ಷ್ಯಾಧಾರಗಳಿವೆ. ಬಿಜೆಪಿಯೇ ತೀವ್ರವಾಗಿ ಪ್ರತಿಪಾದಿಸುವ POTA ಕಾಯ್ದೆ ಮತ್ತು ಛತ್ತೀಸ್‌ಗಢ್ ವಿಶೇಷ ರಕ್ಷಣಾ ಕಾಯ್ದೆಯಡಿ ಭಯೋತ್ಪಾದನೆ ಆರೋಪ ಹೊತ್ತಿರುವವರೊಂದಿಗೆ ಸಂಬಂಧ ಹೊಂದಿರುವವರ ಅಥವಾ ಪರಿಚಯ ಹೊಂದಿರುವವರ ವಿರುದ್ಧವೂ 'ಸಂಚುಗಾರ' ಎಂದು ಕಾನೂನುಕ್ರಮ ಕೈಗೊಳ್ಳಬಹುದಾಗಿದೆ. ಆದ್ದರಿಂದ ಈಗ ರಾಜನಾಥ್ ಮತ್ತು ಶಿವರಾಜ್ ವಿರುದ್ಧ ಯಾಕೆ ಕ್ರಮ ತೆಗೆದುಕೊಳ್ಳಬಾರದೆಂದು ಬಿಜೆಪಿ ವಿವರಣೆ ನೀಡುತ್ತದೆಯೇ? ಯಾಕೆಂದರೆ ಮಾವೋವಾದಿಗಳೊಂದಿಗೆ ಸಂಪರ್ಕ ಹೊಂದಿದ್ದಾರೆ ಎಂದು ಸುಳ್ಳು ಆರೋಪ ಹೊರಿಸಿ ಡಾ. ಬಿನಾಯಕ್ ಸೇನ್ ವಿರುದ್ಧ ಕಾನೂನುಕ್ರಮ ಕೈಗೊಂಡಿದ್ದಕ್ಕಿಂತ ಈ ಇಬ್ಬರು ಮಹನೀಯರ ವಿರುದ್ಧ ಸಾಕಷ್ಟು ಪುರಾವೆಗಳು ಲಭ್ಯವಿದೆ.

ಹಿಂದೂ ಭಯೋತ್ಪಾದನೆ ತನಿಖೆಯಾಗಬೇಕು



ಈ ಪ್ರಗ್ಯಾಳ ಕಾರ್ಯಚಟುವಟಿಕೆಗಳಾದರೂ ಎಂಥವದ್ದಾಗಿದ್ದವು? ಗುಜರಾತಿನಲ್ಲಿ 2002 ರಲ್ಲಿ ನಡೆದ ಅಲ್ಪಸಂಖ್ಯಾತರ ಮಾರಣಹೋಮದಲ್ಲೂ ಇವಳ ಪಾತ್ರವಿತ್ತು; ಈಕೆ ಬಿಜೆಪಿ ಪರವಾಗಿ ಸೂರತ್‌ನಲ್ಲಿ 2002 ಮತ್ತು 2007 ರಲ್ಲಿ ನಡೆದ ಚುನಾವಣಾ ಪ್ರಚಾರಾಂದೋಲನದಲ್ಲಿ ಭಾಗವಹಿಸಿದ್ದಳು. ಆಕೆಯ ತಂದೆಯೇ ಹೇಳುವಂತೆ ಪ್ರಗ್ಯಾ ಮತ್ತಾಕೆಯ ಜೈ ಒಂದೇ ಮಾತರಂ ಸಂಘಟನೆಯು, ತಮ್ಮ ಇಚ್ಛೆಯಂತೆ ಇತರೆ ಧರ್ಮೀಯರನ್ನು ಮದುವೆಯಾಗಿದ್ದ ಹಿಂದೂ ಮಹಿಳೆಯರನ್ನು ಬಲವಂತವಾಗಿ 'ರಕ್ಷಿಸಿ' ಅವರ ತಂದೆತಾಯಿಗಳಿಗೆ 'ಒಪ್ಪಿಸುವ' ಕಾರ್ಯಗಳಲ್ಲಿ ತೊಡಗಿತ್ತು, ಅಂದರೆ, ಕುಖ್ಯಾತ ಬಾಬು ಭಜರಂಗಿಯಂತೆ, ಪ್ರಗ್ಯಾ ಕೂಡ ಮಹಿಳೆಯರನ್ನು ಭಯಭೀತಿಗೊಳಿಸುವ, ಅಪಹರಿಸುವ ಮತ್ತು ನಿರ್ಬಂಧಿಸುವಂತಹ ಅಕ್ರಮ ಚಟುವಟಿಕೆಗಳಲ್ಲಿ ಭಾಗಿಯಾಗಿದ್ದಳು.

ಇವೆಲ್ಲಕ್ಕಿಂತ ಮುಖ್ಯವಾಗಿ ಈ ಹಿಂದೂ ಭಯೋತ್ಪಾದನೆ ಬಗೆಗಿನ ಮಾಹಿತಿಯನ್ನು ಸಾರ್ವಜನಿಕರಿಂದ ಎರಡು ತಿಂಗಳ ಕಾಲ ಸರ್ಕಾರಗಳು ಬಚ್ಚಿಟ್ಟಿದ್ದಾದರೂ ಯಾಕೆ? ಮಾಲೆಗಾಂವ್‌ನ ಬಾಂಬ್ ಸ್ಫೋಟಗಳ ನಂತರ ಅದರ ಹತ್ತಿರದಲ್ಲೇ ಇರುವ ನಾಂಡೆಡ್‌ನಲ್ಲಿ ಬಾಂಬ್‌ಗಳನ್ನು ತಯಾರಿಸುತ್ತಿದ್ದ ಭಜರಂಗದಳದ ಕಾರ್ಯಕರ್ತರು ಅಸುನೀಗಿದ್ದರು. ಆ ಪ್ರಕರಣದ ತನಿಖೆ ನಡೆಸಿದ್ದ ಪೊಲೀಸರಿಗೆ ಸ್ಥಳದಲ್ಲಿ ಮುಸಲ್ಮಾನರು ಧರಿಸುವಂತಹ ಉಡುಪುಗಳು, ನಕಲಿ ಗಡ್ಡಗಳು ದೊರಕಿದ್ದವು. ಅಷ್ಟೇ ಅಲ್ಲ, ದೇಶದ ಇತರೆ ಜಾಗಗಳಲ್ಲಿ ಸಂಭವಿಸಿದ ಬಾಂಬ್ ಸ್ಫೋಟಗಳಿಗೂ ಕೇಸರಿ ಬಳಗದವರಿಗೂ ಸಂಬಂಧ ಇರುವ ಸಾಕ್ಷ್ಯಗಳು ದೊರಕಿದ್ದವು. ಈ ಸಾಕ್ಷ್ಯಗಳನ್ನು ಕೂಲಂಕಷವಾಗಿ ಪರಿಗಣಿಸಿದ್ದರೆ ಬಹಳಷ್ಟು ಸ್ಫೋಟಗಳನ್ನು ತಡೆಯಬಹುದಿತ್ತೇನೋ?

ಈ ಪ್ರಕರಣಗಳನ್ನು ಕುರಿತಂತೆ ಮತ್ತೊಂದು ಗಮನಾರ್ಹ ಸಂಗತಿ ಒಂದಿದೆ. ಮಾಲೆಗಾಂವ್‌ನಲ್ಲಿ ಬಾಂಬ್ ಸ್ಫೋಟಿಸಿದ ಎರಡು ತಿಂಗಳ ನಂತರ ಮಹಾರಾಷ್ಟ್ರದ ಡಿಜಿಪಿ ಪಿ.ಎಸ್. ಪಸ್ರೀಚಾ ತನಿಖೆಯನ್ನು ಸಂಪೂರ್ಣಗೊಳಿಸಿರುವುದಾಗಿ ಹೇಳಿದ್ದರು ಮಾತ್ರವಲ್ಲ ಹಲವಾರು ಮುಸಲ್ಮಾನರನ್ನು ಬಂಧಿಸಿ ಅವರನ್ನೆಲ್ಲ ಪರೇಡ್ ಮಾಡಲಾಗಿತ್ತು; ಸಿಮಿ ಮತ್ತು ಲಷ್ಕರ್ ಹೆಸರುಗಳನ್ನೂ ತೇಲಿಬಿಡಲಾಗಿತ್ತು; ಪಾಕಿಸ್ತಾನ ಮತ್ತು ಅದರ ಮಾಸ್ಟರ್ ಮೈಂಡ್‌ಗಳು ಭಯೋತ್ಪಾದಕರಿಗೆ ನೀಡಿದ್ದ ತರಬೇತಿಗಳ ಬಗ್ಗೆಯೂ ಹೇಳಲಾಗಿತ್ತು, ಅಷ್ಟೇ ಅಲ್ಲ, ಮಾಲೆಗಾಂವಿನ ಬಾಂಬ್ ಸ್ಫೋಟಗಳಲ್ಲಿ ಭಾಗವಹಿಸಿದವರಿಗೂ, ಮುಂಬೈ ಟ್ರೈನ್ ಸ್ಫೋಟಗಳಿಗೂ ಸಂಬಂಧ ಕಲ್ಪಿಸಿದ್ದರು, ಆರ್‌ಡಿಎಕ್ಸ್ ಎಂಬ ಸ್ಫೋಟಕ ಇಸ್ಲಾಮಿಕ್ ಭಯೋತ್ಪಾದಕ ಸಂಘಟನೆಗಳಿಗೆ ಮಾತ್ರ ಲಭ್ಯ ಎಂದೂ ವಾದಿಸಲಾಗಿತ್ತು.

ಆದರೆ ಈಗ ಮಲೆಗಾಂವ್ ಸ್ಫೋಟಗಳಲ್ಲಿ ಬಳಸಲಾಗಿದ್ದ ಮೋಟಾರ್ ಬೈಕ್ ಪ್ರಗ್ಯಾಳ ಹೆಸರಿಗೆ ನೋಂದಾಯಿತವಾಗಿತ್ತು ಎಂದು ಹೇಳುತ್ತಿದ್ದಾರೆ. ಸಾಮಾನ್ಯವಾಗಿ ಬಾಂಬ್ ಸ್ಫೋಟಗೊಂಡಿರುವ ಜಾಗವನ್ನು ನೋಡುತ್ತಿದ್ದಂತೆ ಅವರ ಹಿಂದಿರುವ ಸಂಘಟನೆಗಳು, ಅವುಗಳನ್ನು ಬೆಂಬಲಿಸುತ್ತಿರುವ ರಾಷ್ಟ್ರಗಳ ಹೆಸರುಗಳನ್ನು ನಿಂತ ಸ್ಥಳದಲ್ಲೇ ವ್ಯಾಖ್ಯಾನಿಸಬಲ್ಲ ಪೊಲೀಸರಿಗೆ ಒಂದು ಮೋಟರ್ ಸೈಕಲ್ಲಿನ ರಿಜಿಸ್ಟ್ರೇಷನ್ ವಿವರಗಳನ್ನು ತಿಳಿದುಕೊಳ್ಳಲು ಎರಡು ವರ್ಷಗಳು ಬೇಕಾಯಿತು ಎಂಬುದನ್ನು ನಾವು ನಂಬುವುದಾದರೂ ಹೇಗೆ?

ಅಂದಹಾಗೆ, ಮಾಲೆಗಾಂವ್ ಬಾಂಬ್ ಸ್ಫೋಟಕ್ಕೆ ಸಂಬಂಧಿಸಿದಂತೆ ಮೂವರು ಮುಸಲ್ಮಾನರಿಂದ "ತಪ್ಪೊಪ್ಪಿಗೆ"ಯನ್ನು ಪಡೆದಿದ್ದು ಹೇಗೆ ಎಂದು ಪೊಲೀಸರು ವಿವರಿಸಬಲ್ಲರಾ? ಅವರ ಸ್ವಾತಂತ್ರ್ಯವನ್ನು ಕಸಿದುಕೊಂಡಿದ್ದಕ್ಕಾಗಿ, ಅವರಿಗೆ ಹಿಂಸೆ ನೀಡಿದ್ದಕ್ಕಾಗಿ, ಅವರ ತೇಜೋವಧೆ ಮಾಡಿದ್ದಕ್ಕಾಗಿ ಪೊಲೀಸರ ಪರಿಹಾರ ನೀಡಬಲ್ಲರಾ?

ಒಂದಂತೂ ಸ್ಪಷ್ಟ: ಭಯೋತ್ಪಾದನೆಯಲ್ಲಿ ಸಂಘಪರಿವಾರ ಮತ್ತು ಬಿಜೆಪಿಯ ಪಾತ್ರದ ಬಗ್ಗೆ ಸಾಕ್ಷ್ಯಗಳು ಸಿಕ್ಕಿದ್ದರೂ ಪೊಲೀಸರು ಅವರ ವಿರುದ್ಧ ಯಾವುದೇ ಕ್ರಮ ತೆಗೆದುಕೊಳ್ಳದೆ ಸುಮ್ಮನಿದ್ದರು. ಮಾತ್ರವಲ್ಲ, ಅಲ್ಪಸಂಖ್ಯಾತ ಕೋಮಿನ ನಿರಪರಾಧಿಗಳನ್ನು ಬಂಧಿಸುವ ಮೂಲಕ ಚುನಾವಣೆಗಳಲ್ಲಿ ಮತಗಳನ್ನು ಪಡೆಯಲು ನೋಡಿದ್ದರು.

ಈಗ ಕಾಂಗ್ರೆಸ್ ನೇತೃತ್ವದ ಯುಪಿಎ ಸರ್ಕಾರ ಕೂಡ 'ಹಿಂದೂ ಭಯೋತ್ಪಾದನೆ' ಬಗ್ಗೆ ಒಂದಿಷ್ಟು ಮಾಹಿತಿಯನ್ನು ಮಾತ್ರ ಹೊರಗೆಡವಿ ಅದನ್ನು ತನ್ನ ಚುನಾವಣಾ ತಂತ್ರವಾಗಿ ಬಳಸಲು ಯತ್ನಿಸುತ್ತಿದೆ.

ಸಂಘ ಪರಿವಾರದ ಎಲ್ಲಾ ಸಂಘಟನೆಗಳ ವಿರುದ್ಧ ಸೂಕ್ತ ತನಿಖೆ ಮಾತ್ರ ಇದೆಲ್ಲಕ್ಕೆ ಸರಿಯಾದ ಉತ್ತರ.

-ಕವಿತಾ ಕೃಷ್ಣನ್, ಕೌಂಟರ್ ಕರೆಂಟ್ಸ್ ವೆಬ್‌ಸೈಟಿನಲ್ಲಿ

ಸೇನೆಗೂ ಸೆಕ್ಯುಲರ್ ಮೌಲ್ಯ ಬೇಕಿದೆ



ಕಂಡಹಾಗೆ

■ ಗೌರಿ ಲಂಕೇಶ್

ಅಮಾಯಕರನ್ನು ಬಲಿತೆಗೆದುಕೊಳ್ಳುವ ಭಯೋತ್ಪಾದನೆಗೆ ಧರ್ಮ ಎಂಬುದು ಇರುವುದಿಲ್ಲ, ಸರಿ. ಆದರೆ ಮೂಲಭೂತವಾದದೊಂದಿಗೆ ಸೈನ್ಯದ ಸೋಂಕು ಸೇರಿದಾಗ ನಿಜವಾಗಲೂ ಭಯವಾಗುತ್ತದೆ. ಯಾಕೆಂದರೆ ಜಗತ್ತಿನ ಯಾವುದೇ ದೇಶದಲ್ಲಿ ಮೂಲಭೂತವಾದ ಮತ್ತು ಸೈನ್ಯಾಧಿಕಾರ ಜೊತೆಗೂಡಿದಾಗ ಅಲ್ಲೆಲ್ಲ ಪ್ರಜಾತಂತ್ರದ



ಭೋಂಸಾಲಾ ಸಂಸ್ಥೆಯ ಕಟ್ಟಡ, ಲಾಂಛನ ಮತ್ತು ಮುಖ್ಯಸ್ಥ ಸೈನ್ಯಾಧಿಕಾರಿ

ಪ್ರತಿ ಸಂಸ್ಥೆಯೂ ಹದಗೆಟ್ಟಿದೆ. ಉದಾಹರಣೆಗೆ ನೆರೆಯ ಪಾಕಿಸ್ತಾನವನ್ನೇ ನೋಡಿ.

ಅಂತಹ ಅಪಾಯಕಾರಿ ಬೆಳವಣಿಗೆಯೊಂದು ಭಾರತದಲ್ಲೂ ಪ್ರಾರಂಭವಾಗಿರುವ ಸೂಚನೆ ಸಾಧ್ವಿ ಎಂದು ಕರೆದುಕೊಳ್ಳುವ ಪ್ರಗ್ಯಾ ಥಾಕುರ್ ಮತ್ತಾಕೆಯ ಸಂಗಡಿಗರ ಬಂಧನದಿಂದ ಗೊತ್ತಾಗಿದೆ. ಮಹಾರಾಷ್ಟ್ರದ ನಾಂದೇಡ್ ಹಾಗೂ ಮಾಲೆಗಾಂವ್ ಮತ್ತು ಗುಜರಾತಿನ ಮುದೋಸಾಗಳಲ್ಲಿ ಸಂಭವಿಸಿದ ಬಾಂಬ್ ಸ್ಫೋಟಗಳಿಂದಾಗಿ ಹಲವು ಹಿಂದೂತ್ವವಾದಿ ಸಂಘಟನೆಗಳು ಭಯೋತ್ಪಾದಕ ಚಟುವಟಿಕೆಗಳಿಗೆ ಕೈಹಾಕಿರುವುದು ಬಹಿರಂಗಗೊಂಡಿದ್ದಾದರೂ ಮೊದಲ ಬಾರಿಗೆ ಹಿಂದೂತ್ವವಾದಿಗಳನ್ನು ಬಂಧಿಸಲಾಗಿದೆ. ಆದರೆ ಸಂಘಪರಿವಾರದ ಹಲವಾರು ಸಂಘಟನೆಗಳು ತಮಗೂ, ಬಂಧನಕ್ಕೊಳಗಾಗಿರುವವರಿಗೂ ಸಂಬಂಧವೇ ಇಲ್ಲ ಎಂದು ವಾದಿಸುತ್ತಿವೆ.

* * * * *

ಖ್ಯಾತ ಲೇಖಕಿ ಅರುಂಧತಿ ರಾಯ್ ಅವರು ಹೇಳಿರುವಂತೆ ಸಂಘ ಪರಿವಾರವು ಒಂದು ಹೈಡ್ರ ಹೆಡೆಡ್ (ಕಡಿದು ಹಾಕಿದಂತೆಲ್ಲ ಮರಳಿ ಹುಟ್ಟುವ ತಲೆಗಳ/ಸರ್ಪದಂತೆ. ಅದಕ್ಕೆ ಲೆಕ್ಕವಿಲ್ಲದಷ್ಟು ತಲೆಗಳು) ರೂಪಗಳು. ಅಂತಹ ಒಂದು ರೂಪ ಅಭಿನವ ಭಾರತ ಎಂಬ ಸಂಘಟನೆ. ಉಗ್ರ ಹಿಂದೂತ್ವವಾದಿ ಮತ್ತು ಮಹಾತ್ಮ ಗಾಂಧಿಯವರ ಕೊಲೆ ಆರೋಪಿಯಾಗಿದ್ದ ವಿ.ಡಿ. ಸಾವರ್ಕರ್ ಎಂಬಾತ ಈ ಅಭಿನವ ಭಾರತ ಎಂಬ ಸಂಘಟನೆಯನ್ನು 1904ರಲ್ಲಿ ಹುಟ್ಟುಹಾಕಿದ್ದ. ಅದರ ಉದ್ದೇಶ ಭಾರತದ 'ವೈರಿ'ಗಳ ವಿರುದ್ಧ ಶಸಸ್ತ್ರ ಹೋರಾಟ ಮಾಡುವುದು. ಆದರೆ 1952ರಲ್ಲಿ "ಭಾರತಕ್ಕೆ ಸ್ವತಂತ್ರ ಬಂದಿರುವುದರಿಂದ ಇದರ ಅಗತ್ಯವಿಲ್ಲ" ಎಂದು ಅದನ್ನು ಬಂದ್ ಮಾಡಿದ್ದ.

ಆದರೆ ಎರಡು ವರ್ಷಗಳ ಹಿಂದೆ ಈ ಸಂಘಟನೆಗೆ ಮತ್ತೆ ಪುನರ್ ಜನ್ಮ ನೀಡಿದ್ದು ಸಮೀರ್ ಕುಲ್ಕರ್ಣಿ ಎಂಬಾತ. ಹಲವಾರು ವರ್ಷಗಳಿಂದ RSS ಮತ್ತು ಅದರ ಇನ್ನೊಂದು ಸಂಘಟನೆಯಾದ ಅಖಿಲ ಭಾರತೀಯ ವಿದ್ಯಾರ್ಥಿ ಪರಿಷತ್ತಿನ ಸಕ್ರಿಯ ಕಾರ್ಯಕರ್ತನಾದ ಕುಲ್ಕರ್ಣಿ ಅಭಿನವ ಭಾರತಕ್ಕೆ ಅಧ್ಯಕ್ಷೆಯನ್ನಾಗಿ ನೇಮಿಸಿದ್ದು ಹಿಮಾಣಿ ಸಾವರ್ಕರ್ ಎಂಬಾಕೆಯನ್ನು. ಈ ಹಿಮಾಣಿ ವಿ.ಡಿ. ಸಾವರ್ಕರ್ ಸಹೋದರನ ಮಗ ಅಶೋಕ್ ಸಾವರ್ಕರ್‌ನನ್ನು ಮದುವೆಯಾಗಿದ್ದಳು. (ಅಶೋಕ್ ಈಗ ಮರಣ ಹೊಂದಿದ್ದಾನೆ) ಅಷ್ಟೇ ಅಲ್ಲ ಮಹಾತ್ಮಾ ಗಾಂಧಿಯನ್ನು ಹತ್ಯೆಗೈದಿದ್ದ ನಾಥುರಾಮ್ ಗೋಡ್ಸೆಯ ಸಹೋದರ ಗೋಪಾಲ್ ಗೋಡ್ಸೆಯ ಪುತ್ರಿ ಕೂಡ ಈಕೆ.



ಹೀಗೆ ಒಂದೆಡೆ ಕೊಲೆಗಡುಕ ಗೋಡ್ಸೆ ಮತ್ತು ಇನ್ನೊಂದೆಡೆ ಕೋಮುವಾದಿ ಸಾವರ್ಕರ್‌ನ ನಂಟು ಹೊಂದಿರುವ ಹಿಮಾಣಿ ನೋಡಲು ಸಭ್ಯ ಗೃಹಿಣಿಯಂತೆ ಕಂಡರೂ, ಅಂತರಾಳದಲ್ಲಿ ಅವರಿಬ್ಬರಂತೆ ಉಗ್ರವಾದಿಯೂ ಹೌದು. ಈಕೆ ಅಧ್ಯಕ್ಷೆಯಾಗಿರುವ ಅಭಿನವ ಭಾರತದ ಘೋಷಿತ ಗುರಿ "ಕರುಣೆ ಅಥವಾ ಕ್ಷಮೆ ಎರಡೂ ಅಗತ್ಯವಿಲ್ಲ. ಈಗ ಯುದ್ಧವೇ ಮಾರ್ಗ. ಈ ಮುಖಾಮುಖಿಯ ಪರಿಣಾಮ ಅತಿ ಉಗ್ರವಾಗಿರುತ್ತದೆ". ಹಾಗೆಯೇ ಈ ಸಂಘಟನೆಯ ಕರಪತ್ರವೊಂದರಲ್ಲಿ "ಧರ್ಮಶತ್ರುಗಳನ್ನು ನಾಶಪಡಿಸಿ" (ಅಂದರೆ ಕ್ರಿಶ್ಚಿಯನ್ ಮತ್ತು ಮುಸಲ್ಮಾನರು) ಎಂದು ಕರೆ ನೀಡಲಾಗಿದೆ. ಹಲವಾರು ವರ್ಷಗಳಿಂದ ಹಿಂದೂ ಮಹಾಸಭಾ ಮತ್ತು ಸಂಘ ಪರಿವಾರದ ಇತರೆ ಸಂಘಟನೆಗಳ ನೇತೃತ್ವ ವಹಿಸಿರುವ ಹಿಮಾಣಿ ಪ್ರಕಾರ "ಭಯೋತ್ಪಾದನೆಯನ್ನು ಹರಡಿಸುವವರನ್ನು ಕೊಂದರೆ ತಪ್ಪಲ್ಲ. ಒಂದು ಬಾಂಬ್ ಸ್ಫೋಟಕ್ಕೆ ಪ್ರತಿಕ್ರಿಯೆಯಾಗಿ ಇನ್ನೊಂದು ಬಾಂಬ್ ಸ್ಫೋಟಿಸುವುದೂ ತಪ್ಪಲ್ಲ."

ಹಿಮಾಣಿ ನೇತೃತ್ವದ ಅಭಿನವ ಭಾರತದ ಸಕ್ರಿಯ ಸದಸ್ಯರಾದ ಸಮೀರ್ ಕುಲ್ಕರ್ಣಿ ಮತ್ತು ರಮೇಶ್ ಉಪಾಧ್ಯಾಯ ಎಂಬಿಬ್ಬರನ್ನು ಬಂಧಿಸಲಾಗಿದೆಯಲ್ಲದೆ, ಶಾಮ್‌ಲಾಲ್ ಸಾಹು ಮತ್ತು ಶಿವನಾರಾಯಣ ಸಿಂಗ್ ಸೇರಿದಂತೆ ಇನ್ನೂ ಕೆಲವರನ್ನು ವಿಚಾರಣೆಗೆ ಗುರಿಪಡಿಸಲಾಗಿದೆ. ಇವರೆಲ್ಲರೂ ಒಂದಲ್ಲಾ ಒಂದು ಹಿಂದೂತ್ವವಾದಿ ಸಂಘಟನೆಯೊಂದಿಗೆ ಸಕ್ರಿಯವಾಗಿ ಕೆಲಸ ಮಾಡಿರುವವರೆ. ಅದರಲ್ಲೂ ಶಾಮ್‌ಲಾಲ್ ಸಾಹು ಮತ್ತು ಶಿವನಾರಾಯಣ ಸಿಂಗ್ ಇಬ್ಬರೂ ಬಿಜೆಪಿಯ ಸದಸ್ಯರು.

* * * * *

ಇದೆಲ್ಲಕ್ಕಿಂತಲೂ ಮುಖ್ಯವಾದದ್ದು ಹಿಂದೂತ್ವವಾದಿಗಳು ಹೇಗೆ ಇತರೆ ವಲಯಗಳನ್ನು ಆಕ್ರಮಿಸಿಕೊಂಡಿದ್ದಾರೊ, ಹಾಗೆಯೇ ಭಾರತದ ಸೈನ್ಯವನ್ನೂ ನಿಧಾನವಾಗಿ ಆಕ್ರಮಿಸಿಕೊಳ್ಳುತ್ತಿರುವುದು. ಇದಕ್ಕೆ ಉತ್ತಮ ಉದಾಹರಣೆ ಮೇಜರ್ ರಮೇಶ್ ಉಪಾಧ್ಯಾಯ. ಅರವತ್ತ ನಾಲ್ಕು ವರ್ಷ ವಯಸ್ಸಿನ ಈತ ಭಾರತೀಯ ಸೈನ್ಯದಿಂದ ನಿವೃತ್ತಿ ಹೊಂದಿದ್ದು ಈಗ ಬಿಜೆಪಿಯ ಸಕ್ರಿಯ ಸದಸ್ಯನಾಗಿದ್ದಾನಲ್ಲದೆ ನಿವೃತ್ತ ಸೈನಿಕರ ಬಿಜೆಪಿ ಘಟಕದ ನಾಯಕನೂ ಆಗಿದ್ದ. ಮಿಲಿಟರಿ ಇಂಟೆಲಿಜೆನ್ಸ್‌ನಲ್ಲಿ ಕೆಲಸ ಮಾಡಿದ ಅನುಭವ ಹೊಂದಿರುವ ಈತ ಹಿಂದೂತ್ವವಾದಿಗಳಿಗೆ ಇನ್ನೆಂತಹ ತರಬೇತಿ ನೀಡಿರಬಹುದು ಎಂದು ಯೋಚಿಸಿದರೆ ದಿಗಿಲಾಗುತ್ತದೆ.

ಇದಕ್ಕಿಂತ ಅಪಾಯಕಾರಿ ಅಂಶ ಯಾವುದೆಂದರೆ ಈತ ಸೈನ್ಯದಲ್ಲಿನ ತನ್ನ ಸಂಪರ್ಕಗಳನ್ನು ಉಪಯೋಗಿಸಿಕೊಂಡು ಅವರೆಲ್ಲರನ್ನು ಹಿಂದೂತ್ವವಾದಿ ಸಂಘಟನೆಗಳಿಗೆ ಸೇರಿಸುತ್ತಿರುವುದು, ಮತ್ತು ಆ ಮೂಲಕ ಭಾರತೀಯ ಸೈನ್ಯವನ್ನೂ ಕೇಸರಿಮಯ ಮಾಡಲು ಯತ್ನಿಸುತ್ತಿರುವುದು.

ಅಂಥವರಲ್ಲಿ ಲೆಫ್ಟಿನೆಂಟ್ ಕರ್ನಲ್ ಶ್ರೀಕಾಂತ್ ಪುರೋಹಿತ ಎಂಬುವನೊಬ್ಬ. ಈ ಪುರೋಹಿತನೇ ಜಬಲ್‌ಪುರ್ ಆರ್ಡ್‌ನನ್ಸ್ ಫ್ಯಾಕ್ಟರಿಯಿಂದ ಪ್ರಗ್ಯಾ ಮತ್ತಾಕೆಯ ತಂಡಕ್ಕೆ RDX ಎಂಬ ಸ್ಫೋಟಗಳನ್ನು ಸರಬರಾಜು ಮಾಡಿರಬಹುದೆಂಬ ಶಂಕೆ ಪೊಲೀಸರದ್ದು. ಏಕೆಂದರೆ ಮಾಲೆಗಾಂವ್ ಬಾಂಬ್ ಸ್ಫೋಟದಲ್ಲಿ ಬಳಸಲಾಗಿದ್ದ RDX ಸುಲಭವಾಗಿ ಸಿಗುವಂತಹದ್ದಲ್ಲ. ಬದಲಾಗಿ ದೇಶದ ಗಡಿಯಾಚೆಗಿನ ಭಯೋತ್ಪಾದಕರಿಂದ ಅಥವಾ ಸೈನ್ಯದ ಫ್ಯಾಕ್ಟರಿಗಳಿಂದ ಪಡೆಯಬಹುದಷ್ಟೇ.

ಹಾಗೊಮ್ಮೆ ಪುರೋಹಿತ್ ಈ ಹಿಂದೂತ್ವವಾದಿ ಭಯೋತ್ಪಾದಕರಿಗೆ RDX ಅನ್ನು ಸರಬರಾಜು ಮಾಡಿದ್ದ ಎಂಬುದು ಸಾಬೀತಾದರೆ, ನಮ್ಮ ದೇಶದ ರಕ್ಷಣೆಗೆ ನಿಂತಿರುವ ಹಲವು ಸೈನಿಕರು ದೇಶವನ್ನೇ ವಿನಾಶಗೊಳಿಸಲು ಹೊರಟಿರುವ ಹಿಂದೂತ್ವವಾದಿಗಳೊಂದಿಗೆ ಕೈಜೋಡಿಸಿದ್ದಾರೆ ಎಂದೇ ಅರ್ಥ.


*****

ಅಂದಹಾಗೆ ಹಿಂದೂತ್ವವಾದಿಗಳ ಮತ್ತು ಸೈನ್ಯಾಧಿಕಾರಿಗಳ ಅಪಾಯಕಾರಿ ಮಿಲನಕ್ಕೆ ಕಾರಸ್ಥಾನವಾಗಿರುವುದು ನಾಸಿಕ್‌ನಲ್ಲಿರುವ ಭೋನ್‌ಸಾಲಾ ಮಿಲಿಟರಿ ಅಕಾಡೆಮಿ



ಬಿಜೆಪಿ ಅಧ್ಯಕ್ಷ ರಾಜನಾಥ್‌ಸಿಂಗ್ ಮತ್ತು ಮಧ್ಯಪ್ರದೇಶ ಮುಖ್ಯಮಂತ್ರಿಯೊಂದಿಗೆ ಸಾಧ್ವಿ ಪ್ರಗ್ಯಾ

ಎಂಬ ಸಂಸ್ಥೆ. ಇದರ ಹೆಸರು ಕೇಳಿದ ಕೂಡಲೇ ಇದು ಸರ್ಕಾರಕ್ಕೆ ಅಥವಾ ಸೈನ್ಯಕ್ಕೆ ಸೇರಿರುವ ಸಂಸ್ಥೆ ಎನಿಸುತ್ತದೆ. ಆದರೆ ವಾಸ್ತವವಾಗಿ ಇದು ಕೂಡ ಹಿಂದೂತ್ವವಾದಿಗಳ ಅಡ್ಡೆಯೇ ಆಗಿದೆ.



ಹಿಮಾನಿ ಸಾವರ್ಕರ್

ಹೇಳಿಕೇಳಿ, ಈ ಸಂಸ್ಥೆಯನ್ನು ಪ್ರಾರಂಭಿಸಿದ್ದು ಮೂಂಜೆ ಎಂಬ ಚೆಡ್ಡಿ. ಈ ಮೂಂಜೆ ವಿಶ್ವಹಿಂದೂ ಮಹಾಸಭಾದ ಸ್ಥಾಪಕರಲ್ಲೂ ಒಬ್ಬನಾಗಿದ್ದ. ಹಿಂದೂ ಯುವಕರಲ್ಲಿ ಸೈನ್ಯದ ಶಿಸ್ತು ಬೆಳೆಸುವುದು ಈ ಸಂಸ್ಥೆಯ ಉದ್ದೇಶ ಎಂದು ಹೇಳಲಾಗುತ್ತಿದೆಯಾದರೂ ಇದರ ಅಸಲಿ ಉದ್ದೇಶ ಸಾಕಷ್ಟು ಹಿಂದೂತ್ವವಾದಿಗಳು ಭಾರತೀಯ ಸೈನ್ಯವನ್ನು ಸೇರುವಂತೆ ಬೆಳೆಸುವುದೇ ಆಗಿದೆ.

ಒಂದೆಡೆ, ಈ ಸಂಸ್ಥೆಯ ಟ್ರಸ್ಟಿಗಳು ಮಾತ್ರವಲ್ಲ ಅಲ್ಲಿನ ಉಪನ್ಯಾಸಕರೆಲ್ಲರೂ ಒಂದಲ್ಲಾ ಒಂದು ಹಿಂದೂತ್ವ ಸಂಘಟನೆಯಲ್ಲಿ ಸಕ್ರಿಯ ಆಗಿರುವವರೇ. ಇನ್ನೊಂದೆಡೆ, ಸಂಸ್ಥೆಯ ಹಿರಿಯರ ಸ್ಥಾನದಲ್ಲಿ ಇರುವವರು ಮತ್ತು ಯುವಕರಿಗೆ ತರಬೇತಿ ನೀಡುವವರು ಭಾರತೀಯ ಸೈನ್ಯದಿಂದ ನಿವೃತ್ತಿ ಹೊಂದಿರುವವರು. ಇದಿಷ್ಟೇ ಅಲ್ಲದೆ ಈ ಸಂಸ್ಥೆಗೆ ಹಾಲಿ ಸೈನ್ಯಾಧಿಕಾರಿಗಳೂ ಸಂದರ್ಶಕ ಉಪನ್ಯಾಸಕರಾಗಿ ಭೇಟಿ ನೀಡುತ್ತಾರೆ.

ಇದೆಲ್ಲಕ್ಕಿಂತಲೂ ಮುಖ್ಯವಾದ ಸಂಗತಿ ಯಾವುದೆಂದರೆ ಈ ಭೋನ್‌ಸಾಲಾ ಸಂಸ್ಥೆಯ ಆವರಣವನ್ನು ಭಜರಂಗದಳ ನಡೆಸುವ ಶಿಬಿರಗಳಿಗೂ ನೀಡುವುದು. ಈ ಶಿಬಿರಗಳಲ್ಲಿ ಹಿಂದೂತ್ವವಾದಿ ಯುವಕರಿಗೆ ಶಸ್ತ್ರಾಸ್ತ್ರ ತರಬೇತಿ ನೀಡಲಾಗುತ್ತಿತ್ತು ಎಂಬುದು ಈಗ ಬಹಿರಂಗಗೊಂಡಿದೆ. ಅಷ್ಟೇ ಅಲ್ಲ, ಮಾಲೆಗಾಂವ್ ಬಾಂಬ್ ಸ್ಫೋಟ ಸಂಭವಿಸುವ ಮುನ್ನ ಇದೇ ಸಂಸ್ಥೆಯಲ್ಲಿ ಉಪಾಧ್ಯಾಯ ಸೇರಿದಂತೆ ಹಾಲಿ ಸೈನ್ಯಾಧಿಕಾರಿಗಳು ಕನಿಷ್ಠ ಮೂರು ಬಾರಿ ಗುಪ್ತ ಸಭೆ ನಡೆಸಿದ್ದರು ಎಂಬುದು ಪೊಲೀಸರ ಆರೋಪವಾಗಿದೆ.

ದೇಶಭಕ್ತಿಯ ಹೆಸರಲ್ಲಿ ಭಯೋತ್ಪಾದನೆ; ಧರ್ಮದ ಹೆಸರಲ್ಲಿ ಅಮಾಯಕರ ಕಗ್ಗೊಲೆ ಮತ್ತು ಮಹಿಳೆಯರ ಮೇಲೆ ಅತ್ಯಾಚಾರ; ಈಗ ದೇಶದ ರಕ್ಷಣೆಯ ಹೆಸರಲ್ಲಿ ಜಾತ್ಯತೀತವಾದ ಸೈನ್ಯವನ್ನೂ ಕುಲಗೆಡಿಸುವ ಷಡ್ಯಂತ್ರ... ಇದು ಹಿಂದೂತ್ವವಾದಿ ಸಂಘ ಪರಿವಾರಿಗಳ ಅಸಲಿ ಮುಖ...


ಯಾವುದೇ ದೇಶದ ಸೇನೆಗೆ ತನ್ನ ದೇಶ, ನೆಲ ಎಂಬ ಅಭಿಮಾನ ಇದ್ದೇ ಇರುತ್ತದೆ. ಭಾರತೀಯ ಸೈನಿಕರೂ ಅದಕ್ಕೆ ಹೊರತಲ್ಲ. ಆದರೆ ದೇಶಾಭಿಮಾನ ಅಂದರೆ ಹಿಂದೂತ್ವ ಅಲ್ಲ ಎಂಬುದನ್ನು ಇವರಿಗೆ ತುರ್ತಾಗಿ ತಿಳಿಹೇಳಬೇಕಿದೆ. ■

ಒಂದು ಆಕ್ರಂದನ, ಒಂದು ಆರ್ಭಟ!

ಕಳೆದ ಆಗಸ್ಟ್-ಸೆಪ್ಟೆಂಬರ್ ತಿಂಗಳಿನಲ್ಲಿ ಒರಿಸ್ಸಾದ ಕಂಧಮಾಲ್ ಜಿಲ್ಲೆಯಲ್ಲಿ ಹಿಂದೂತ್ವ ಕೋಮುವಾದಿಗಳು ಕ್ರಿಶ್ಚಿಯನ್ ಸಮುದಾಯದ ಮೇಲೆ ನಡೆಸಿದ ಮಾರಣಹೋಮ ಇಡೀ ದೇಶವನ್ನು ತಲ್ಲಣಗೊಳಿಸಿದ್ದು ನಿಜ. ಈ ದಾಳಿಗಳ ಬಲಿಪಶುಗಳಾಗಿದ್ದವರಲ್ಲಿ ಸಿಸ್ಟರ್ ಮೀನಾ ಕೂಡ ಒಬ್ಬರು. 28 ವರ್ಷದ ಈ ಯುವ ನನ್ ಅನ್ನು ಆಗಸ್ಟ್ 25ರಂದು ಸಾಮೂಹಿಕವಾಗಿ ಹಾಗೂ ಸಾರ್ವಜನಿಕರ ಮತ್ತು ಪೊಲೀಸರ ಎದುರಿನಲ್ಲಿಯೇ ಅತ್ಯಾಚಾರವೆಸಗಿ ಅರ್ಧ ಕಿ.ಮೀ. ದೂರದವರೆಗೆ ಅವರನ್ನು ಅರೆಬೆತ್ತಲೆಯಲ್ಲಿ ಮೆರವಣಿಗೆ ಮಾಡಲಾಯಿತು.

ಈಗ ಸಿಸ್ಟರ್ ಮೀನಾ ಅವರೇ ಖುದ್ದಾಗಿ ತಮ್ಮ ಮೇಲಾದ ಅತ್ಯಾಚಾರವನ್ನು ಮಾಧ್ಯಮಗಳ ಎದುರು ಎಳೆಎಳೆಯಾಗಿ ಬಿಚ್ಚಿಟ್ಟಿದ್ದಾರೆ. ಲಾಠಿ, ಖಡ್ಗ, ತ್ರಿಶೂಲ, ಚಾಕುಗಳಿಂದ ಶಸ್ತ್ರಸಜ್ಜಿತವಾದ 50 ಜನ ಹಿಂದೂ ಕೋಮುವಾದಿಗಳು, ತಮ್ಮ ಮೇಲೆ ಎರಗಿದ್ದನ್ನು, ಸಾರ್ವಜನಿಕವಾಗಿ ಅತ್ಯಾಚಾರವೆಸಗಿದ್ದನ್ನು, ಅರ್ಧ ಕಿ.ಮೀ.ತನಕ ಅರೆಬೆತ್ತಲೆಯಾಗಿ ತನ್ನನ್ನೂ ಮತ್ತು ಫಾದರ್ ಚೆಲನ್ ಅವರನ್ನೂ ಮೆರವಣಿಗೆ ಮಾಡಿದ್ದನ್ನು, ಈ ಘಟನೆ ಪೊಲೀಸರ ಎದುರಿಗೇ ನಡೆಯುತ್ತಿದ್ದರೂ ಅವರ್‍ಯಾರೂ ತನ್ನನ್ನು ರಕ್ಷಿಸದೆ ಅತ್ಯಾಚಾರಿಗಳೊಂದಿಗೆ ಸ್ನೇಹಪೂರ್ಣವಾಗಿ ವರ್ತಿಸುತ್ತಿದ್ದುದನ್ನು, ತನ್ನನ್ನು ಮತ್ತು ಫಾದರ್ ಚೆಲನ್ ಅವರನ್ನೂ ಜೊತೆಯಾಗಿ ಕಟ್ಟಿ ಜೀವಂತವಾಗಿ ಸುಡುವುದಕ್ಕಾಗಿ ಹಿಂದೂತ್ವವಾದಿಗಳು ಪ್ರಯತ್ನಿಸುತ್ತಿದ್ದುದನ್ನು, ಎಲ್ಲಾ ನಡೆದ ಮೇಲೆ ತನ್ನ ದೂರನ್ನು ಸ್ವೀಕರಿಸದಿದ್ದುದನ್ನು- ಹೀಗೆ ಎಳೆಎಳೆಯಾಗಿ ಎಲ್ಲವನ್ನೂ ಈಗ ಮಾಧ್ಯಮಗಳೆದುರು ಬಿಚ್ಚಿಟ್ಟಿದ್ದಾರೆ. ಈಗಾಗಲೇ ಹಿಂದೂತ್ವ ಭಯೋತ್ಪಾದಕರಿಂದ ಅತ್ಯಾಚಾರಕ್ಕೊಳಗಾಗಿರುವ ಆಕೆ ಮತ್ತೆ ಒರಿಸ್ಸಾ ಪೊಲೀಸರಿಂದ ಬಲಿಪಶುವಾಗಲು ಸಿದ್ಧವಿಲ್ಲ, ಘಟನೆಯ ಕುರಿತಂತೆ ಸಿಬಿಐ ತನಿಖೆಯಾಗಲಿ ಎಂದು ಮನವಿ ಮಾಡಿಕೊಂಡಿದ್ದಾರೆ. ಇದು ಅತ್ಯಾಚಾರಕ್ಕೊಳಗಾದ ಮಹಿಳೆಯೊಬ್ಬಳ ಆಕ್ರಂದನ.

ಇನ್ನೊಂದೆಡೆಗೆ ಸಂಘಪರಿವಾರದ ಒಂದು ಮಹಿಳಾ



ತುಂಡಾಗಿರುವ ರಾಷ್ಟ್ರೀಯ ಸೇವಿಕಾ ಸಮಿತಿಯು "ಸಿಸ್ಟರ್ ಮೀನಾ ಸುಳ್ಳು ಹೇಳುತ್ತಿದ್ದಾಳೆ. ಇದರಿಂದ ಭಾರತೀಯ ಭವ್ಯ-ದಿವ್ಯ ಸಂಸ್ಕೃತಿಗೆ ಮಸಿ ಬಳಿದಂತಾಗುತ್ತದೆ. ಸಿಸ್ಟರ್ ಮೀನಾಳನ್ನು ಕೂಡಲೇ ಬಂಧಿಸಬೇಕು" ಎಂದು ಆಗ್ರಹಿಸಿದೆ. ಇದು ಅತ್ಯಾಚಾರಕ್ಕೊಳಗಾಗದ ಆದರೆ ಅತ್ಯಾಚಾರಿಗಳ ಪರವಾಗಿ ನಿಂತ ಮಹಿಳೆಯರ ಆರ್ಭಟ.

ಅಸಲಿಗೆ, ತನ್ನನ್ನು ಸಾಮೂಹಿಕವಾಗಿ ಅತ್ಯಾಚಾರ ಮಾಡಲಾಗಿದೆ ಎಂದು ಸುಳ್ಳು ಹೇಳುವ ದರ್ದು ಸಿಸ್ಟರ್ ಮೀನಾಗೆ ಏನಿದೆ? ಈಗ ಭಾರತದ ಭವ್ಯ-ದಿವ್ಯ ಸಂಸ್ಕೃತಿಗೆ ಮಸಿ ಬಳಿದಂತಾಗುತ್ತದೆ ಎಂದು ಅತ್ಯಾಚಾರಕ್ಕೊಳಗಾದವಳನ್ನೇ ಬಂಧಿಸಲು ಆಗ್ರಹಿಸುತ್ತಿದ್ದಾರಲ್ಲ, ಅವರಿಗೆ ಅತ್ಯಾಚಾರ ಮಾಡುವಾಗ, ಅರೆಬೆತ್ತಲೆಯಲ್ಲಿ ಮೆರವಣಿಗೆ ಮಾಡುವಾಗ, ಜೀವಂತವಾಗಿ ಸುಡುವಾಗ ಭಾರತದ ದಿವ್ಯ-ಭವ್ಯ ಸಂಸ್ಕೃತಿಯ ನೆನಪಾಗಲಿಲ್ಲವೆ? ಮಹಿಳೆ ತಾಯಿಯ ಸಮಾನ ಎಂದು ಹಗಲಿರುಳೂ ಬೊಬ್ಬಿಡುತ್ತಾರಲ್ಲ, ಆ ಮಾತೂ ನೆನಪಾಗಲಿಲ್ಲವೆ?

ನೆನಪಿರಲಿ, ಹಿಂದೂ ಕೋಮುವಾದಿ ಭಯೋತ್ಪಾದಕರು ಒರಿಸ್ಸಾದ ಕಂಧಮಾಲ್‌ನಲ್ಲಿ ಹಚ್ಚಿದ ಬೆಂಕಿಯಲ್ಲಿ 60ಕ್ಕೂ ಹೆಚ್ಚು ಅಮಾಯಕರು ಸುಟ್ಟು ಕರಕಲಾಗಿದ್ದಾರೆ. 18,000ಕ್ಕೂ ಹೆಚ್ಚು ಜನರು ಗಂಭೀರವಾಗಿ ಗಾಯಗೊಂಡಿದ್ದಾರೆ. 4500 ಮನೆಗಳು ಭಸ್ಮವಾಗಿವೆ. 50,000ಕ್ಕೂ ಹೆಚ್ಚು ಜನರು ನಿರಾಶ್ರಿತರಾಗಿದ್ದಾರೆ. ನೆನಪಿರಲಿ ಇದು ಸುನಾಮಿಯಿಂದಾದ ಅನಾಹುತವಲ್ಲ, ಸಂಘಪರಿವಾರದ 'ದೇಶರಕ್ಷಕರು' ನಡೆಸಿದ ಅನಾಹುತ.

ಹಮಾರಾ ಭಾರತ್ ಮಹಾನ್ ■

ಪದ್ಮಪ್ರಿಯ ಹತ್ಯೆ: ಇನ್ಸ್‌ಪೆಕ್ಟರ್ ಆಚಾರ್ ಬಲಿಪಶು



ಉಡುಪಿಯ ಬಿಜೆಪಿ ಶಾಸಕ ರಘುಪತಿಭಟ್ಟನ ಅಧಿಕಾರ ಮದದ ಪಿತ್ಥ ನೆತ್ತಿಗೇರಿದಂತಿದೆ. ಮೊದಲು ಇವನ ಕಚ್ಚೇಹರುಕ ಬುದ್ಧಿಗೆ ಪತ್ನಿ ಪದ್ಮಪ್ರಿಯ ಬಲಿಯಾದಳು.

ಆಮೇಲೆ ಅದರಲ್ಲಿ ತನ್ನ ತಪ್ಪನ್ನು ಮುಚ್ಚಿಡಲು ಗೆಳೆಯ ಅತುಲ್‌ರಾವ್‌ನನ್ನೇ ಬಲಿಕೊಟ್ಟಿದ್ದ ರಘುಪತಿಭಟ್ಟ.

ಈಗ ಇದೇ ಭಟ್ಟ ಇನ್ನೊಂದು ಹೆಜ್ಜೆ ಮುಂದೆಹೋಗಿ ಮಣಿಪಾಲ್ 'ಪೊಲೀಸ್ ಸರ್ಕಲ್ ಇನ್ಸ್‌ಪೆಕ್ಟರ್ ಬಿ. ಗಣಪತಿ ಆಚಾರ್‌ರನ್ನು ಬಲಿ ತೆಗೆದುಕೊಂಡಿದ್ದಾನೆ.

ಈ ಬಿಜೆಪಿಗಳು ತಮ್ಮ ಸ್ವಾರ್ಥಕ್ಕಾಗಿ ಯಾರನ್ನು ಬೇಕಾದರೂ ಮುಗಿಸುತ್ತಾರೆನ್ನಲು ಗಣಪತಿ ಆಚಾರ್ ವರ್ಗಾವಣೆ ವಿವಾದವೇ ಸಾಕ್ಷಿಯಾಗಿದೆ.


ಕಳೆದೆರಡು ತಿಂಗಳುಗಳಿಂದ ಕರ್ನಾಟಕದ ಉನ್ನತ ಪೊಲೀಸ್ ಆಫೀಸರ್‌ಗಳಿಂದ ಹಿಡಿದು ಪೇದೆಗಳವರೆಗೂ ಲಂಚ ಕಿತ್ತು ವರ್ಗಾ ದಂಧೆ ನಡೆಸುತ್ತಿದ್ದ ಯಡ್ಡಿ ಮಗ ವಿಜಯೇಂದ್ರನ ಆಟಾಟೋಪವನ್ನು ಇಡೀ ರಾಜ್ಯದ ಜನತೆ ಗಮನಿಸದೆ. ಅದೇ ಗದ್ದಲದಲ್ಲಿ ಮಣಿಪಾಲ ಪೊಲೀಸ್ ಇನ್ಸ್‌ಪೆಕ್ಟರ್ ಬಿ. ಗಣಪತಿ ಆಚಾರರನ್ನು ಚಾಮರಾಜನಗರ ಕೆಪಿಟಿಸಿಎಲ್‌ಗೆ ಎತ್ತಂಗಡಿ ಮಾಡಿದ್ದು ಯಾರ ಗಮನಕ್ಕೂ ಬರಲಿಲ್ಲ.

ವಾಸ್ತವವಾಗಿ ಆಚಾರ್ ಲಂಚ ಕೊಟ್ಟು ಈ ವರ್ಗ ಮಾಡಿಸಿಕೊಂಡಿರಲಿಲ್ಲ, ಅಸಲಿಗೆ ಅವರಿಗೆ ವರ್ಗಾ ಬೇಕೂ ಇರಲಿಲ್ಲ, ಆದರೆ ಅವರನ್ನು ಮಣಿಪಾಲ ಸ್ಟೇಷನ್‌ನಿಂದ ಎತ್ತಾಕಿದ್ದೇಕೆಂದರೆ ಪದ್ಮಪ್ರಿಯ ನಿಗೂಢ ಸಾವಿನ ತನಿಖೆಯ ಬಲೆಗೆ ಬಿಜೆಪಿ ಶಾಸಕ ರಘುಪತಿಭಟ್ ಸಿಕ್ಕಿ ಬೀಳಬಾರದೆಂದೇ ಈ ವರ್ಗಾ ಆಗಿತ್ತು. ಬೇರೆ ಇನ್ಯಾರದರೂ ಆಗಿದ್ದಿದ್ದರೆ ಸುಮ್ಮನೆ ವರ್ಗಾ ಒಪ್ಪಿಕೊಂಡು ತೋರಿಸಿದ ಜಾಗಕ್ಕೆ ಹೋಗುತ್ತಿದ್ದರೇನೋ? ಆದರೆ ಆಚಾರ್ ಗಟ್ಟಿ ಮನುಷ್ಯ. ತಮ್ಮ ವರ್ಗಾ ಆದೇಶ ಪ್ರಶ್ನಿಸಿ ಕೆಎಟಿಗೆ ಅಪೀಲ್ ಹೋಗಿದ್ದಾರೆ. ಜೊತೆಗೆ ಪದ್ಮಪ್ರಿಯ ಸಾವಿನ ತನಿಖೆ ಸಂದರ್ಭದಲ್ಲಿ ಶಾಸಕ ರಘುಪತಿಭಟ್ಟ ಹಸ್ತಕ್ಷೇಪ ಮಾಡಿ ತನಿಖೆಯ ಹಾದಿ ತಪ್ಪಿಸಲು ಯತ್ನಿಸಿದ ಬಗ್ಗೆಯೂ ಆರೋಪಿಸಿದ್ದಾರೆ.

ಕೋರ್ಟ್ ಈಗ ಇದನ್ನು ಗಂಭೀರವಾಗಿ ಪರಿಗಣಿಸಿದೆ. ಮಣಿಪಾಲ ಠಾಣೆಯ **Station House Dairy** ಹಾಜರು ಮಾಡುವಂತೆ ಆದೇಶಿಸಿದೆ.

ಭಟ್ಟನ ಥರ್ಡ್ ಡಿಗ್ರಿ ಬುದ್ಧಿ

ಪದ್ಮಪ್ರಿಯಾ ಸಾವಿಗೂ ಮೊದಲೇ ಜೂನ್ 14ರಿಂದಲೇ ಅತುಲ್ ಪೊಲೀಸರ ವಶದಲ್ಲಿದ್ದ. ನಂತರ ಪದ್ಮಪ್ರಿಯಾ ಆತ್ಮಹತ್ಯೆಯಾಗಿ ಅದರ ಆರೋಪ ಅತುಲ್‌ರಾವ್ ಮೇಲೆ ಬರುವಂತೆ ರಾಜ್ಯ ಪೊಲೀಸರು ಸಂಚು ನಡೆಸಿದ್ದರು. ಈ ನಡುವೆ ತನ್ನ ಹೆಂಡತಿ ನಾಪತ್ತೆಯಾಗಿದ್ದಾಳೆಂದು ಭಟ್ಟ ಮಣಿಪಾಲ ಠಾಣೆಯಲ್ಲಿ ದೂರು ಕೊಟ್ಟಿದ್ದನಲ್ಲ, ಹಾಗಾಗಿ ಬಂಧಿತ ಅತುಲ್ ಕೆಲದಿನ ಮಣಿಪಾಲ ಪೊಲೀಸ್ ಲಾಕಪ್‌ನಲ್ಲಿದ್ದ. ಆಗ ಶಾಸಕ ರಘುಪತಿಭಟ್ಟ ಇನ್ಸ್‌ಪೆಕ್ಟರ್ ಗಣಪತಿಗೆ ಒಂದು ಸಂದೇಶ (ಆದೇಶ) ನೀಡಿ ತನ್ನ ಗಮನಕ್ಕೆ ತಾರದೇ ತನಿಖೆ, **FIR** ಏನನ್ನೂ ಮಾಡಕೂಡದೆಂದೂ ಹೇಳಿದ್ದಾನೆ.



ಭಟ್ಟನಿಗೆ ಸಂಬಂಧಿಸಿರದ ವಿಚಾರ ಅದು. ಆದರೂ ಸರ್ಕಾರ ನಮ್ಮದು, ಗೃಹಸಚಿವನೂ ನಮ್ಮವನೇ ಎಂಬ ಅಹಮ್ಮಿನಿಂದ ರಘುಪತಿ ಭಟ್ ಈ ರೀತಿ ಪೊಲೀಸ್ ತನಿಖೆಯಲ್ಲಿ ತಲೆ ಹಾಕಿದ್ದಾನೆ. ಆದರೆ ಈ ಗಣಪತಿ ಆಚಾರ್ ಸ್ವಲ್ಪ ಚುರುಕು ಬುದ್ಧಿಯ ಮನುಷ್ಯ. ರಘುಪತಿ ಭಟ್ಟ ಯಾವಾಗಲೆಲ್ಲ ಫೋನ್‌ಮಾಡಿ ತರಲೆ ತೆಗೆಯುತ್ತಿದ್ದನೋ ಅದನ್ನೆಲ್ಲಾ ಸ್ಟೇಷನ್ ಹೌಸ್ ಡೈರಿಯೊಳಗೆ ದಾಖಲಿಸಿಬಿಟ್ಟಿದ್ದರು.

ಅತುಲ್ ಮಣಿಪಾಲ ಸ್ಟೇಷನ್ನಿನ ಲಾಕಪ್‌ನಲ್ಲಿದ್ದಾಗ ಅವನಿಗೆ ಥರ್ಡ್ ಡಿಗ್ರಿ ಟ್ರೀಟ್‌ಮೆಂಟ್ ಕೊಡುವಂತೆ ಭಟ್ಟ ಒತ್ತಾಯಿಸಿದ್ದಾನೆ. ಅಂದರೆ ಬರಿ ಅಂಡರ್‌ವೇರ್‌ನಲ್ಲಿ ನಿಲ್ಲಿಸಿ ಸರಿಯಾಗಿ ಊಟ, ನೀರೂ ಕೊಡದೆ ಬಯ್ದು ಹೊಡೆಯುವ ಹಿಂಸಾ ವಿಧಾನ ಅದು. ಆದರೆ ಭಟ್ಟ ಎಷ್ಟೇ ಹಠ ಮಾಡಿದರೂ ಗಣಪತಿ ಆಚಾರ್ ಕಿವಿಗೊಟ್ಟಿಲ್ಲ. ಅಂದರೆ ಅದರರ್ಥ ಆಚಾರರವರು ಅತುಲ್‌ಗೆ ರಾಜಾತಿಥ್ಯ ನೀಡಿದರು ಅಂತಲ್ಲ, ಬದಲಾಗಿ ಅವರು ಬೇರೆಲ್ಲ ವಿಚಾರಣಾಧೀನ ಕೈದಿಗಳಂತೆಯೇ ಅತುಲ್‌ನನ್ನೂ ಪರಿಗಣಿಸಿದ್ದರು. ವಿಶೇಷ ಹಿಂಸೆಯೂ ಇಲ್ಲ , ಆತಿಥ್ಯವೂ ಇಲ್ಲದ ಬಂಧನ ಅದಾಗಿತ್ತು.

ಇದು ಕಾನೂನುಬದ್ಧವಾಗೇ ಇತ್ತಾದರೂ ರಘುಪತಿ ಭಟ್ಟನ ಕ್ರೋಧ ಅದನ್ನು ಮೀರಿದ್ದಾಗಿತ್ತು. ಭಟ್ಟನ ಈ ಸಿಟ್ಟಿನ ಬೆಂಕಿಗೆ ತುಪ್ಪ ಸುರಿಯುವ ಇನ್ನೊಂದು ಬೆಳವಣಿಗೆ ಆಗಲೇ ನಡೆಯಿತು.

ಇನ್ಸ್‌ಪೆಕ್ಟರ್ ಆಚಾರ್ ಪದ್ಮಪ್ರಿಯಾ ಆತ್ಮಹತ್ಯೆ ಪ್ರಕರಣದ ಬಗ್ಗೆ ಎಫ್‌ಐಆರ್ ಹಾಕುವಾಗ ಗಂಡ ರಘುಪತಿ ಭಟ್, ಉಡುಪಿ ಡಿಸಿ ಹಾಗೂ ರಾಜ್ಯದ ಗೃಹ ಕಾರ್ಯದರ್ಶಿಗಳ ಹೆಸರನ್ನು ಸೇರಿಸಿ ಅವರೆಲ್ಲ ಪ್ರತಿವಾದಿಗಳೆಂದು **(Respondents)** ದಾಖಲಿಸಿಬಿಟ್ಟರು.

ಭಟ್ಟನಿಗೆ ಸಿಟ್ಟು ಉಕ್ಕಿ ಬಂದಿದ್ದೇ ಆಗ. ಪದ್ಮಪ್ರಿಯಾ ನಾಪತ್ತೆಯಾದ ದಿನದಿಂದಲೂ ಅದರಲ್ಲಿ ತನ್ನ ಕೈವಾಡವೇನೂ ಇಲ್ಲ ಎಂತಲೇ ನಾಟಕ ಮಾಡಿಕೊಂಡು ಬಂದಿದ್ದ ಭಟ್ಟ. ಆದರೆ ಜೂನ್ 10ರಂದು ಪದ್ಮಪ್ರಿಯಾ ಮನೆಯಿಂದ ಹೊರಟಾಗ ಜೊತೆಯಲ್ಲಿ ಮೂರು ದೊಡ್ಡ ಸೂಟ್‌ಕೇಸ್‌ಗಳನ್ನು ತೆಗೆದುಕೊಂಡು ಹೋಗಿದ್ದಳು. ಭಟ್ಟನೂ ಅವತ್ತು ಮನೇಲಿ ಇದ್ದ. ಆಗದನ್ನು ಭಟ್ಟ ನೋಡಿರದೇ ಇರುತ್ತಾನಾ?

ದೆಹಲಿಗೆ ಹೋದಾಗಲೂ ಅಷ್ಟೇ... ಭಟ್ಟನ ಜೊತೆಯಲ್ಲಿ ಕಾರ್ಕಳದ ಮಾಜಿ ಶಾಸಕ ಸುನೀಲ್ ಕುಮಾರನೂ ಇದ್ದನಾದರೂ ಸಿಓಡಿಯವರು ಇದುವರೆಗೆ ಸುನೀಲ್‌ಕುಮಾರನ ಹೇಳಿಕೆ ಪಡೆದಿಲ್ಲ, ಅಂದರೆ ಪದ್ಮಪ್ರಿಯಾ ಆತ್ಮಹತ್ಯೆ ಅಥವಾ ಹತ್ಯೆ ಸಂಭವಿಸುವ ಮೊದಲು ಭಟ್ಟ ಮತ್ತು ಸುನೀಲ್‌ಕುಮಾರ್ ಅವಳನ್ನು ಭೇಟಿಯಾಗಿ ಮಾತನಾಡಿಸಿ ಬೆದರಿಸಿ ಬಂದಿದ್ದಾರೆ. ಆದರೆ ಸಿಓಡಿ ತನಿಖಾಧಿಕಾರಿ ಗೋವಿಂದಯ್ಯ ಅವರ ಬಗ್ಗೆ ಗಮನವನ್ನೇ ಕೊಟ್ಟಿರಲಿಲ್ಲ. ಅದಕ್ಕೂ ಮುನ್ನ ಅತುಲ್‌ನನ್ನು ಮೊದಲ ಬಾರಿಗೆ ಬಂಧಿಸಿದಾಗ ಅವನನ್ನು ಕೋರ್ಟ್‌ಗೆ ಎಳೆತನ್ನಿ ಅಂದಿದ್ದನಂತೆ ಭಟ್ಟ. ಆದರೆ ಜನಜಂಗುಳಿ, ಮೀಡಿಯಾದವರ ರಗಳೆ ನೆನೆದು ಗಣಪತಿ ಆಚಾರ್ ಅತುಲ್‌ನನ್ನು ಕೋರ್ಟ್‌ಗೆ ಕರೆತರದೆ ನೇರ ನ್ಯಾಯಾಧೀಶರ ಮನೆಗೆ ಹಾಜರುಪಡಿಸಿದ್ದರು.

ಅದರಿಂದಾಗಿ ಅತುಲ್‌ಗೆ ಅವಮಾನವಾಗಲಿ ಅಂತ ಬಯಸಿದ್ದ ಭಟ್ಟನಿಗೆ ನಿರಾಶೆಯಾಗಿತ್ತು. ನಂತರ ಭಟ್ಟ ಸೆಪ್ಟೆಂಬರ್ 2ರವರೆಗೂ ಅತುಲ್‌ಗೆ ಜಾಮೀನು ಸಿಗದಂತೆ ನೋಡಿಕೊಂಡ. ಅತುಲ್ ಮೂರು ತಿಂಗಳೂ ಜೈಲಿನಲ್ಲಿ ಇರುವಂತೆ ಸಂಚು ಮಾಡಿ ಮಂಗಳೂರು ಜೈಲಿನಲ್ಲಿದ್ದ ಕೆಲ ಚಿಲ್ಲಿ ಖದೀಮರ ಕೈಲಿ ಅತುಲ್ ಮೇಲೆ ಹಲ್ಲೆಯನ್ನು ಮಾಡಿಸಿದ್ದ. ಹೀಗೆ ಸರ್ಕಾರ, ಸರ್ಕಾರಿ ಲಾಯರ್‌ಗಳು, ಪೊಲೀಸ್ ಅಧಿಕಾರಿಗಳೆಲ್ಲಾ ಭಟ್ಟನ ರಕ್ಷಣೆಗೆ ನಿಂತಮೇಲೂ ಒಬ್ಬ ಜುಜುಬಿ ಸರ್ಕಲ್ ಇನ್ಸ್‌ಪೆಕ್ಟರ್ ಗಣಪತಿ ಆಚಾರ್ ತನ್ನ ಇಚ್ಛೆಯಂತೆ ನಡೆಯಲಿಲ್ಲವಲ್ಲ ಎಂಬ ಆಕ್ರೋಶ ಭಟ್ಟನಿಗೆ. ಈಗ ಗಣಪತಿ ಆಚಾರ್ ವರ್ಗಾವಣೆ ಆಗಿರುವುದು ಅದೇ ಕಾರಣಕ್ಕೆ.

ರಘುಪತಿ ಭಟ್ಟ ನಿಜಕ್ಕೂ ನಿರಪರಾಧಿಯಾಗಿದ್ದಿದ್ದರೆ ಯಾಕೆ ಕಾನೂನಿಗೆ ಭಯಪಡುತ್ತಿದ್ದಾನೆ? ■

ಕಾಂಗ್ರೆಸ್ ಸತ್ತ ಆರು ತಿಂಗಳಿಗೆ ಪೋಸ್ಟ್‌ಮಾರ್ಟಮ್ಮಾ!


ಥೂತ್ತೇರಿ

ಯಾಹೂ

ಕಾಂಗ್ರೆಸ್ ಮತ್ತು ಜೆಡಿಎಸ್ ಪಾರ್ಟಿಗಳು ವಿಲೀನದ ಪ್ರಸ್ತಾಪ ಮುಂದಿಟ್ಟು ಪ್ರಸ್ತುದ ದಿನಕ್ಕಾಗಿ ಓಡಾಡುತ್ತಿರುವಾಗಲೇ ಮಲೆನಾಡಿನ ಕಡೆಯ ಮುದಿ ಪ್ರೇಮಿಗಳಿಬ್ಬರು ಅಪ್ಪಿಕೊಂಡು ಹಸ್ತಲಾಘವ ಮಾಡಿಕೊಂಡ ಸುದ್ದಿ ಬಂದಿದೆಯಲ್ಲಾ. ತಾತ್ಕಾಲಿಕವಾಗಿ ಕಡುವೈರಿಗಳಾಗಿ ಮಾರ್ಪಟ್ಟು, ಯಾವುದೋ ಕೆಟ್ಟ ಗಳಿಗೆಯಲ್ಲಿ ಹಳಿಯದನ್ನೆಲ್ಲಾ ಮರೆತು ಅಪ್ಪಿಕೊಂಡು ಮುದ್ದಾಡುವ ಕಾಗೋಡು ತಿಮ್ಮಪ್ಪ ಮತ್ತು ಬಂಗಾರಿ ಎಂಬ 'ದಂಪತಿ' ಕಳೆದೊಂದು ದಶಕದಿಂದಲೂ ಡೈವರ್ಸ್‌ಗೆ ಅರ್ಜಿ ಹಾಕಿ ಕಾಯುತ್ತ ಪರಸ್ಪರ ಕಂಡಕೂಡಲೇ ಮೂತಿ ತಿರುವಿಕೊಂಡೇ ಕಾಲಹಾಕಿದ್ದರಂತಲ್ಲಾ. ಇವರ ಮಂಗಾಟ ನೋಡಿದ ಮತದಾರರು ಪರ್ಮನೆಂಟಾಗಿ ಇಬ್ಬರಿಗೂ ಡೈವರ್ಸ್ ಕೊಟ್ಟೇಬಿಟ್ಟರಂತಲ್ಲಾ. ಇದರಿಂದ ಕಂಗಾಲಾದ ಭಗ್ನಪ್ರೇಮಿಗಳು ಇದ್ದಕ್ಕಿದ್ದಂತೆ ವಿಲೀನಗೊಂಡು ಆಲಂಗಿಸಿಕೊಂಡು "ಇನ್ನು ಮುಂದೆ ಯಾವುದೇ ಕಾರಣಕ್ಕೂ ನಾವು ಅಗಲುವುದು ಬೇಡ. ನಮ್ಮ ಹೋರಾಟದ ಗುರಿ ಒಂದೇ ಆಗಿರಲಿ. ನಾನು ಹರತಾಳು ಹಾಲಪ್ಪನ ವಿರುದ್ಧ ಹೋರಾಡುತ್ತೇನೆ. ನೀನು ಬೇಳೂರು ಗೋಪಾಲಕೃಷ್ಣನ ವಿರುದ್ಧ ಹೋರಾಡು" ಎಂದು 'ಬಂ' ಹೇಳಿದ ಕೂಡಲೇ ಕಾಗೋಡು ತಿಮ್ಮಪ್ಪ ಸುಸ್ತಾದ ಉಸಿರುಬಿಡುತ್ತ "ಇಬ್ಬರನ್ನು ತಂದವನು ನೀನೇ ಅಲ್ಲವೆ?" ಎಂದರಂತಲ್ಲಾ, ಥೂತ್ತೇರಿ!

* * * * * *

'ಬಂ' ಮುಖ್ಯಮಂತ್ರಿಯಾಗಿದ್ದಾಗ ಕಂಡ ಕಂಡವರಿಗೆಲ್ಲಾ ರಾಜ್ಯೋತ್ಸವ ಪ್ರಶಸ್ತಿಗಳನ್ನು "ತಗೊ, ನಿಂಗೊಂದು ತಗೊ, ತಗೋ ನಿಂಗೊಂದು" ಎಂದು ಹಂಚಿ ಕಡೆಗೆ "ಅರ್ಹರಿಗೆ ಮುಂದಿನ ಬಾರಿ ಕೊಡುತ್ತೇನೆ" ಎಂದುಬಿಟ್ಟಿದ್ದರಂತಲ್ಲಾ. ಅದೇ ರೀತಿ ಎಡ್ಡೂರಿಯಿಂದ ರಾಜ್ಯೋತ್ಸವ ಪಡೆದವರ ಪೈಕಿ ಕನಿಷ್ಠ ಅರ್ಧದಷ್ಟೂ ಜನ ಅನರ್ಹರಾಗಿದ್ದು, ಅವರೆಲ್ಲಾ ಆಯ್ಕೆಗೊಳ್ಳಲು ಕಾರಣ ಕೇವಲ ಚೆಡ್ಡಿ ಲಾಠಿಯೇ ಮಾನದಂಡವಾಗಿತ್ತೆಂದು ಚೆಡ್ಡಿ ಕಂಡರಾಗದವರೆಲ್ಲಾ ಆಡಿಕೊಳ್ಳುತ್ತಿದ್ದಾರಂತಲ್ಲಾ. ರಾಜ್ಯೋತ್ಸವ ಪ್ರಶಸ್ತಿಯ ಪುರಸ್ಕಾರವಾದ ಎರಡತ್ತು ಗ್ರಾಂ ಚಿನ್ನ ಮತ್ತು ಲಕ್ಷ ರೂ.ಗಳ ಚೆಕ್ ಹಿಡಿದ ಚೆಡ್ಡಿಗಳು "ಅಂತೂ ನಮ್ಮ ಹೋರಾಟಕ್ಕೆ ಸಿಕ್ಕ ಜಯ ಇದು. ಇದುವರೆಗೂ ಆ ಹಾಳು ಕಾಂಗ್ರೆಸ್ ಮತ್ತು ದಳದ ಸರ್ಕಾರಗಳು ನಮ್ಮವರನ್ನು ರಾಜ್ಯೋತ್ಸವ ಪ್ರಶಸ್ತಿಯಿಂದ ಹೊರಗಿಟ್ಟಿದ್ದರು. ಈ ಬಾರಿ ಕನಿಷ್ಠ ಅರ್ಧ ಜನರಿಗೆ ಪ್ರಶಸ್ತಿ ಸಿಕ್ಕಿದೆ. ಮುಂದಿನ ಬಾರಿಗೆ ಎಲ್ಲಾ ಪ್ರಶಸ್ತಿಗಳೂ ನಮ್ಮವರಿಗೇ ಸಿಗುವ ಷಡ್ಯಂತ್ರ ಮಾಡಬೇಕು" ಎಂದುಕೊಂಡು ಹೋದವಂತಲ್ಲಾ, ಥೂತ್ತೇರಿ!



* * * * * *

ಅಪ್ಪ ಸತ್ತ ಆರು ತಿಂಗಳಿಗೆ ಅಂಕೇಗೌಡ ಹುಟ್ಟಿದ ಎಂಬ ಗಾದೆ ಮಾತಿನಂತೆ, ಕಾಂಗ್ರೆಸ್ ಸೋತು ಆರು ತಿಂಗಳಾದ ಬಳಿಕ ಪಾರ್ಟಿ ಏಕೆ ಸೋಲನುಭವಿಸಿತು ಎಂಬ ಸತ್ಯಶೋಧನಾ ಸಮಿತಿಯನ್ನು ಡಿಕೆಶಿ ಮಾಡಿಲಿದ್ದಾನಂತಲ್ಲಾ. ಎಲ್ಲಾ ಸರಿ, ಪಾರ್ಟಿ ಸೋತ ವಾರಕ್ಕೆ ಸತ್ಯ ಕಂಡುಹಿಡಿಯಬಹುದಾಗಿದ್ದ ಕಾಂಗ್ಯೆಗಳು ಈ ಆರು ತಿಂಗಳು ಏನು ಮಾಡುತ್ತಿದ್ದವು ಎಂಬುದು ಕುತೂಹಲಕರ ಅಲ್ಲವೆ. ಆದರೂ ನಾವು ಕಂಡ ಕೆಲವು ಸತ್ಯಗಳನ್ನು ಹೇಳುವುದರಿಂದ ಡಿಕೆಶಿ ಸತ್ಯಶೋಧನಾ ಸಮಿತಿಗೆ ಒಂದಿಷ್ಟು ಸಹಾಯವಾಗಬಹುದಲ್ಲಾ. ಮೊದಲನೆಯದ್ದಾಗಿ, ಎಂದೂ ಚುನಾವಣೆ ಗೆಲ್ಲದ ಪೃಥ್ವಿರಾಜ್ ಚವ್ಹಾಣ್ ಎಂಬ ಬ್ರೋಕರ್ ಟಿಕೆಟ್ ಆಕಾಂಕ್ಷಿಗಳಿಂದ ಕಾಸು ಕಿತ್ತು ಟಿಕೆಟ್ ಹಂಚಿದ್ದು, ಇದರಲ್ಲಿ ಅರ್ಧ ಪಾಲನ್ನು ತಾನು ಇಟ್ಟುಕೊಂಡು, ಇನ್ನರ್ಧವನ್ನು ಸ್ಥಳೀಯ ಅಧ್ಯಕ್ಷರಿಗೆ ಹಂಚಿ ಅವರು ಹೇಳಿದವರಿಗೆ ಟಿಕೆಟ್ ಕೊಟ್ಟಿದ್ದು. ಇದೆಲ್ಲಕ್ಕಿಂತಲೂ ಬಿಜೆಪಿಗಳು ದುರ್ಬಲ ಕ್ಯಾಂಡೇಟ್ ಹಾಕಿಸಿಕೊಳ್ಳಲು ಕಾಂಗ್ಯೆನವರನ್ನೇ ಹಿಡಿದು ಕಾಸು ಕೊಟ್ಟು ತಮ್ಮ ಎದುರು ಕೌನ್ಸಿಲರ್ ಚುನಾವಣೆಗೂ ಯೋಗ್ಯರಲ್ಲದವರಿಗೆ ಟಿಕೆಟ್ ಕೊಡಿಸಿದ್ದು ಮತ್ತು ಇಡೀ ರಾಜ್ಯದಲ್ಲಿ ಎಡ್ಡೂರಿ ಎದುರು ಒಬ್ಬ ಲೀಡರ್ ಇಲ್ಲದಂತೆ ನೋಡಿಕೊಂಡು ಎಸ್ಸೆಂ ಕೃಷ್ಣನಿಗೂ ಕ್ಷೇತ್ರವಿಲ್ಲದಂತೆ ನೋಡಿಕೊಂಡಿದ್ದು ಇದೆಲ್ಲ ಡಿಕೆಶಿ ಸತ್ಯಶೋಧನಾ ಸಮಿತಿ ಮುಸುಡಿಗೆ ಸಹಾಯವಾಗಬಹುದಂತಲ್ಲಾ, ಥೂತ್ತೇರಿ!!

* * * * * *

ಕುಮಾರಸ್ವಾಮಿಯವರಿಗೆ ಫೋನ್ ಮಾಡಿ ಅಭಿನಂದಿಸಬೇಕೆನಿಸಿತಲ್ಲಾ, ಕೂಡಲೇ ಫೋನ್ ಮಾಡಲಾಗಿ ರಿಂಗಾಯ್ತು.

ರಿಂಗ್ ಟೋನ್: "ನಿನ್ನಾ ಪೂಜೆಗೆ ಬಂದೇ ಮಾದೇಶ್ವರ, ನಮ್ಮಾ ಕರುಣಾದಿ ಕಾಯೋ ಮಾದೇಶ್ವರಾ"

"ಹಲೋ ಯಾರೂ?"

"ನಾನು ಸಾರ್ ಯಾಹೂ"

"ಏನೇಳಿ ಯಾಹೂ ಅವ್ರರೆ?"

"ಅಭಿನಂದನೆಗಳು ಸಾರ್."

"ಥ್ಯಾಂಕ್ಸ್. ಅಂತೂ ನಾನು ಮತ್ತು ನಮ್ಮ ತಂದೆ ಹೋರಾಟ ಮಾಡಿದಕ್ಕೆ ಪ್ರತಿಫಲವಾಗಿ ಶಾಸ್ತ್ರಿ ಭಾಸೆ ಆಯ್ತು."

"ಥೂ, ಅದಲ್ಲಾ ಸಾರ್ ನೀವು ಜೆಡಿಎಸ್ ಅಧ್ಯಕ್ಷರಾದರಲ್ಲಾ ಅದಕ್ಕೆ ಅಭಿನಂದನೆಗಳು."

"ನಮ್ಮ ತಂದೆ ವಿರೋಧಿಸಿದ್ರೂ ಆಗಬೇಕಾಯ್ತು."

"ಅಂದ್ರೆ ಒಳಮೀಸಲನ್ನ ವಿರೋಧಿಸಿದ್ರಾ ಸಾರ್?"

"ಒಂಥರಾ ಅಂಗೆ ಅನ್ನಬವ್ಪುದು. ನಾನು ರಾಷ್ಟ್ರೀಯ ಅಧ್ಯಕ್ಷನಾಗಿದ್ದೀನಿ, ನೀನು ರಾಜ್ಯಾಧ್ಯಕ್ಷ. ಆಗದು ಬೇಡ. ಜನ ನಮ್ಮ ಕುಟುಂಬದ ಬಗ್ಗೆ ತಪ್ಪು ತಿಳಕೊಳ್ತರೆ ಅಂತ ವಿರೋಧ ವ್ಯಕ್ತ ಮಾಡಿದ್ರು ಕಂದ್ರಿ. ಆದ್ರು ಆಗಬೇಕಾಯ್ತು."

"ನಿಜ ಸಾರ್. ಸಾರ್ವಜನಿಕರ ಅಭಿಪ್ರಾಯಗಳಿಗೆ ತುಂಬ ಮಹತ್ವ ಕೊಟ್ಟು ರಾಜಕಾರಣ ಮಾಡಿಕೊಂಡು ಬಂದಿರೊ ಕುಟುಂಬ ನಿಮ್ಮದು. ಆದ್ರಿಂದ ಗೌಡರು ಹೇಳಿರೋ ಮಾತು ನಿಜ."

"ಆದ್ರು, ಅವರ ಮಾತನ್ನ ಮೀರಿ ನಾನು ಅಧ್ಯಕ್ಷಾಗಿರೋದರಿಂದ ನನಿಗೇ ಒಂಥರಾ ಸೇಮಾಗಿದೆ."

"ನೀವು ಬೇರೆಯವರ ಹೆಸರು ಸೂಚನೆ ಮಾಡಬೇಕಾಗಿತ್ತು. ಉದಾಹರಣೆಗೆ ಬಂಡೆಪ್ಪ ಕಾಶಂಪುರನ್ನ ಮಾಡಿದ್ರೆ ಚೆನ್ನಾಗಿತ್ತಲ್ಲವೆ?"

"ಒಳ್ಳೆ ಮಾತೇಳಿದ್ರಿ ನೀವು. ಆ ಸಿದ್ದರಾಮಯ್ಯನ್ನ ಮಾಡಿ ಬೆಳೆಸಿದ್ದಕ್ಕೆ ಸರಿಯಾದ ಪ್ರತಿಫಲ ಅನುಭವಿಸ್ತಾಯಿದ್ದಿವಿ. ಇನ್ನ ಆ ಬಂಡೆಪ್ಪನ್ನ ಅಧ್ಯಕ್ಷನ್ನ ಮಾಡಿದ್ರೆ ನಮ್ಮ ತಂದೆ ಬಂಡೆಗೆ ತಲೆ ಹೊಡಕಂಡು ಸಾಯಂಗಾಗದು."

"ಅಂಥ ಅಪಾಯಕಾರಿ ಮನ್ಸನಾ ಸಾರ್?"

"ರಾಜಕಾರಣದಲ್ಲಿ ಯಾರ್ನೂ ನಂಬಂಗಿಲ್ಲ ಕಂದ್ರೀ. ಆ ಚೆನ್ನಿಗಪ್ಪ ನಮಿಗಿಂತ ಮುಂದ್ಕೆ ಹುಟ್ಟಿದಂಗಾಡೋನು. ಇವತ್ತು ನಮ್ಮ ತಂದೆಯವರನ್ನೇ ಬೈಯ್‌ಕೊಂಡು ತಿರುಗ್ತಾ ಅವ್ನೆ."

"ನಿಮ್ಮ ಪಾರ್ಟಿಲಿರೋರೆಲ್ಲ ಹೆಚ್ಚುಕಮ್ಮಿ ಅಂಥೋರೆ ಅಲವಾ ಸಾರ್. ನಿಮ್ಮ ಸಭೆ ಮುಗದಮ್ಯಾಲೆ ಅಪ್ಪ ಮಕ್ಕಳನ್ನು ಆಡಿಕಳೋ ಅಂಥವ್ರುರು."

"ಅದಕ್ಕೆ ಕಂದ್ರಿ ನಮ್ಮ ತಂದೆ ತುಂಬ ಯೋಚನೆ ಮಾಡಿ ಯಾರೂ ಆಗದು ಬೇಡ, ನೀನೇ ಅಧ್ಯಕ್ಷಾಗು ಅಂತ ಹೇಳಿದ್ರು, ಅದ್ಕೆ ಆದೆ."


"ಮತ್ತೆ ವಿರೋಧಿಸಿದ್ರು ಅಂದ್ರಲ್ಲಾ ಸಾರ್?"


"ಅದೂ, ಸಭೆಲಿ ವಿರೋಧಿಸಿದ್ರು ಅಷ್ಟೆ."

"ಥೂತ್ತೇರಿ!!!" ■

ರಾಜ್ಯೋತ್ಸವ ಪ್ರಶಸ್ತಿಯೂ ಯಡ್ಡಿಯ ಚೆಡ್ಡಿ ರಾಜಕೀಯವೂ....

ಮುಖ್ಯಮಂತ್ರಿ ಯಡ್ಡಿ ನೇತೃತ್ವದ ಬಿಜೆಪಿ ಸರ್ಕಾರ ರಾಜ್ಯೋತ್ಸವ ಪ್ರಶಸ್ತಿಯನ್ನು ವಿವಿಧ ಕ್ಷೇತ್ರದ ಸಾಧಕರಿಗೆ ವಿತರಿಸಿದೆ. ಆದರೆ ಯಡ್ಡಿ ಪಾಲಿಗೆ 'ಸಾಧಕರು' ಅಂದರೆ ಬರೀ ಬಿಜೆಪಿಯ ಕಾರ್ಯಕರ್ತರು ಅಥವಾ ಬಿಜೆಪಿ ಟಿಕೆಟು ಪಡೆದು ಚುನಾವಣೆಯಲ್ಲಿ ಸೋತವರು ಎಂಬುದೇ ಆಗಿದೆ ಎನಿಸುತ್ತದೆ. ಇದಕ್ಕೆ ಉತ್ತಮ ಉದಾಹರಣೆ ಸಿನಿಮಾ ಕ್ಷೇತ್ರದಲ್ಲಿ ಈ ಬಾರಿ ರಾಜ್ಯೋತ್ಸವ ಪ್ರಶಸ್ತಿ ಪಡೆದ ಹಲವರು.





ತೆಲುಗು ಬಿಡ್ಡನಿಗೆ ಭಕ್ಷೀಸು!

ಆಂಧ್ರದಿಂದ ಎರಡು ವರ್ಷಕ್ಕೊಮ್ಮೆ ಕರ್ನಾಟಕಕ್ಕೆ ಬಂದು ಹೊಡಿ-ಬಡಿ-ಕಡಿ ಚಿತ್ರಗಳಲ್ಲಿ ನಟಿಸುವ ಸಾಯಿಕುಮಾರ್ ಯಡ್ಡಿ ಪಾಲಿಗೆ ಕನ್ನಡ ಚಿತ್ರರಂಗದ ಮಹಾನ್ ಸಾಧಕರಾಗಿ ಕಾಣಿಸಿದ್ದಾರೆ. ಇದೆಂತಹ ದುರಂತ ನೋಡಿ. ಚಿತುಪ್ಪೊಟಿ ಕನ್ನಡಿಗರ ಪರವಾಗಿ ಒಬ್ಬ ಅಪ್ಪಟ ಕನ್ನಡ ನಾಯಕನನ್ನು ರಾಜ್ಯೋತ್ಸವ ಪ್ರಶಸ್ತಿಗೆ ಆಯ್ಕೆ ಮಾಡಲು ಈ ಕ'ಮಲ' ಸರ್ಕಾರಕ್ಕೆ ಸಾಧ್ಯವಾಗಿಲ್ಲ.

ಸಾಯಿಕುಮಾರ್ ಒಮ್ಮೆಯಾದರೂ ಕನ್ನಡ ನಾಡು, ನುಡಿ, ಸಂಸ್ಕೃತಿಯನ್ನು ಪ್ರತಿಬಿಂಬಿಸುವ ಒಂದೇ ಒಂದು ಚಿತ್ರದಲ್ಲಿ ನಟಿಸಿದ್ದರೆ; ಆ ಕಾರಣಕ್ಕಾಗಿ ಅವರಿಗೆ ಈ ಪ್ರಶಸ್ತಿಯನ್ನು ನೀಡಿದ್ದರೆ ಯಾವ ಅಭ್ಯಂತರವೂ ಇರುತ್ತಿರಲಿಲ್ಲ. ಆದರೆ ಈ ಸಾಯಿಕುಮಾರ್ ಬೆಳ್ಳಿತೆರೆಯ ಮೇಲೆ ರಕ್ತದ ಓಕುಳಿ ಹರಿಸಿದ್ದಾರೆ; ಕನ್ನಡದ ಬದಲು ತಮ್ಮದೇ ಆದ ಹೊಸ ಶೈಲಿಯ 'ತೆಲ್ಗನ್ನಡ'ವನ್ನು ಆವಿಷ್ಕರಿಸಿದ್ದಾರೆ. 'ಪೊಲೀಸ್ ಸ್ಟೋರಿ' ಎಂಬ ಒಂದು ಚಿತ್ರ ಹೊರತುಪಡಿಸಿ ಈತ ನಟಿಸಿರುವ ಉಳಿದೆಲ್ಲ ಚಿತ್ರಗಳೂ ಒಂದೊಂದೇ ವಾರಕ್ಕೆ ಎತ್ತಂಗಡಿಯಾದವುಗಳೇ. ಇಂತಹ 'ಸಾಧಕನಿಗೆ' ಯಡ್ಡಿ ರಾಜ್ಯೋತ್ಸವ ಪ್ರಶಸ್ತಿ ನೀಡಿದ್ದಾರೆ.

ಇದೆಲ್ಲಕ್ಕಿಂತ ಮುಖ್ಯವಾಗಿ ಹಿಂದೊಮ್ಮೆ ಸಾಯಿಕುಮಾರ್ ಕನ್ನಡ ನಾಡು-ನುಡಿ ಮತ್ತು ಕನ್ನಡಿಗರ ಬಗ್ಗೆ ಹೇಳಿದ್ದನ್ನು ಯಡ್ಡಿ ಸಾಹೇಬರು ಕೇಳಿಸಿಕೊಂಡಂತಿಲ್ಲ. 'ಪೊಲೀಸ್ ಸ್ಟೋರಿ' ಚಿತ್ರ ಯಶಸ್ಸು ಕಂಡ ನಂತರ ಅದರ ನಿರ್ಮಾಪಕ ಗುರುಮೂರ್ತಿ ಮತ್ತು ಸಾಯಿ ನಡುವೆ ದೊಡ್ಡ ಗಲಾಟೆಯಾಗಿತ್ತು. ಆಗ "ಇಲ್ಲಿಯ ಜನ ನನಗೆ ಪ್ರಾಣ ಬೆದರಿಕೆ ಹಾಕಿದ್ದಾರೆ" ಎಂದು ಹೇಳಿದ್ದ ಸಾಯಿ ಹೈದ್ರಾಬಾದಿಗೆ ಕಾಲುಕಿತ್ತಿದ್ದರು. ಅಷ್ಟೇ ಅಲ್ಲ "ಇನ್ನೆಂದೂ ಕರ್ನಾಟಕದಲ್ಲಿ ಕಾಲಿಡುವುದಿಲ್ಲ" ಎಂದು ಘೋಷಿಸಿದ್ದರು. ಹಾಗೆಯೇ 'ಇಂಡಿಪೆಂಡೆನ್ಸ್ ಡೇ' ಎಂಬ ಕನ್ನಡ ಚಿತ್ರದ ಮುಹೂರ್ತವನ್ನು ಹೈದ್ರಾಬಾದಿನಲ್ಲೇ ನೆರವೇರಿಸಿ ಅಲ್ಲೇ ಚಿತ್ರೀಕರಣ ಮುಂದುವರೆಸಿದ್ದರು. ಕೊನೆಗೆ ಅದರ ಬಗ್ಗೆ ಇಲ್ಲಿಯ ಜನ ಗಲಾಟೆ ಮಾಡಿದ್ದರಿಂದ ಸಾಯಿಕುಮಾರ್ ಕನ್ನಡಿಗರ ಕ್ಷಮೆ ಯಾಚಿಸಿ ಮತ್ತೆ ಇಲ್ಲೇ ಶೂಟಿಂಗ್ ಆರಂಭಿಸಿದ್ದರು. ಈ ತೆಲುಗು ಬಿಡ್ಡ ಕನ್ನಡಮ್ಮನ ಸೇವೆ ಮಾಡಿರುವ ಪರಿ ಇದು.

ಕಳೆದ ವರ್ಷ ಎಚ್.ಡಿ. ಕುಮಾರಸ್ವಾಮಿ ಮುಖ್ಯಮಂತ್ರಿಯಾಗಿದ್ದಾಗ ತಮ್ಮ ಚಿತ್ರಗಳನ್ನು ನಿರ್ದೇಶಿಸಿದ್ದ ಎಸ್. ನಾರಾಯಣ್‌ಗೆ ರಾಜ್ಯೋತ್ಸವ ಪ್ರಶಸ್ತಿ ನೀಡಿದ್ದರು. ಈಗ ತಮ್ಮ ಪಕ್ಷದ ಬೆಂಬಲಿಗ ಸಾಯಿಕುಮಾರ್ ಕಳೆದ ಚುನಾವಣೆಯಲ್ಲಿ ಹಲವು ಕಡೆ ತಮ್ಮ 'ತೆಲ್ಗನ್ನಡ'ದಲ್ಲಿ ಭಾಷಣಗಳನ್ನು ಮಾಡಿದ್ದಕ್ಕೆ ಆತನಿಗೆ ಈ ಪ್ರಶಸ್ತಿಯನ್ನು ಯಡ್ಡಿ ನೀಡಿದ್ದಾರೆ. ಇದು ಸಾಯಿಕುಮಾರ್‌ಗೆ ಲಭಿಸಿದ ಗೌರವವೋ, ಕರ್ನಾಟಕಕ್ಕೆ ಯಡ್ಡಿ ಮಾಡಿದ ಅವಮಾನವೋ ನೀವೇ ನಿರ್ಧರಿಸಿ. ■

ಚಂದ್ರು ಭಾವಮೈದುನನಿಗೂ ಮಣೆ!

ಸಿನಿಮಾ ಕ್ಷೇತ್ರಕ್ಕೆ ನೀಡಿದ್ದ ರಾಜ್ಯೋತ್ಸವ ಪ್ರಶಸ್ತಿಗಳಲ್ಲಿ ತುಮಕೂರಿನ ಶ್ರೀನಿವಾಸ್ ಕಡವಿಗೆರೆ ಎಂಬ ಹೆಸರೊಂದಿತ್ತು. ಈತನ ಬಗ್ಗೆ ಯಾರೂ ಕೇಳಿರದಿದ್ದರೂ ಈತ ಅದು ಹೇಗೆ ಅಷ್ಟೊಂದು ಸೈಲೆಂಟಾಗಿ ಕನ್ನಡ ಚಿತ್ರ ಸೇವೆ ಮಾಡಿದನೆಂದು ವಿಚಾರಿಸಿದರೆ ದೊಡ್ಡ ಆಘಾತವೇ ಕಾದಿತ್ತು.




ಯಾಕೆಂದರೆ, ಈತ ಅಸಲಿಗೆ ಚಿತ್ರರಂಗಕ್ಕೆ ಸಂಬಂಧಪಟ್ಟವನೇ ಅಲ್ಲ. ಬದಲಾಗಿ ಈತ ಇಲ್ಲಿಯತನಕ ಎರಡು ಕನ್ನಡ ಧಾರಾವಾಹಿಗಳಿಗೆ ಕ್ಯಾಮೆರಾಮನ್ ಆಗಿ ದುಡಿದಿದ್ದಾನಷ್ಟೇ. ಚಿತ್ರರಂಗದಲ್ಲೇ ಪ್ರಶಸ್ತಿಗೆ ಅರ್ಹರಾದ ಅದೆಷ್ಟೋ ಛಾಯಾಗ್ರಾಹಕರಿರುವಾಗ ಈ ಶ್ರೀನಿವಾಸ್ ಎಂಬ ಯಕಶ್ಚಿತ್ ಟಿವಿ ಸೀರಿಯಲ್ ಕ್ಯಾಮೆರಾಮನ್‌ಗೆ ಅದು ಹೇಗೆ ಈ ಪ್ರಶಸ್ತಿ ಲಭಿಸಿತು? ಈ ಪ್ರಶ್ನೆಗೆ ಉತ್ತರ ಏನೆಂದರೆ ಈತ ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷನಾಗಿರುವ ಪರಮ ಚೆಡ್ಡಿ 'ಮುಖ್ಯ ಮಂತ್ರಿ' ಚಂದ್ರುರವರ ಭಾವಮೈದುನ, ಅಂದರೆ ಅವರ ಹೆಂಡತಿಯ ಸಹೋದರ!

ಆ ಒಂದು 'ಅರ್ಹತೆ' ಬಿಟ್ಟರೆ ಈ ಪ್ರಶಸ್ತಿಯನ್ನು ಪಡೆಯುವ ಯಾವ ಯೋಗ್ಯತೆಯೂ ಈ ಶ್ರೀನಿವಾಸ್ ಕಡವಿಗೆರೆ ಎಂಬಾತನಿಗೆ ಇಲ್ಲ. ಆದರೂ ಈತನಿಗೆ ಪ್ರಶಸ್ತಿ ನೀಡಲಾಗಿದೆ ಎಂದರೆ ಮುಖ್ಯಮಂತ್ರಿ ಯಡ್ಡಿ ಈ ಬಾರಿ ರಾಜ್ಯೋತ್ಸವ ಪ್ರಶಸ್ತಿಗಳಿಗೇ ಚೆಡ್ಡಿ ತೊಡಿಸಿದ್ದಾರೆ ಎಂಬುದು ಸ್ಪಷ್ಟವಾಗುತ್ತದೆ, ಅಲ್ಲವೇ?

ಕಿರುತೆರೆ ಸಂಘದವರು ಈ ಆಯ್ಕೆಯನ್ನು ಪ್ರಬಲವಾಗಿ ಖಂಡಿಸಿದ್ದಾರಲ್ಲದೆ, ಸಂಘದ ಅಧ್ಯಕ್ಷ ರವಿಕಿರಣ್ ಪ್ರಶಸ್ತಿ ಪ್ರದಾನ ಸಮಾರಂಭವನ್ನು ಬಹಿಷ್ಕರಿಸಿದ್ದಾರೆ. ತಮಾಷೆಯ ವಿಷಯವೆಂದರೆ ಈ ಕಿರುತೆರೆಯ ಸಂಘದ ಗೌರವಾಧ್ಯಕ್ಷ ಮುಖ್ಯಮಂತ್ರಿ ಚಂದ್ರು!

ಲಿಂಗಾಯತ ಬಸಂತ್ ಓಕೆ

ಹಲವಾರು ವರ್ಷಗಳಿಂದ ಸಿನಿಮಾ ಫೈನಾನ್ಸಿಯರ್‌ಆಗಿ, ಹಲವೊಮ್ಮೆ ನಿರ್ಮಾಪಕರಾಗಿ ಹಲವಾರು ಚಿತ್ರಗಳನ್ನು ಮಾಡಿರುವ ಬಸಂತ್ ಕುಮಾರ್ ಪಾಟೀಲ್ ಎಂಬ ಮಾಜಿ ನಟನಿಗೂ ಈ ಬಾರಿಯ ಪ್ರಶಸ್ತಿ ಲಭಿಸಿದೆ. ಲಿಂಗಾಯತ ಜಾತಿಗೆ ಸೇರಿರುವ ಪಾಟೀಲರ ಪರವಾಗಿ ಉತ್ತರ ಕರ್ನಾಟಕದ ಲಿಂಗಾಯತ ಶಾಸಕರು ಲಾಬಿ ಮಾಡಿದರೆಂಬ ಸುದ್ದಿಯೂ ಇದೆ. ಹಿಂದೊಮ್ಮೆ ನಿರ್ಮಾಪಕರ ಸಂಘದ ಅಧ್ಯಕ್ಷರಾಗಿದ್ದ ಪಾಟೀಲರು ಅಪಕ್ವ ನಿಲುವುಗಳನ್ನು ತಾಳುವ ಮೂಲಕ ಪ್ರಚಾರ ಪಡೆದರೇ ಹೊರತು ಕನ್ನಡ ಚಿತ್ರರಂಗಕ್ಕೆ, ಇವರು ಎಬ್ಬಿಸಿದ ಗೊಂದಲಗಳಿಂದಾಗಿ ಅಷ್ಟೇನೂ ಉಪಯೋಗವಾಗಿರಲಿಲ್ಲ.



ಅದೇನೇ ಇರಲಿ, ಎಸ್.ಎಲ್.ಭೈರಪ್ಪನಂತಹ ಚೆಡ್ಡಿ ಲೇಖಕ ಬರೆದಿದ್ದ 'ನಾಯಿ ನೆರಳು' ಎಂಬ ತಿರೋಗಾಮಿ ಕಾದಂಬರಿಯನ್ನು ಸಿನಿಮಾವಾಗಿ ನಿರ್ಮಿಸಿದ್ದ ಕುಖ್ಯಾತಿಯೊಂದಿಗೆ ಇತ್ತೀಚೆಗೆ ಪ್ರಗತಿಪರ ಲೇಖಕಿ ವೈದೇಹಿಯವರ ಕತೆ ಆಧರಿತ 'ಗುಲಾಬಿ ಟಾಕೀಸ್' ಎಂಬ ಕಲಾತ್ಮಕ ಚಿತ್ರವನ್ನು ನಿರ್ಮಿಸಿರುವ ಖ್ಯಾತಿಯನ್ನೂ ಪಡೆದಿರುವ ಪಾಟೀಲರಿಗೆ ಈ ಪ್ರಶಸ್ತಿಯಿಂದಲಾದರೂ ಮುಂದಿನ ದಿನಗಳಲ್ಲಿ ಅರ್ಥಪೂರ್ಣ ಚಿತ್ರಗಳನ್ನು ನಿರ್ಮಿಸುವ ಶಕ್ತಿ ಸಿಗಲಿ ಎಂದು ಆಶಿಸಬಹುದಾಗಿದೆ.

ಪಕ್ಷ ಪ್ರೇಮಿ ಪ್ರಮೀಳಾಗೂ ಪ್ರಶಸ್ತಿ!


ತೆಲುಗು ಬಿಡ್ಡ ಸಾಯಿಕುಮಾರ್‌ಗೆ ಹೋಲಿಸಿದರೆ ಪ್ರಮೀಳಾ ಜೋಷಾಯ್ ಕನ್ನಡದ ಕಲಾವಿದೆ, ನಿಜ. ಆಕೆ ಎರಡು ಮೂರು ದಶಕಗಳಿಂದ ಮುಖಕ್ಕೆ ಬಣ್ಣ ಹಚ್ಚಿ ಹಲವಾರು ಚಿತ್ರಗಳಲ್ಲಿ ನಟಿಸಿ ಮೊನ್ನೆ 'ತಾಯಿ' ಎಂಬ ಕಲಾತ್ಮಕ ಚಿತ್ರವನ್ನು ನಿರ್ಮಿಸಿ, ಅದರಲ್ಲಿ ನಟಿಸಿ ತನ್ನ ಕಲಾಪ್ರೇಮವನ್ನು ಪ್ರದರ್ಶಿಸಿದ್ದರು. ಆಕೆ ಅಂತಹ ಚಿತ್ರವನ್ನು ನಿರ್ಮಿಸಿದ್ದು ಪ್ರಶಸ್ತಿ ಗಳಿಸುವ ದೃಷ್ಟಿಯಿಂದ ಎಂಬುದೂ ಅಷ್ಟೇ ಸತ್ಯ.




ಆದರೆ ಈಕೆಗಿಂತಲೂ ಹೆಚ್ಚು ಕನ್ನಡ ಚಿತ್ರ ಸೇವೆ ಮಾಡಿರುವವರಿದ್ದಾರೆ. ಅವರ್‍ಯಾರೂ ಯಡ್ಡಿ ಕಣ್ಣಿಗೆ ಬೀಳದೆ ಪ್ರಮೀಳಾ ಜೋಷಾಯ್ ಬಿದ್ದದ್ದಕ್ಕೆ ಕಾರಣವಿದೆ. ಅದೇನೆಂದರೆ ಈಕೆ ಮತ್ತು ಈಕೆಯ ಪತಿ ಸುಂದರ್‌ರಾಜ್ ಕೂಡ ಬಿಜೆಪಿ ಪಕ್ಷದ ಸದಸ್ಯರಾಗಿದ್ದು ಕಳೆದ ಚುನಾವಣೆಯಲ್ಲಿ ಅದರ ಪರ ಪ್ರಚಾರದಲ್ಲಿ ಪಾಲ್ಗೊಂಡಿದ್ದದ್ದು!

ಮಹೇಂದರ್‌ಗೆ ದೋಖಾ-ಜೈ ಭಗವಾನ್

ಹಳೆಯ ತಲೆಮಾರಿನ ನಿರ್ದೇಶಕ ಭಗವಾನ್‌ಗೆ ಪ್ರಶಸ್ತಿ ನೀಡುವ ಮೂಲಕ ಯಡ್ಡಿ ದೊಡ್ಡತನವನ್ನು ಮೆರೆದಿದ್ದಾರೆ ಎಂದು ನೀವು ಭಾವಿಸಿದರೆ, ನಿಮ್ಮ ಊಹೆ ತಪ್ಪು! "ಭಗವಾನ್‌ಗೆ ರಾಜ್ಯೋತ್ಸವ ಪ್ರಶಸ್ತಿ ನೀಡಿ, ಅವರು ಇದಕ್ಕೆ ಅರ್ಹರು" ಎಂದು ಪಾರ್ವತಮ್ಮ ರಾಜ್‌ಕುಮಾರ್ ಶಿಫಾರಸ್ಸು ಮಾಡಿದ್ದರಿಂದ ಯಡ್ಡಿ 'ಜೈ ಭಗವಾನ್' ಎಂದರೆ ಹೊರತು ಬೇರೆ ಯಾವ ಕಾರಣಕ್ಕೂ ಅಲ್ಲ.



ಅಸಲಿಗೆ ಈ ಪ್ರಶಸ್ತಿಯನ್ನು ಕಳೆದ ಚುನಾವಣೆಯಲ್ಲಿ ಬಿಜೆಪಿ ಅಭ್ಯರ್ಥಿಯಾಗಿ ಕೊಳ್ಳೇಗಾಲದಲ್ಲಿ ಸ್ಪರ್ಧಿಸಿ ಸೋತಿದ್ದ ಚಿತ್ರ ನಿರ್ದೇಶಕ ಎಸ್. ಮಹೇಂದರ್‌ಗೆ ನೀಡುವ ಆಶೆ ಯಡ್ಡಿಯದ್ದಾಗಿತ್ತು. ಆದರೆ ಪಾರ್ವತಮ್ಮ ರಾಜ್ ಕುಮಾರ್ ಅವರು ಮಧ್ಯ ಪ್ರವೇಶಿಸಿದ್ದರಿಂದ ಅದು ಭಗವಾನ್ ಪಾಲಾಗಿ ಪಾಪ, ಮತ್ತೆ ಮಹೇಂದರ್ ಮತ್ತು ಅವರ ಪತ್ನಿ ಶೃತಿಗೆ ಪಾಲಿಗೆ ಚೊಂಬೇ ಗತಿಯಾಗಿದೆ!



ಎದೆತುಂಬಿದ ಗೌರವ- ಎಸ್ಪಿ

ಹಿನ್ನೆಲೆ ಗಾಯಕ ಎಸ್ಪಿ ಬಾಲಸುಬ್ರಹ್ಮಣ್ಯಂ ಅವರಿಗೆ ರಾಜ್ಯೋತ್ಸವ ಪ್ರಶಸ್ತಿ ನೀಡಿರುವುದನ್ನು ಯಾರೂ ಆಕ್ಷೇಪಿಸಲು ಸಾಧ್ಯವಿಲ್ಲ. ಕಳೆದ ನಾಲ್ಕು ದಶಕಗಳಿಂದ ಸಾವಿರಾರು ಕನ್ನಡ ಗೀತೆಗಳನ್ನು ಹಾಡಿ ಕನ್ನಡಿಗರನ್ನು ರಂಜಿಸಿರುವ ಎಸ್ಪಿಯವರನ್ನು ಪರಭಾಷಾ ಗಾಯಕ ಎಂದು ದೂಷಿಸಲು ಸಾಧ್ಯವಿಲ್ಲದಷ್ಟು ಅವರು ನಮ್ಮವರಾಗಿದ್ದಾರೆ. ಕಳೆದ ಮೂರು ತಲೆಮಾರು ಎಸ್ಪಿಯವರ ಹಾಡುಗಳನ್ನು ಕೇಳುತ್ತಲೇ ಬೆಳೆದಿದೆ. ಅವರ ಹಾಡು, ಟಿವಿ ನಿರೂಪಣೆ ಇವೆಲ್ಲವೂ ಕನ್ನಡಿಗರ ಮನಗೆದ್ದಿದೆ. ತಮಗೆ ಹಲವಾರು ರಾಜ್ಯದ ಪ್ರಶಸ್ತಿಗಳು, ಕೇಂದ್ರ ಸರ್ಕಾರದ ಪ್ರಶಸ್ತಿಗಳು, ಪದ್ಮಶ್ರೀದಂತಹ ಪ್ರತಿಷ್ಠಿತ ಪ್ರಶಸ್ತಿಗಳು ಬಂದಿದ್ದರೂ ತನಗಿನ್ನೂ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ ಬಂದಿಲ್ಲ ಎಂಬ ಕೊರಗು ಇದೆ ಎಂದು ಎಸ್ಪಿಯವರು ಅನೇಕ ಸಮಾರಂಭಗಳಲ್ಲಿ ಹೇಳಿದ್ದುಂಟು. ಈಗ ಅವರ ಆಸೆಯವನ್ನು ಈಡೇರಿಸಿದಂತಾಗಿದೆ.



ರೋಣದ ಗೂಂಡಾಗಳ ವಿರುದ್ಧ ಬೀದಿಗಿಳಿದ ಜನ

ಅಕ್ಟೋಬರ್ 16ರಂದು ರೋಣದ ಶಾಸಕ ಕಳಕಪ್ಪ ಬಂಡಿಯ ಗೂಂಡಾ ಬೆಂಬಲಿಗರು ರೇಷ್ಮಾ ಭಾನು ಎಂಬ ಅರಳುವ ಕುಡಿಗೆ ಲೈಂಗಿಕ ಕಿರುಕುಳ ನೀಡಿ ಆಕೆ ಆತ್ಮಹತ್ಯೆ ಮಾಡಿಕೊಳ್ಳುವಂತೆ ಮಾಡಿದ ಬಗ್ಗೆ ಕಳೆದ ಸಂಚಿಕೆಯಲ್ಲಿ ವರದಿ ಮಾಡಿದ್ದೆವು. ಕೊಪ್ಪಳದಲ್ಲಿ ಪತ್ರಿಕೆಯ ಪ್ರತಿ ಖಾಲಿಯಾಗಿದ್ದೂ ಆ ವರದಿಯ ಜೆರಾಕ್ಸ್ ಪ್ರತಿಗಳು ಎಲ್ಲೆಡೆ ರಾರಾಜಿಸಿದ್ದವು. ಇದನ್ನಾಧರಿಸಿ ಕೊಪ್ಪಳದ ಜನ ಈಗ ಬೀದಿಗಿಳಿದು ರೇಷ್ಮಾ ಭಾನು ಆತ್ಮಹತ್ಯೆಗೆ ಕಾರಣರಾದ ಆರೋಪಿಗಳನ್ನು ಗೂಂಡಾಗಿರಿ ಕಾಯ್ದೆಯಡಿ ಬಂಧಿಸಲು ಆಗ್ರಹಿಸಿದ್ದಾರೆ.

'ಲಂಕೇಶ್' ವರದಿಯ ಪ್ರಭಾವ


ರಾಜ್ಯದಲ್ಲಿ ಕೋಮುವಾದಿ ಸರ್ಕಾರ ಅಸ್ತಿತ್ವಕ್ಕೆ ಬಂದಮೇಲಂತೂ ದಲಿತ, ಅಲ್ಪಸಂಖ್ಯಾತ, ಹಿಂದುಳಿದವರ ಮೇಲೆ ನಡೆಯುತ್ತಿರುವ ನಿರಂತರ ದೌರ್ಜನ್ಯಗಳಿಂದ ರೋಸಿ ಹೋಗಿದ್ದ ಜನ, ರೇಷ್ಮಾ ಭಾನು ಎಂಬ ಹೆಣ್ಣುಮಗಳ ಹೃದಯವಿದ್ರಾವಕ ಘಟನೆಯನ್ನು ಸಹಿಸಿಕೊಳ್ಳಲಾಗದೆ ಒಮ್ಮೆಲೇ ಬೀದಿಗಿಳಿದಿದ್ದಾರೆ.

ಪ್ರಕರಣ ದಾಖಲಿಸಲು ಹಿಂದೇಟು ಹಾಕಿದ ಸಿಪಿಐ ಪಾಟೀಲನನ್ನು ಸಸ್ಪೆಂಡ್ ಮಾಡಬೇಕೆಂದು ಒತ್ತಾಯ ಮಾಡುತ್ತಾ ಇಡೀ ತನಿಖೆಯನ್ನು ಸಿಒಡಿಗೆ ವಹಿಸುವ ಬೇಡಿಕೆ ಇಡಲಾಯಿತು. ದಲಿತ ಮುಸ್ಲಿಂ ಸೇವಾ ಸಂಘ, ವೀರ ಕನ್ನಡಿಗ ಯುವಕ ಸಂಘ, ಎಎಸ್‌ಎಫ್, ಕರ್ನಾಟಕ ಮುಸ್ಲಿಂ ಕೌನ್ಸಿಲ್, ದಲಿತ ವಿಮೋಚನೆಯ ಮಾನವ ಹಕ್ಕುಗಳ ವೇದಿಕೆ, ಹಮ್‌ದರ್ದ್ ವೆಲ್ಫೇರ್ ಅಸೋಸಿಯೇಷನ್, ಹೈದ್ರಾಬಾದ್ ಕರ್ನಾಟಕ ಜನವಿಮೋಚನಾ ವೇದಿಕೆ, ಭಾರತ ಕಮ್ಯೂನಿಸ್ಟ್ ಪಕ್ಷ ಮುಂತಾದ ಅನೇಕ ಸಮಾನ ಮನಸ್ಕ ಸಂಘಟನೆಗಳು ಈ ಬೃಹತ್ ಪ್ರತಿಭಟನೆಯ ನೇತೃತ್ವ ವಹಿಸಿದ್ದವು.

ರೇಷ್ಮಾ ಕುಟುಂಬಕ್ಕೆ ಕೂಡಲೇ 10 ಲಕ್ಷ ರೂಪಾಯಿ ಪರಿಹಾರ ನೀಡಬೇಕು, ಇಲ್ಲದಿದ್ದರೆ ಇಡೀ ಕೊಪ್ಪಳ ಬಂದ್ ಮಾಡುವುದಾಗಿ ನಿರ್ಧರಿಸಲಾಗಿದೆ. ಇದೇ ಸಂದರ್ಭದಲ್ಲಿ ಕೊಪ್ಪಳದ ಪಕ್ಕದ ಮಂಗಳಾಪುರ ಗ್ರಾಮದಲ್ಲಿ ಜೆಡಿಎಸ್‌ನವರೇ ಹುಟ್ಟುಹಾಕುತ್ತಿರುವ ಈದ್ಗಾ ವಿವಾದದ ಬಗ್ಗೆಯೂ ಪ್ರತಿಭಟನಾಕಾರರು ಎಚ್ಚರಿಕೆ ನೀಡಿದರು.

ಕಂಡಕಂಡಲ್ಲಿ ಮುಸ್ಲಿಂರಿಗೆ ರಕ್ಷಣೆ ಕೊಡುವ ಬಗ್ಗೆ ರಕ್ತದಲ್ಲಿ ಬರೆದುಕೊಡುತ್ತೇನೆಂದು ಬೊಗಳೆ ಬಿಡುತ್ತಾ ಬಂದಿರುವ ಮಂತ್ರಿ ಶ್ರೀರಾಮುಲು ತನ್ನ ಉಸ್ತುವಾರಿಕೆಯ ಗದಗ ಜಿಲ್ಲೆಯಲ್ಲಿ ರೇಷ್ಮಾಭಾನುಳಂತಹ ಅಮಾನವೀಯ ಘಟನೆ ನಡೆದರೂ, ಸೌಜನ್ಯಕ್ಕೂ ಭೇಟಿ ನೀಡದೆ ಗದಗದ ಕೃಷ್ಣಾ ಟಾಕೀಸಿನಲ್ಲಿ ಗಣೇಶನ 'ಸಂಗಮ' ಚಿತ್ರ ನೋಡುತ್ತಾ ಕುರ್‌ಕುರೇ ತಿನ್ನುತ್ತಾ ಜಾಲಿಯಾಗಿ ತಿರುಗಾಡುತ್ತಿದ್ದಾನೆ.

ಕರ್ನಾಟಕವನ್ನು ಗುಜರಾತ್ ಮಾಡುವ ಬಿಜೆಪಿಯ ಅಜೆಂಡಾ ರೋಣದಿಂದ ಆರಂಭ ಎನ್ನುವುದಾದರೆ ಅದಕ್ಕೆ ಪ್ರತಿರೋಧ ಕೊಪ್ಪಳದಿಂದ ಆರಂಭವಾಗಿದೆ ಎಂಬುದು ಯಡ್ಡಿ ಸರ್ಕಾರ ಅರ್ಥಮಾಡಿಕೊಳ್ಳಲಿ. ■



ನೈಸ್ ದೂರ್ತ ಖೇಣಿಯ ವಿರುದ್ಧ ಸೊಲ್ಲೆತ್ತಿದರೆಂಬ ಒಂದೇ ಕಾರಣಕ್ಕೆ ಇಬ್ಬರು ಜೆಡಿಎಸ್ ಕಾರ್ಯಕರ್ತರ ಮೇಲೆ ಕ್ರಿಮಿನಲ್ ಕೇಸು ದಾಖಲಿಸಿದ್ದು, ವಿರೋಧಿ ಕಾಂಗ್ರೆಸ್ ನಾಯಕನಾದ ತಪ್ಪಿಗೆ ಮತ್ತೊಬ್ಬ ಮುಗ್ಧನಿಗೆ ಜೈಲು ಶಿಕ್ಷೆ, ಕೊನೆಕೊನೆಗೆ ತನ್ನ ಖರ್ಚಲ್ಲೇ ಜನಕ್ಕೆ ಕುಡಿಯುವ ನೀರು ಕೊಟ್ಟರೂ ಆತನ ವಿರುದ್ಧ ಪೊಲೀಸರನ್ನು ಛೂಬಿಡುವ ಮಟ್ಟಕ್ಕೆ ಬಿಜೆಪಿಯ ರಾಮರಾಜ್ಯ ಯಥಾವತ್ತಾಗೇ ನೆರವೇರುತ್ತಿದೆ! ಯಡ್ಡಿ ಸರ್ಕಾರದ ಅಧಿನಾಯಕಿ ಶೋಭಾ ಕರಂದ್ಲಾಜೆ ಮತ್ತು ಆಕೆಯ ಆರೆಸ್ಸೆಸ್ ಪಟಾಲಂ ಸೇಡಿನ ರಾಜಕಾರಣಕ್ಕೊಂದು ಸಾರ್ವಕಾಲಿಕ ದಾಖಲೆ ಸ್ಥಾಪಿಸಹೊರಟಿದೆ.

■ ರಾ. ಸೋಮನಾಥ್



ಜೆಡಿಎಸ್-ಕಾಂಗ್ರೆಸ್ ವಿರುದ್ಧ ಶೋಭಾ ಸೇಡು

ಬಹುಶಃ ಬಿಜೆಪಿ ದೃಷ್ಟಿಯಲ್ಲಿ ರಾಮರಾಜ್ಯ ಎಂದರೆ ಇದೇ ಇರಬೇಕು?

ನೈಸ್ ದೂರ್ತ ಅಶೋಕ್ ಖೇಣಿಯನ್ನು ಸಂತೃಪ್ತಿಸಲು ಯಾರನ್ನು ಬೇಕಾದರೂ ಕೊಲೆ ಕೇಸಿಗೆ ಸಿಲುಕಿಸಿ ಜೈಲಿಗೆ ದಬ್ಬುವುದು, ಖೇಣಿಯ ವಿರುದ್ಧ ಸೊಲ್ಲೆತ್ತಿದರೆಂಬ ಒಂದೇ ಕಾರಣಕ್ಕೆ ಇನ್ನಿಬ್ಬರು ಜೆಡಿಎಸ್ ಕಾರ್ಯಕರ್ತರ ಮೇಲೆ ಕ್ರಿಮಿನಲ್ ಕೇಸು ದಾಖಲಿಸಿದ್ದು, ವಿರೋಧಿ ಕಾಂಗ್ರೆಸ್ ನಾಯಕನಾದ ತಪ್ಪಿಗೆ ಮತ್ತೊಬ್ಬ ಮುಗ್ಧನಿಗೆ ಜೈಲು ಶಿಕ್ಷೆ, ಕೊನೆಕೊನೆಗೆ ತನ್ನ ಖರ್ಚಲ್ಲೇ ಜನಕ್ಕೆ ಕುಡಿಯುವ ನೀರು ಕೊಟ್ಟರೂ ಆತನ ವಿರುದ್ಧ ಪೊಲೀಸರನ್ನು ಛೂಬಿಡುವ ಮಟ್ಟಕ್ಕೆ ಬಿಜೆಪಿಯ ರಾಮರಾಜ್ಯ ಯಥಾವತ್ತಾಗೇ ನೆರವೇರುತ್ತಿದೆ!

ಒಂದೇ ವಾರದಲ್ಲಿ ನಾಲ್ವರು ಜೆಡಿಎಸ್ ನಾಯಕರನ್ನೂ ಇಬ್ಬರು ಕಾಂಗ್ರೆಸ್ ಕಾರ್ಯಕರ್ತರನ್ನೂ ಅನ್ಯಾಯವಾಗಿ ಜೈಲುಪಾಲು ಮಾಡಿದ ಬಿಜೆಪಿ ಸರ್ಕಾರಕ್ಕೆ ಈ ನೆಲಕ್ಕೊಂದು ಕಾನೂನಿದೆ ಎಂಬುದನ್ನು ನೆನಪಿಸುವವರ್‍ಯಾರು?


ದೇವೇಗೌಡರಿಗೆ ಅಧಿಕಾರವಿದ್ದಾಗಲೂ ಹಾಸನದ ಪೊಲೀಸರು ಈಪಾಟ ಕೆಟ್ಟಿರಲಿಲ್ಲ. ಕ್ರಮ ಜರುಗಿಸದೇ ಹೋದರೂ ಕಾಟಾಚಾರಕ್ಕಾದರೂ ವಿರೋಧಿ ಕಾಂಗ್ರೆಸ್ ಕಾರ್ಯಕರ್ತರು ಕೊಟ್ಟ ದೂರುಗಳು ದಾಖಲಾಗುತ್ತಿದ್ದವು. ತೀರ ಸುಳ್ಳು ದೂರು ಕೊಟ್ಟು ಪ್ರತಿಪಕ್ಷಗಳ ಕಾರ್ಯಕರ್ತರನ್ನು ಜೈಲಿಗೆ ಹಾಕಿಸುವ ನಿರ್ಲಜ್ಜ ಜಿದ್ದಾಜಿದ್ದಿಗೆ ದೇವೇಗೌಡರಾಗಲಿ, ಕಾಂಗ್ರೆಸ್ಸಾಗಲಿ ಯಾವತ್ತೂ ಕೈ ಹಾಕಿದ್ದಿಲ್ಲ.

ಆದರೆ ಯಡ್ಡಿ ಸರ್ಕಾರದ ಅಧಿನಾಯಕಿ ಶೋಭಾ ಕರಂದ್ಲಾಜೆ ಮತ್ತು ಆಕೆಯ ಆರೆಸ್ಸೆಸ್ ಪಟಾಲಂ ಸೇಡಿನ ರಾಜಕಾರಣಕ್ಕೊಂದು ಸಾರ್ವಕಾಲಿಕ ದಾಖಲೆ ಸ್ಥಾಪಿಸಹೊರಟಿದೆ. ಮೊನ್ನೆ ಅಂದರೆ ಅಕ್ಟೋಬರ್ 24 ರಂದು ಬೆಂಗಳೂರು ಪ್ರದಕ್ಷಿಣೆಯ ನೆಪದಲ್ಲಿ ಕರಂದ್ಲಾಜೆಯ ಯಶವಂತಪುರ ಕ್ಷೇತ್ರದುದ್ದಕ್ಕೂ ಓಡಾಡಿದ ಮುಖ್ಯಮಂತ್ರಿ ಯಡಿಯೂರಪ್ಪ ಏಕಾಏಕಿ ಕೆಂಗೇರಿಯ ಗಾಂಧಿನಗರ ಕೆರೆಯನ್ನು ಪ್ರವಾಸಿತಾಣವಾಗಿ ಮಾಡುತ್ತೇನೆಂದಿದ್ದು, ಸುಂಕದಕಟ್ಟೆ ಸುತ್ತಮುತ್ತಲ ಏರಿಯಾಗಳಲ್ಲಿ ರೌಡಿಗಳ ಹಾವಳಿ ವಿರುದ್ಧ ಕಿಡಿಕಾರಿದ್ದು ಮತ್ತು ಅಲ್ಲಿನ ರಸ್ತೆ, ಮೋರಿಗಳ ದುರಸ್ತಿಗೆಂದು ತೇಲಿಬಿಟ್ಟ ಭರವಸೆಗಳೆಲ್ಲದರ ಒಳಮರ್ಮವೇ ಬೇರೆಯಿತ್ತು?

ಅದು ಯಶವಂತಪುರ ವಿಧಾನಸಭಾ ಕ್ಷೇತ್ರದೊಳಗಿನ ಕಾಂಗ್ರೆಸ್-ಜೆಡಿಎಸ್ ಕಾರ್ಯಕರ್ತರ ದಮನಕಾಂಡ. ಇದರ ವಿರುದ್ಧ ಅಕ್ಟೋಬರ್ 23 ರಂದು ಕನಕಪುರ ರಸ್ತೆ ತಲಘಟ್ಟಪುರ ಪೊಲೀಸ್ ಠಾಣೆಗೆ ಸರಿಸುಮಾರು ಎಂಟು ಸಾವಿರ ಮಂದಿ ರೈತರು ಮುತ್ತಿಗೆ ಹಾಕಿದ್ದು, ಇದಾಗಿ ಮೂರು ದಿನಕ್ಕೇ ಮಾಗಡಿ ರಸ್ತೆಯ ಬ್ಯಾಡರಹಳ್ಳಿ ಪೊಲೀಸ್ ಠಾಣೆಗೆ ಐನೂರಕ್ಕೂ ಹೆಚ್ಚು ಮಂದಿ ಕಾಂಗ್ರೆಸ್ ಕಾರ್ಯಕರ್ತರು ಮುತ್ತಿಗೆ ಹಾಕಿದ್ದು, ಇದಾಗಿ ಮತ್ತೆ ಎರಡೇ ದಿನಕ್ಕೆ ಜೆಡಿಎಸ್ ಕಾರ್ಯಕರ್ತರಿಂದ ಇದೇ ಬ್ಯಾಡರಹಳ್ಳಿ ಪೊಲೀಸ್ ಠಾಣೆ ಮುಂದೆ ನಡೆದ ಮೂರನೇ ಪ್ರತಿಭಟನೆ. ಶೋಭಾ ಕರಂದ್ಲಾಜೆಯ ಸೇಡಿನ ರಾಜಕಾರಣದ ವಿರುದ್ಧ ಗಾಂಧಿ ಪ್ರತಿಮೆಯೆದುರು ಅಂಬೇಡ್ಕರ್ ಯುವ ಸೇನೆ ನಡೆಸಿದ ಹೋರಾಟಗಳೆಲ್ಲವೂ ಬಿಜೆಪಿಯ ಡರ್ಟಿ ಪಾಲಿಟಿಕ್ಸ್ ವಿರುದ್ಧ ಮೊಳಗಿದ ಜನಾಕ್ರೋಶವಲ್ಲದೇ ಮತ್ತೇನು?


ಎಸ್ಸೈ ಎ.ಪಿ.ಕುಮಾರ್


ಅನಿಲ್ ಕುಮಾರ್


ಚನ್ನಮಲ್ಲಪ್ಪ

ಒಂದೇ ವಾರಕ್ಕೆ ಅರ್ಧ ಡಜನ್ ವಿರೋಧಿ ಕಾರ್ಯಕರ್ತರನ್ನು ಅನ್ಯಾಯವಾಗಿ ಜೈಲಿಗೆ ಹಾಕಿಸಿದ ಬಿಜೆಪಿ ಗೂಂಡಾಗಿರಿಯ ವಿರುದ್ಧ ಇವತ್ತಿಗೂ ದಿನಕ್ಕೊಂದು ಪ್ರತಿಭಟನೆಗಳಾಗುತ್ತಲೇ ಇವೆ.


ಬಿಜೆಪಿಯ ಸೇಡಿನ ರಾಜಕಾರಣದ ಮೊದಲ ಬಲಿಪಶು ಅಂತಿದ್ದರೆ ಆತ ಕಗ್ಗಲಿಪುರದ ಬಸವರಾಜು. ಕಳೆದ ಅಕ್ಟೋಬರ್ 15 ರಂದು ಕನಕಪುರ ರಸ್ತೆಯ ತಲಘಟ್ಟಪುರ ಪೊಲೀಸ್ ಠಾಣೆಯ ಎಸ್.ಐ. ಎ.ಪಿ. ಕುಮಾರ್ ಮತ್ತು ಹಾರೋಹಳ್ಳಿ ಇನ್ಸ್‌ಪೆಕ್ಟರ್ ಮಹದೇವ್ ಸೇರಿಕೊಂಡು ಆತನನ್ನು ರಾತ್ರೋರಾತ್ರಿ ಜೈಲುಪಾಲು ಮಾಡಿದ್ದು ಕೊಲೆ ಆರೋಪದ ಮೇಲೆ!

ಅದು ಇಲ್ಲಿಗೆ ಒಂದೂವರೆ ತಿಂಗಳ ಹಿಂದೆ ತನ್ನ ಅಜ್ಜಿಯನ್ನೇ ಕೊಂದು ಒಡವೆ ದೋಚಿದ ಖೊಟ್ಟಿ ಕೇಸು. ತನ್ನ ಅಜ್ಜಿಯನ್ನೇ ಕೊಲ್ಲುವಂಥ ಪೈಶಾಚಿಕತೆಯಾಗಲಿ, ಆಕೆಯ ಒಡವೆ ದೋಚುವಂಥ ದಾರಿದ್ರ್ಯವಾಗಲಿ ಖಂಡಿತಾ ಬಸವರಾಜನಿಗಿರಲಿಲ್ಲ. ಅಷ್ಟಕ್ಕೂ ಇದೇ ಬಸವರಾಜನ ಪತ್ನಿ ನಾಗರತ್ನಮ್ಮ ಖುದ್ದಾಗಿ ತಲಘಟ್ಟಪುರ ಪೊಲೀಸ್ ಠಾಣೆಗೆ ಬಂದು ತನ್ನ ಚಿಕ್ಕ ಮಾವ ವಾಸು, ಆತನ ತಂಗಿ ಗಂಡ ಶ್ರೀನಿವಾಸ್ ಮತ್ತು ಆತನ ಮಗ ಉಮೇಶ್ ಮುಂತಾದವರೇ ಅಜ್ಜಿಯನ್ನು ಕೊಂದಿದ್ದಾರೆಂದು ದೂರು ಕೊಟ್ಟಿದ್ದಾಳೆ.

ವಿಚಿತ್ರವೆಂದರೆ ಹೀಗೆ ದೂರುಕೊಟ್ಟು ನಾಗರತ್ನಮ್ಮನ ಗಂಡ ಬಸವರಾಜನನ್ನೇ ಕೊಲೆ ಕೇಸಿಗೆ ಫಿಟ್ ಮಾಡಿ ಜೈಲಿಗೆ ಹಾಕುತ್ತಾರೆ ತಲಘಟ್ಟಪುರ ಪೊಲೀಸರು!

ಹಕೀಕತ್ತೇನೆಂದರೆ ಈ ರೀತಿ ಸುಳ್ಳು ಕೇಸಿನ ಮೇಲೆ ಜೈಲುಪಾಲಾದ ಬಸವರಾಜು ಕಳೆದ ವಿಧಾನಸಭಾ ಚುನಾವಣೆಯಲ್ಲಿ ಶೋಭಾ ಕರಂದ್ಲಾಜೆಯ ವಿರುದ್ಧ ಜೆಡಿಎಸ್ ಅಭ್ಯರ್ಥಿಯಾಗಿದ್ದ ರೈತನಾಯಕ ಪಂಚಲಿಂಗಯ್ಯನವರ ಅಕ್ಕನ ಮಗ.

ಹಾಗಂತ ತಲಘಟ್ಟಪುರ ಪೊಲೀಸರ ದುರಾಚಾರ ಇಷ್ಟಕ್ಕೇ ಮುಗಿದಿಲ್ಲ. ಬಸವರಾಜನನ್ನು ಕೊಲೆ ಕೇಸಿಗೆ ಸಿಲುಕಿಸಿ ಜೈಲಿಗೆ ಹಾಕಿದ್ದರ ವಿರುದ್ಧ ರೈತನಾಯಕ ಪಂಚಲಿಂಗಯ್ಯ ನೇತೃತ್ವದಲ್ಲಿ ಜೆಡಿಎಸ್ ಮತ್ತು ದಲಿತ ಸಂಘಟನೆಗಳ ಒಕ್ಕೂಟ ಸೇರಿಕೊಂಡು ಸೆಪ್ಟೆಂಬರ್ 23 ಕ್ಕೆ ಪ್ರತಿಭಟನೆಗೆ ಕರೆಕೊಟ್ಟವೆ. ಅದರ ಕರಪತ್ರಗಳನ್ನು ಹಂಚುತ್ತಿದ್ದ ಜೆಡಿಎಸ್ ಕಾರ್ಯಕರ್ತರಿಗೆ ಅದೆಂಥಾ ಆಘಾತ ಕಾದಿತ್ತೆಂದರೆ, ಹೀಗೆ ಕರಪತ್ರ ಹಂಚಿಕೊಂಡು ಬರುತ್ತಿದ್ದ ಆಟೋ ರಮೇಶ ಮತ್ತು ಪ್ರಭು ಎಂಬುವವರ ವಿರುದ್ಧ ಅಕ್ಟೋಬರ್ 20 ರಂದು ಮತ್ತೊಂದು ಸುಳ್ಳು ಕೇಸು ದಾಖಲಾಗಿತ್ತು.


ರುದ್ರೇಶ್


ಶಿವಶಂಕರ್


ನಾಗರಾಜ್

ಈ ಬಾರಿ ಅಶೋಕ್ ಖೇಣಿಯ ನೈಸ್ ಕಂಪನಿಯ ಸಿಬ್ಬಂದಿಯಿಂದ ಸುಳ್ಳು ದೂರು ಪಡೆದಿದ್ದರು. ಸೋಂಪುರಕೆರೆ ಸಮೀಪದ ನೈಸ್ ರಿಂಗ್ ರಸ್ತೆಯಲ್ಲಿ ತಪಾಸಣೆಗೆ ಬರುತ್ತಿದ್ದ ನೈಸ್ ಕಂಪೆನಿಯ ಸಿಬ್ಬಂದಿಗಳಾದ ಚಕ್ರರಾಮಾರಾಧ್ಯ ಮುಂತಾದವರ ಮೇಲೆ ಪ್ರತಿಭಟನಾಕಾರರಾದ ಆಟೋ ರಮೇಶ ಮತ್ತು ಪ್ರಭು ಹಲ್ಲೆ ನಡೆಸಿದ್ದಾರೆಂದು ಎರಡನೇ ಕ್ರಿಮಿನಲ್ ಕೇಸು!

ಮೊದಲು ಕೊಲೆ ಕೇಸಿನ ಮೇಲೆ ಜೈಲುಪಾಲಾದ ಕಗ್ಗಲಿಪುರದ ಬಸವರಾಜು ಈಗ ನೈಸ್ ಸಿಬ್ಬಂದಿಯ ಮೇಲೆ ಹಲ್ಲೆ ನಡೆಸಿದ ಕೇಸಿಗೆ ಸಿಲುಕಿದ ಆಟೋ ರಮೇಶ ಮತ್ತು ಪ್ರಭು- ಈ ಮೂವರೂ ಜೆಡಿಎಸ್ ಮುಖಂಡ ಹಾಗೂ ರೈತನಾಯಕ ಪಂಚಲಿಂಗಯ್ಯನವರ ಬೆಂಬಲಿಗರೆ.

ಅದು ನೈಸ್ ಖೇಣಿಯ ಬಲಗೈ ಬಂಟ ಎಂ. ರುದ್ರೇಶನ ಷಡ್ಯಂತ್ರವಾಗಿತ್ತು. ಕಳೆದ ವಿಧಾನಸಭಾ ಚುನಾವಣೆಯಲ್ಲಿ ರಾಮನಗರಕ್ಕೆ ಬಿಜೆಪಿ ಅಭ್ಯರ್ಥಿಯಾಗಿ ಕುಮಾರಸ್ವಾಮಿ ವಿರುದ್ಧ ಕೋಟಿಗಟ್ಟಲೇ ದುಡ್ಡು ಸುರಿದಿದ್ದ ರುದ್ರೇಶ ಹುಟ್ಟಾ ನೆಲಗಳ್ಳ. ಯಾರ್‍ಯಾರು ನೈಸ್ ಕಂಪೆನಿಯ ಭೂಕಬಳಿಕೆಯ ವಿರುದ್ಧ ಪ್ರತಿಭಟಿಸುತ್ತಾರೋ ಅಂಥವರ ವಿರುದ್ಧ ಖುದ್ದು ನಿಂತು ಗೂಂಡಾಗಿರಿ ನಡೆಸುವುದೇ ಈತನ ಕುಲಕಸುಬು.

ಸದ್ಯ ತಲಘಟ್ಟಪುರ ಪೊಲೀಸ್ ಠಾಣೆಗೆ ಎಸ್.ಐ. ಆಗಿರುವ ಎ.ಪಿ. ಕುಮಾರ್ ಮತ್ತು ಹಾರೋಹಳ್ಳಿ ಪೊಲೀಸ್ ಠಾಣೆಗೆ ಇನ್ಸ್‌ಪೆಕ್ಟರ್ ಆಗಿರುವ ಎಂ. ಮಹದೇವ್ ಇಬ್ಬರನ್ನೂ ಇಲ್ಲಿಗೆ ತಂದವನೇ ರುದ್ರೇಶ. ನೈಸ್ ಖದೀಮ ಖೇಣಿ ಕರಂದ್ಲಾಜೆಯ ಮೂಲಕ ರುದ್ರೇಶನ ಈ ಇಬ್ಬರು ಪರಮಾಪ್ತ ಪೊಲೀಸ್ ಅಧಿಕಾರಿಗಳನ್ನು ತಂದಿದ್ದು ಕೂಡ ತನ್ನ ವಿರುದ್ಧ ಆಕಾಲದಿಂದಲೂ ಪ್ರತಿಭಟಿಸುತ್ತಲೇ ಬಂದ ರೈತನಾಯಕ ಪಂಚಲಿಂಗಯ್ಯನನ್ನು ಮಟ್ಟ ಹಾಕುವುದಕ್ಕೇ.


ಕನಕಪುರ ರಸ್ತೆಗುಂಟ ಹೆಮ್ಮಿಗೆಪುರ, ಕೋನಸಂದ್ರ, ಸೋಂಪುರ, ವರಾಹಸಂದ್ರ ಇತ್ಯಾದಿ ಕೆಂಗೇರಿ ಹೋಬಳಿಯ ಗ್ರಾಮಗಳ ರೈತರನ್ನು ಸಂಘಟಿಸಿ ಆ ಕಾಲದಿಂದಲೂ ನೈಸ್

▶▶▶

ಜನೆಯ ದೌರ್ಜನ್ಯದ ವಿರುದ್ಧ ಹೋರಾಡುತ್ತಲೇ ಬಂದ ಪಂಚಲಿಂಗಯ್ಯನ ಜನಪ್ರಿಯತೆ ಕಂಡೇ ದ ವಿಧಾನಸಭಾ ಚುನಾವಣೆಯಲ್ಲಿ ಕುಮಾರಸ್ವಾಮಿ ಅವರಿಗೆ ಶವಂತಪುರದ ಜೆಡಿಎಸ್ ಟಿಕೆಟ್ಟು ಟ್ಟಿದ್ದು. ಶೋಭಾ ಕರಂದ್ಲಾಜೆ ರುದ್ಧ ಮೂವತ್ತು ಸಾವಿರಕ್ಕೂ ಅಧಿಕ ಪಡೆಗಿಟ್ಟಿಸಿದ್ದು. ನೈಸ್ ಹಾವಳಿಗೆ ಂಕಿ ನಾಶವಾದ ರೈತರ ೋರ್‌ವೆಲ್ ಉಳಿಸಲು ರಸ್ತೆ ತಡೆ ಸಿದ್ದು, ಬೇಣಿಯ ಭೂಕಬಳಿಕೆ ರುದ್ಧ ರಾಜಭವನ ಚಲೋ ರ್ಯಕ್ರಮ ಹಮ್ಮಿಕೊಂಡಿದ್ದು, ಪ್ಪುಟ್ಟ ಹೋರಾಟಗಳಿಗೆ ಸಾವಿರಾರು ರರನ್ನು ಸೇರಿಸುತ್ತಿದ್ದದ್ದು; ಒಟ್ಟಾರೆ ಜೆಪಿಯ ಪಾಲಿಗೆ ಪಂಚಲಿಂಗಯ್ಯ ಯಾವತ್ತಿದ್ದರೂ ಗಿಹೋಣ. ಹೇಗೂ ಬಿಜೆಪಿ ಅಧಿಕಾರದಲ್ಲಿದೆ. ದರ ವಿರುದ್ಧ ಮಾತ್ರವಲ್ಲದೇ ರುದ್ರೇಶನ ಕಬಳಿಕೆ ವಿರುದ್ಧವೂ ಹೋರಾಡಿಕೊಂಡೇ ಬಂದ ಂಚಲಿಂಗಯ್ಯನನ್ನು ಮಟ್ಟ ಹಾಕಲು ಇದೇ ಲ.

ಹಾಗೆಂದು ಲೆಕ್ಕ ಹಾಕಿಯೇ ಹೊಂಚ ಕುಳಿತಿದ್ದ ರುದ್ರೇಶನಿಗೆ ಒಂದೂವರೆ ತಿಂಗಳ ಹಿಂದೆ ಘಟಿಸಿದ ಪುಟ್ಟಮ್ಮ ಎಂಬ ಮುದುಕಿಯ ಕೊಲೆ






ಪೊಲೀಸರ ಗೂಂಡಾಗಿರಿ ವಿರುದ್ಧ ಪ್ರತಿಭಟನೆ

ಪ್ರಕರಣವೇ ನೆಪವಾಗಿದೆ. ಅನ್ಯಾಯವಾಗಿ ಪಂಚಲಿಂಗಯ್ಯರ ಅಕ್ಕನ ಮಗ ಬಸವರಾಜನನ್ನು ಕೊಲೆ ಕೇಸಿಗೆ ಸಿಲುಕಿಸಿ ಜೈಲಿಗೆ ಹಾಕಿದ್ದಾನೆ. ಇದರ ವಿರುದ್ಧ ಪ್ರತಿಭಟನೆಗೆಂದು ಕರಪತ್ರ ಹಂಚುತ್ತಿದ್ದ ಇನ್ನಿಬ್ಬರು ಜೆಡಿಎಸ್ ಕಾರ್ಯಕರ್ತರಾದ ಆಟೋ ರಮೇಶ ಮತ್ತು ಪ್ರಭು ವಿರುದ್ಧವೂ ಕ್ರಿಮಿನಲ್ ಕೇಸು ಹಾಕಿಸಿದ್ದಾನೆ.

ಬಹುಶಃ ಇಷ್ಟಕ್ಕೇ ಹೆದರಿಕೊಂಡು ಪಂಚಲಿಂಗಯ್ಯ ತೆಪ್ಪಗಾಗಬಹುದೆಂದು ರುದ್ರೇಶ ಲೆಕ್ಕ ಹಾಕಿದ್ದನೇನೊ. ಆದರೆ ಎಂಟು ಸಾವಿರ ಮಂದಿ ರೈತರನ್ನು ಸಂಘಟಿಸಿ ತಲಘಟ್ಟಪುರ ಠಾಣೆಗೆ ಮುತ್ತಿಗೆ ಹಾಕಿದ ಪಂಚಲಿಂಗಯ್ಯ ಬಿಜೆಪಿ ದುರಾಚಾರಕ್ಕೆ ತಕ್ಕ ಏಟನ್ನೇ ಕೊಟ್ಟಿದ್ದಾರೆ. ಇದು ಶೋಭಾ ಕರಂದ್ಲಾಜೆಯ ಯಶವಂತಪುರ ಕ್ಷೇತ್ರದ ಒಂದು ಪೊಲೀಸ್ ಠಾಣೆಯ ಕತೆಯಾದರೆ ಮತ್ತೊಂದೆಡೆ ತಾವರೆಕೆರೆ ಪೊಲೀಸ್ ಠಾಣೆಯ ಸರ್ಕಾರಿ ಗೂಂಡಾಗಿರಿಯ ವಿರುದ್ಧ ದಿನಕ್ಕೊಂದು ಪ್ರತಿಭಟನೆಗಳಾಗುತ್ತಲೇ ಇವೆ.



ಎಸ್ಸೈ ದೇವರಾಜ್



ಮಹಾದೇವ್


ತಾವರೆಕೆರೆ ಪೊಲೀಸ್ ಠಾಣೆಯ ವ್ಯಾಪ್ತಿಯಲ್ಲಿ ಎಲ್ಲೆಲ್ಲಿ ಕಾಂಗ್ರೆಸ್ ನಾಯಕರ ಪ್ರಾಬಲ್ಯವಿದೆಯೋ, ಬರುವ ಪಾಲಿಕೆ ಚುನಾವಣೆಯಲ್ಲಿ ಬಿಜೆಪಿಯ ವಿರುದ್ಧ ಯಾರು ಓಟು ಕೀಳುತ್ತಾರೋ ಅಂಥ ಒಬ್ಬೊಬ್ಬರನ್ನೇ ಹುಡುಕಿ ಮಟ್ಟಹಾಕಲು ನಿಂತವನು ಕರಂದ್ಲಾಜೆಯ ಪರಮಾಪ್ತ ಮತ್ತು ಯಶವಂತಪುರ ವಿಧಾನಸಭಾ ಕ್ಷೇತ್ರ ಬಿಜೆಪಿ ಅಧ್ಯಕ್ಷ ಮಂಗನಹಳ್ಳಿ ನಾಗರಾಜ. ಈತ ಕರಂದ್ಲಾಜೆಯ ಪಿ.ಎ. ರವೀಂದ್ರನ ಚೇಲಾ ಕೂಡ. ಕೇವಲ ಮೂರು ವರ್ಷದೊಳಗೆ ಮಂಗನಹಳ್ಳಿಯ ಬಡರೈತರನ್ನು ಮುಂಡಾಮೋಚಿ 25 ಕೋಟಿಯ ಆಸ್ತಿವಂತನಾದ ನಾಗರಾಜನ ಬಂಗಲೆಯೇ ಮೂರು ಕೋಟಿಗೆ ಬಾಳುತ್ತದೆ.

ಇಂಥವನ ಜೊತೆಗೆ ಹುಲ್ಲಾಳು ಶಿವಶಂಕರ್ ಎಂಬ ಹುಟ್ಟಾ ಚೆಡ್ಡಿಯೂ ಕೈಜೋಡಿಸಿದ್ದಾನೆ. ಹೇಳಿಕೇಳಿ ತಾವರೆಕೆರೆ ಪೊಲೀಸ್ ಠಾಣೆಗೆ ಸಬ್ ಇನ್ಸ್‌ಪೆಕ್ಟರ್ ಆಗಲು ಬಂದ ಅನಿಲ್‌ಕುಮಾರ್ ಕರಂದ್ಲಾಜೆಯ ಪಕ್ಕಾ ಬಂಟ. ಬರುವ ಪಾಲಿಕೆ ಚುನಾವಣೆಯಲ್ಲಿ ಯಶವಂತಪುರದ ಮೂರು ವಾರ್ಡುಗಳಾದ ಹೆಮ್ಮಿಗೆಪುರ, ಕೆಂಗೇರಿ ಉಪನಗರ ಮತ್ತು ಹೆರೋಹಳ್ಳಿಗಳಲ್ಲಿ ಶತಗತಾಯ ಬಿಜೆಪಿಯ ಅಭ್ಯರ್ಥಿಗಳೇ ಗೆಲ್ಲಬೇಕೆಂದರೆ ಈ ಭಾಗದ ಪ್ರಭಾವಿ ಜೆಡಿಎಸ್ ಮತ್ತು ಕಾಂಗ್ರೆಸ್ ಕಾರ್ಯಕರ್ತರನ್ನೆಲ್ಲ ಮುಗಿಸಲೇಬೇಕು.

ಮಂಗನಹಳ್ಳಿ ನಾಗರಾಜ ಮತ್ತು ಕರಂದ್ಲಾಜೆ ಸೇರಿ ಹೆಣೆದ ಇಂಥದೊಂದು ಸಂಚಿಗೆ ಮೊದಲು ಬಲಿಯಾದವನು ಜೆಡಿಎಸ್ ನಾಯಕ ಮಂಗನಹಳ್ಳಿ ಮಹೇಶಪ್ಪ ಉರ್ಫ್ ಸುರೇಶ. ಅಕ್ಟೋಬರ್ 24 ರಂದು ಮಹೇಶಪ್ಪನ ಜಮೀನಿಗೆ ರೌಡಿಗಳನ್ನು ನುಗ್ಗಿಸಿದ್ದೇ ಇಲ್ಲಿ ರಸ್ತೆ ಮಾಡ್ತೀವಿ, ದಲಿತರ ಕಾಲೋನಿಗೆ ಮೋರಿಯನ್ನೂ ಕಟ್ಟಿಸ್ತೀನಿ ಎಂದು ನಾಗರಾಜ ಹೂಂಕರಿಸಿದ್ದಾನೆ. ಅಲ್ಲಯ್ಯಾ ರಸ್ತೆ ಮಾಡೋದಕ್ಕೆ ನನ್ನ ಜಮೀನೇ ಬೇಕಾ? ಕಾರ್ಪೊರೇಷನ್‌ನವರ ಪ್ಲಾನ್ ಎಲ್ಲಿದೆ? ಎಂದು ಮಹೇಶಪ್ಪ ಕೇಳಿದ್ದಾನೆ.

ಅಷ್ಟೇ, ಮಹೇಶಪ್ಪ ತನ್ನ ಮೇಲೆ ಆಸಿಡ್ ಹಾಕಿ ಕೊಲ್ಲೋದಕ್ಕೆ ಬಂದಿದ್ದ ಎಂದು ನಾಗರಾಜು ಬ್ಯಾಡರಹಳ್ಳಿ ಪೊಲೀಸ್ ಠಾಣೆಗೆ ದೂರು ಕೊಟ್ಟ. ಎಸ್.ಐ. ಅನಿಲ್‌ಕುಮಾರ್ ತಲೆಬುಡ ಕೂಡ ವಿಚಾರಿಸದೇ ಮಹೇಶಪ್ಪನನ್ನು ಹಿಡಿದು ಜೈಲಿಗೆ ಹಾಕಿಬಿಟ್ಟ. ಇದರ ವಿರುದ್ಧ ಮರುದಿನವೇ ಜೆಡಿಎಸ್ ಮತ್ತು ಕಾಂಗ್ರೆಸ್ ಕಾರ್ಯಕರ್ತರು ಬ್ಯಾಡರಹಳ್ಳಿ ಪೊಲೀಸ್ ಠಾಣೆಯ ಮುಂದೆ ಪ್ರತಿಭಟಿಸಿದ್ದಾರೆ.

ಹೀಗೆ ಪ್ರತಿಭಟಿಸಿದ ಮರುದಿನ ಅಂದರೆ ಅಕ್ಟೋಬರ್ 27 ರಂದು ಹುಲ್ಲಾಳು ಉಪನಗರದಲ್ಲಿ ಇದೇ ನಾಗರಾಜ ಮತ್ತು ಶಿವಶಂಕರ್ ಸೇರಿಕೊಂಡು ಮತ್ತೊಂದು ಅನಾಹುತ ಮಾಡಿಬಿಟ್ಟಿದ್ದರು. ಹುಲ್ಲಾಳುನಲ್ಲಿ ಆಕಾಲದಿಂದಲೂ ಮನೆ ಕಟ್ಟಿಕೊಂಡಿದ್ದ ಇನ್ನೂರೈವತ್ತು ಮಂದಿ ಬಡವರ ಮನೆಯನ್ನೇ ಧ್ವಂಸಗೊಳಿಸುತ್ತೇನೆಂದು ತಹಶೀಲ್ದಾರ್ ಬೀರಲಿಂಗೇಗೌಡನ ಸಮೇತ ಬಂದ ಬಿಜೆಪಿ ಗ್ಯಾಂಗ್ ಅಲ್ಲಿದ್ದ ಬಡವರನ್ನು ದಬಾಯಿಸಿದೆ. ಆತಂಕಕ್ಕೆ ಬಿದ್ದ ಬಡವರು ಸಹಜವಾಗೇ ಬಿಜೆಪಿ ಗ್ಯಾಂಗ್ ವಿರುದ್ಧ ಧಿಕ್ಕಾರ ಕೂಗಿದ್ದಾರೆ. ಅಷ್ಟೇ, ನಾಗರಾಜ ಮತ್ತು ಶಿವಶಂಕ್ರ ತಮ್ಮನ್ನು ಹುಲ್ಲಾಳು ಕಾಂಗ್ರೆಸ್ ನಾಯಕ ಚನ್ನಮಲ್ಲಪ್ಪ ಎಂಬಾತ ಕೊಲೆಗೆ ಯತ್ನಿಸಿದನೆಂದು ಮತ್ತೊಂದು ಸುಳ್ಳು ದೂರು ದಾಖಲಿಸಿದ್ದಾರೆ.



ರೈತನಾಯಕ ಪಂಚಲಿಂಗಯ್ಯ

ಬ್ಯಾಡರಹಳ್ಳಿ ಎಸ್.ಐ. ಅನಿಲ್‌ಕುಮಾರ್ ತಡಮಾಡದೇ ಚನ್ನಮಲ್ಲಪ್ಪನನ್ನು ಹಿಡಿದು ಜೈಲಿಗೆ ದಬ್ಬಿದ್ದಾರೆ.

ಯಾವ ಸರ್ಕಾರ ತಾನೇ ಅಧಿಕಾರವಿದ್ದಾಗ ತನ್ನ ವಿರೋಧಿಗಳ ಮೇಲೆ ಈ ಥರದ ಅಟ್ಟಹಾಸ ಮೆರೆದಿತ್ತು?


ಅಷ್ಟಕ್ಕೂ ಹುಲ್ಲಾಳು ಕಾಂಗ್ರೆಸ್ ಮುಖಂಡನ ತಪ್ಪೇನೆಂದರೆ ಆತ ಮಾಜಿ ತಾಲ್ಲೂಕು ಪಂಚಾಯ್ತಿ ಅಧ್ಯಕ್ಷ ಅನಿಲ್‌ಕುಮಾರ್ ಎಂಬ ಜನಪ್ರಿಯ ಕಾಂಗ್ರೆಸ್ ಮುಖಂಡನ ಅಣ್ಣನಾಗಿದ್ದದ್ದು. ಕಳೆದ ವಿಧಾನಸಭಾ ಚುನಾವಣೆಯಲ್ಲಿ ಕರಂದ್ಲಾಜೆಯ ವಿರುದ್ಧ ಕಾಂಗ್ರೆಸ್ಸಿಗೆ ಸರಿಸುಮಾರು ಇಪ್ಪತ್ತು ಸಾವಿರದಷ್ಟು ಓಟು ಕೊಡಿಸಿದ ಅನಿಲ್‌ಕುಮಾರ್ ಬರುವ ಪಾಲಿಕೆ ಚುನಾವಣೆಗೆ ಕೆಂಗೇರಿ ಉಪನಗರದ ಕಾಂಗ್ರೆಸ್ ಟಿಕೆಟ್ ಆಕಾಂಕ್ಷಿ. ಅದಕ್ಕೆ ಈಗಲೇ ಚಾಲಕಟ್ ಮಾಡಿ ಸ್ಮಶಾನದ ನೆಪದಲ್ಲಿ ಆತನ ಬೆಂಬಲಿಗರ 250 ಮನೆಗಳನ್ನು ಉರುಳಿಸಿಬಿಟ್ಟರೆ ಬಿಜೆಪಿಗದೇ ಲಾಭವಾಗುತ್ತದೆ.

ಇಂಥ ಕುತಂತ್ರಕ್ಕೆ ಬಿದ್ದ ಬಿಜೆಪಿ ಗ್ಯಾಂಗ್ 250 ಮಂದಿ ಬಡವರ ಮನೆಗಳಿಗೂ ಕೊಳ್ಳಿಯಿಟ್ಟಿದೆ. ಅದನ್ನು ಪ್ರತಿಭಟಿಸಿದ ಕಾಂಗ್ರೆಸ್ ನಾಯಕ ಚನ್ನಮಲ್ಲಪ್ಪನನ್ನು ಅನ್ಯಾಯವಾಗಿ ಜೈಲಿಗೆ ಹಾಕಿದೆ.

ಅಕ್ಟೋಬರ್ 15 ರಿಂದ 28 ರ ತನಕ ಯಶವಂತಪುರ ಕ್ಷೇತ್ರವೊಂದರಲ್ಲೇ ಓರ್ವ ಕಾಂಗ್ರೆಸ್ ಮತ್ತು ನಾಲ್ವರು ಜೆಡಿಎಸ್ ಕಾರ್ಯಕರ್ತರನ್ನು ಬೊಟ್ಟ ಕೇಸಿನ ಮೇಲೆ ಅನ್ಯಾಯವಾಗಿ ಜೈಲುಪಾಲು ಮಾಡಿದ ಬಿಜೆಪಿ ಸರ್ಕಾರ ಯಾವ ಮುಖ ಹೊತ್ತು ರಾಮರಾಜ್ಯದ ಮಾತಾಡುತ್ತದೆ?

ಅಥವಾ ಬಿಜೆಪಿಯ ರಾಮರಾಜ್ಯದ ಪರಿಕಲ್ಪನೆಯೇ ಇದಾ? ■

ಹೇರೋಹಳ್ಳಿಯಲ್ಲಿ ಯಡ್ಡಿ ಬಂಟರ ಜಂಗಲ್‌ರಾಜ್



ಜವರಾಯಿಗೌಡ

ಯಾರಾದರೂ ದಾನಿಯೊಬ್ಬ ತನ್ನದೇ ದುಡ್ಡು ಹಾಕಿ ಜನಕ್ಕೆ ರಸ್ತೆ, ಕುಡಿಯುವ ನೀರು ಕಲ್ಪಿಸುತ್ತಾನೆಂದರೆ ಯಾರಾದರೂ ಅದನ್ನು ತಡೆಗಟ್ಟುವುದುಂಟಾ?

ನಂಬಿದರೆ ನಂಬಿ ಬಿಟ್ಟರೆ ಬಿಡಿ: ಹೇರೋಹಳ್ಳಿಯ ಜೆಡಿಎಸ್ ನಾಯಕ ಟಿ.ಎನ್. ಜವರಾಯಿಗೌಡರಿಗೆ ಬೋರ್‌ವೆಲ್ ಹಾಕಿಸದಂತೆ, ರಸ್ತೆ ನಿರ್ಮಿಸದಂತೆ ಬಿಜೆಪಿ ಸರ್ಕಾರವೇ ನೋಟೀಸು ಕೊಟ್ಟಿದೆ ಮತ್ತು ಅವರ ವಿರುದ್ಧ ತಾವರೆಕೆರೆ ಪೊಲೀಸ್ ಠಾಣೆಯಲ್ಲಿ ದೂರನ್ನೂ ದಾಖಲಿಸಿದೆ!

ಜವರಾಯಿಗೌಡ ಕಾಮಾಕ್ಷಿಪಾಳ್ಯ, ಸುಂಕದಕಟ್ಟೆ ಮತ್ತು ಮಾಗಡಿರಸ್ತೆಯ ಹೇರೋಹಳ್ಳಿ ಭಾಗದ ಜನಪ್ರಿಯ ಸಮಾಜ ಸೇವಕ. ಹೆರೋಹಳ್ಳಿ ಸುತ್ತಮುತ್ತಲ ಮಾದೇಶ್ವರ ನಗರ, ವಿಘ್ನೇಶ್ವರ ನಗರ, ಪ್ರಸನ್ನ ಲೇಔಟ್, ಅಂದ್ರಹಳ್ಳಿ ಲಿಂಗದೀರನಹಳ್ಳಿ, ತಿಗಳರಪಾಳ್ಯ ಕರಿಓಬನಹಳ್ಳಿ ಇತ್ಯಾದಿ ಏರಿಯಾಗಳಲ್ಲಿ ಕಳೆದ ಅನೇಕ ವರ್ಷಗಳಿಂದ ಕುಡಿಯುವ ನೀರಿನ ಭವಣೆ ಹೇಳತೀರದು. ಕಳೆದ ಕೆಲ ದಿನಗಳಿಂದ ಅವರೇ ನಿಂತು ಹತ್ತಾರು ಬೋರ್‌ವೆಲ್ ಹಾಕಿಸಿದ್ದಾರೆ. ನೀರಿನ ಸಂಗ್ರಹಕ್ಕೆಂದು ತಾವೇ ದುಡ್ಡು ಹಾಕಿ ಟ್ಯಾಂಕುಗಳನ್ನೂ ನಿರ್ಮಿಸಿದ್ದಾರೆ. ತಮ್ಮ ಖರ್ಚಲ್ಲೇ ಮೈಲಿಗಟ್ಟಲೇ ಪೈಪುಗಳನ್ನು ಎಳೆದು ಮನೆಮನೆಗೂ ನೀರು ಕೊಟ್ಟಿದ್ದಾರೆ. ಅಷ್ಟೇ ಏಕೆ, ಈ ಭಾಗದ ನಾಲ್ಕು ಪ್ರಮುಖ ಏರಿಯಾಗಳ ಮಣ್ಣಿನ ರಸ್ತೆಗೆ ತಾವೇ ದುಡ್ಡು ಹಾಕಿ ಟಾರ್ ಕೂಡ ಹಾಕಿಸಿದ್ದಾರೆ.

ಉದ್ದೇಶ ಏನೇ ಇರಲಿ, ತನ್ನ ಖರ್ಚಲ್ಲೇ ಬೋರ್‌ವೆಲ್ ಕೊರೆದು, ಟ್ಯಾಂಕ್ ಕಟ್ಟಿಸಿ, ಪೈಪ್ ಎಳೆದು ಮನೆ ಮನೆಗೆ ನೀರು ಕೊಟ್ಟರೆ ಅದರಲ್ಲಿ ತಪ್ಪೇನಿದೆ? ಆದರೆ ಯಶವಂತಪುರದ ಬಿಜೆಪಿ ಅಧಿನಾಯಕಿ ಕರಂದ್ಲಾಜೆ ಮತ್ತು ಆಕೆಯ ಚೇಲಾ ಮಂಗನಹಳ್ಳಿ ನಾಗರಾಜ್ ಪಾಲಿಗಿದೇ ಮಹಾಪರಾಧವಾಯಿತು. ಬಿಬಿಎಂಪಿಯ ಹೇರೋಹಳ್ಳಿ ಉಪವಿಭಾಗದ ಇಂಜನಿಯರ್ ಕೆ.ಬಿ. ದೇವರಾಜ್‌ನನ್ನು ಎತ್ತಿಕಟ್ಟಿ ಆತನ ಮೂಲಕ ತಾವರೆಕೆರೆ ಪೊಲೀಸ್



ಠಾಣೆಗೆ ದೂರು ಕೊಡಿಸಿದ್ದಾರೆ. ಆತನ ದೂರು ಹಿಡಿದು ತಾವರೆಕೆರೆ ಎಸ್ಸೈ ಅನಿಲ್‌ಕುಮಾರ್ ಜವರಾಯಿಗೌಡರನ್ನು ಕರೆಸಿದ್ದೇ ಇನ್ನು ಮುಂದೆ ಬೋರ್‌ವೆಲ್, ರಸ್ತೆ, ಟ್ಯಾಂಕು ಯಾವುದನ್ನೂ ಕಟ್ಟಿಸಕೂಡದು, ಹಾಗೇನಾದರೂ ಮಾಡಿದರೆ ಅರೆಸ್ಟ್ ಮಾಡಬೇಕಾಗುತ್ತದೆ ಎಂದು ಧಮಕಿ ಕೊಡುತ್ತಾನೆ.


ಜನಕ್ಕೆಂದು ಬೋರ್‌ವೆಲ್ ಹಾಕಿಸುತ್ತಿದ್ದ, ರಸ್ತೆ ನಿರ್ಮಿಸುತ್ತಿದ್ದ ಜವರಾಯಿಗೌಡರ ಬೆಂಬಲಿಗರಾದ ಅರುಣ್ ಗೌಡ, ದೇವೇಗೌಡ, ಅಂದ್ರಳ್ಳಿ ಪುಟ್ಟರಾಜು, ಸುರೇಶಪ್ಪ, ಅಂದ್ರಳ್ಳಿ ರಂಗನಾಥ್ ಮುಂತಾದವರನ್ನೂ ಪೊಲೀಸರು ಲಾಠಿ ಬೀಸಿ ಓಡಿಸುತ್ತಿದ್ದಾರೆ.

ಇದು ಯಾವ ಜಂಗ್ಲೀ ನ್ಯಾಯ? ಮುಂಬರುವ ಪಾಲಿಕೆ ಚುನಾವಣೆಗೆಂದೇ ಬಕಪಕ್ಷಿಗಳಂತೆ ಕಾದು ಕೂತ ಬ್ಯಾಡರಳ್ಳಿ ರಾಜಪ್ಪ, ಹೇರೋಹಳ್ಳಿ ರೇಣುಕ, ತಿಪ್ಪೇನಹಳ್ಳಿ ಹನುಮಂತರಾಯಪ್ಪ, ಕೊಡಿಗೇಹಳ್ಳಿ ಪಂಚಾಯ್ತಿ ಛೇರ್ಮನ್ ನಂಜುಂಡೇಶ್ ಮುಂತಾದವರೆಲ್ಲರೂ ಯಡ್ಡಿ ಶಿಷ್ಯರೇ. ಹುಟ್ಟಾ ಭೂಕಂಟಕರು. ಹೊಡೆದ ಕೊಳ್ಳೆಯನ್ನು ಜನಕ್ಕಾದರೂ ಹಂಚಬೇಕು ತಾನೆ? ಅಥವಾ ತಾವಾದರೂ ರಸ್ತೆ ಬೋರ್‌ವೆಲ್ ಹಾಕಿಸಬೇಕು. ಅದನ್ನು ಬಿಟ್ಟು ಇನ್ಯಾರೋ ತನ್ನ ಖರ್ಚಲ್ಲಿ ಜನಕ್ಕೆ ನೀರು, ರಸ್ತೆ ಕೊಟ್ಟರೆ ಅದಕ್ಕೂ ಕಲ್ಲು ಹಾಕುವ ಬಿಜೆಪಿಯ ಸರ್ಕಾರಿ ಗೂಂಡಾಗಿರಿಯಲ್ಲದೇ ಮತ್ತೇನು? ■

ಕೆಂಗೇರಿಯ ಸ್ಲಮ್ಮಿಗೆ ಯಡ್ಡಿ ನಾಲಿಗೆ

ಅಕ್ಟೋಬರ್ 26 ರಂದು ಕರಂದ್ಲಾಜೆ ಮತ್ತು ನಾಯ್ಕು ಸಮೇತ ನಗರ ಪ್ರದಕ್ಷಿಣೆಗೆಂದು ಬಂದ ಮುಖ್ಯಮಂತ್ರಿ ಯಡ್ಡಿ ಯಶವಂತಪುರಕ್ಕೇಕೆ ಬಂದರು? ಅದೂ ಕೆಂಗೇರಿಯ ಗಾಂಧಿನಗರದ ಹೊಸಕೆರೆಗೇ ಏಕೆ ಭೇಟಿಕೊಟ್ಟರು?

ಹಾಗೇ ಕೆಂಗೇರಿಯ ಹೊಸಕೆರೆ ಏರಿಯ ಮೇಲೆ ನಿಂತು ಇದನ್ನು ಪ್ರವಾಸಿ ತಾಣವನ್ನಾಗಿ ಮಾಡುತ್ತೇನೆಂದು ಯಡ್ಡಿ ಡೈಲಾಗ್ ಹೊಡೆದ ಮರುದಿನಕ್ಕೇ ಅದರ ಸಮೀಪದ ಗಾಂಧಿನಗರಕ್ಕೆ ನುಗ್ಗಿದ ಬಿಡಿಎ ಅಧಿಕಾರಿಗಳ ಹಿಂಡೊಂದು ಅಲ್ಲಿದ್ದ ಐನೂರಕ್ಕೂ ಅಧಿಕ ಬಡವರ ಮನೆಗಳನ್ನು ಖಾಲಿ ಮಾಡುವಂತೆ ಪೀಡಿಸುತ್ತಿತ್ತು, ಕಳೆದ ಇಪ್ಪತ್ತು ವರ್ಷಗಳಿಂದ ಹೊಸಕೆರೆಯ ಗೋಮಾಳದ ಒಂದು ಭಾಗದಲ್ಲಿ ಐನೂರಕ್ಕೂ ಅಧಿಕ ಗುಡಿಸಲುಗಳನ್ನು ಹಾಕಿಕೊಂಡಿರುವ ಬಹುತೇಕ ಬಡವರು ಕಾಂಗ್ರೆಸ್ ಮತ್ತು ಜೆಡಿಎಸ್‌ನ ಖಾಯಂ ಮತದಾರರು. ಸ್ಥಳೀಯ ರಮೇಶ್



ಉತ್ತರಹಳ್ಳಿಗೆ ಶಾಸಕನಾಗಿದ್ದಾಗಿನಿಂದಲೂ ಆಶ್ರಯ ಯೋಜನೆಯಡಿ ಮನೆ ಕಟ್ಟಿಸಿಕೊಂಡಿದ್ದ ಇಂಥ ಬಡವರನ್ನೆಲ್ಲ ಎತ್ತಂಗಡಿ ಮಾಡಿಬಿಟ್ಟರೆ ಬರುವ ಪಾಲಿಕೆ ಚುನಾವಣೆಯಲ್ಲಿ ಕಾಂಗ್ರೆಸ್ಸಿಗೆ ಎರಡೂವರೆ ಸಾವಿರದಷ್ಟು ಮತ ಕೈ ತಪ್ಪುತ್ತದೆ.

ಬಿಜೆಪಿ ವತಿಯಿಂದ ಕೆಂಗೇರಿ ಉಪನಗರಕ್ಕೆ ಕೌನ್ಸಿಲರ್‌ಗಳಾಗಲು ರ. ಆಂಜನಪ್ಪ, ಕೇಬಲ್ ಸುಧೀರ, ಮುನಿರಾಜು, ಟೈಲರ್ ಸತ್ಯ ಮುಂತಾದ ನೆಲಗಳ್ಳರ ಹಿಂಡೇ ಕಾದು ಕೂತಿದೆ. ಕಳೆದ ಬಾರಿ ಇಲ್ಲಿಂದ ಗೆದ್ದಿದ್ದ ಕಾಂಗ್ರೆಸ್ಸಿನ ಸುಬ್ಬಲಕ್ಷ್ಮಮ್ಮನ ಬದಲಿಗೆ ಹುಲ್ಲಾಳು ಅನಿಲ್‌ಕುಮಾರ್ ನಿಂತುಬಿಟ್ಟರೆ ಗೆಲುವು ಶತಸ್ಸಿದ್ಧ. ಅದನ್ನು ತಪ್ಪಿಸಬೇಕೆಂದರೆ ಅಲ್ಲಿದ್ದ ಬಡವರನ್ನು ನಿಕಾಲಿ ಮಾಡಿ ಕೆರೆಯನ್ನು ಪ್ರವಾಸಿ ತಾಣದ ನೆಪದಲ್ಲಿ ಯಾರಾದರೂ ಬಿಲ್ಡರ್‌ಗೆ ಒಪ್ಪಿಸುವುದೂ ಸಲೀಸಾಗುತ್ತದೆ. ಇದು ಬಿಜೆಪಿಯ ಹುನ್ನಾರ. ತನ್ನ ಸ್ವಾರ್ಥಕ್ಕಾಗಿ ಬಿಜೆಪಿಗೆ ಬಡವರ ಗುಡಿಸಲಾದರೇನು? ಕೆರೆ ಕಟ್ಟೆಯಾದರೇನು?

ಹಾಗೊಮ್ಮೆ ಕೆರೆಯನ್ನೇ ಉಳಿಸುವುದು ಯಡ್ಡಿಯ ಪ್ರಾಮಾಣಿಕ ಕಳಕಳಿಯಾಗಿದ್ದರೆ ಮಂತ್ರಿ ಡೆವಲಪರ್ಸ್, ಪೂರ್ವಂಕರ ಬಿಲ್ಡರ್ಸ್, ಆದರ್ಶದ ಜೈಶಂಕರ್, ರೆಡ್ಡಿ ವೀರಣ್ಣ ಕುಪೇಂದ್ರ ರೆಡ್ಡಿಯಂಥವರು ಕಬಳಿಸಿರುವ ಕೆರೆಗಳನ್ನು ಮೊದಲು ಕಾಪಾಡಬೇಕು ತಾನೆ?

ಸದ್ಯ ಬಿಜೆಪಿ ದುರಾಚಾರದ ವಿರುದ್ಧ ಕೆಂಗೇರಿಯ ಇಡೀ ಗಾಂಧಿನಗರ ಸ್ಲಮ್ಮು ತಿರುಗಿಬಿದ್ದಿದೆ. ■

ಮೈಸೂರು ಸಹಕಾರ ಕ್ಷೇತ್ರದಲ್ಲಿ ಭಾರೀ ಹೆಗ್ಗಣಗಳು





ಕರ್ನಾಟಕದ ಸಹಕಾರ ಕ್ಷೇತ್ರದ ಅಸಲಿ ಚಹರೆಯನ್ನು ಅರ್ಥ ಮಾಡಿಕೊಳ್ಳಬೇಕೆಂದರೆ ನೀವೊಮ್ಮೆ ಮೈಸೂರಿಗೆ ಬರಬೇಕು. ಇದೀ ಸಹಕಾರ ಕ್ಷೇತ್ರ ಯಾವ ರೀತಿ ಎಕ್ಕುಟ್ಟಿ ಹೋಗಿದೆ, ನೀವು ನೀಡುವ ದೂರನ್ನೇ ಆಧಾರವಾಗಿಟ್ಟುಕೊಂಡು ಇಲಾಖೆಯ ಅಧಿಕಾರಿಗಳು ಹೇಗೆ ದುಡ್ಡುಮಾಡುತ್ತಾರೆ, ಹೇಗೆ ದರ್ಬಾರು ನಡೆಸುತ್ತಾರೆ – ಎಲ್ಲಾ ಕಣ್ಣಿಗೆ ರಾಚುತ್ತದೆ; ಅಕ್ರಮಗಳ, ಅವ್ಯವಹಾರಗಳ, ಭ್ರಷ್ಟಾಚಾರಗಳ ದಿಗ್ದರ್ಶನವಾಗುತ್ತದೆ. ಮೈಸೂರಿನ ಸಹಕಾರಿ ಸಂಘಗಳ ಕಾರ್ಯವೈಖರಿಯನ್ನು ತೋರಿಸುವ ಸಲುವಾಗಿ ಸದ್ಯಕ್ಕೆ ಸ್ಯಾಂಪಲ್‌ಗಾಗಿ ಮೂರು ಸಹಕಾರ ಸಂಘಗಳ ಅಸಲಿ ಚಹರೆಗಳನ್ನು ಜನರಿಗೆ ಪರಿಚಯಿಸುವ ಪ್ರಯತ್ನವನ್ನಿಲ್ಲಿ ಮಾಡಿದ್ದೇವೆ.

ಕೆ.ಎಸ್.ಆರ್.ಪಿ. ಮೌಂಟೆಡ್ ಕಂಪೆನಿ ನೌಕರರ ಸಹಕಾರ ಸಂಘ

ಇದು ಜನಸಾಮಾನ್ಯರಿಗೆ ಸೇರಿದ ಸಂಘವಲ್ಲ, ಪೊಲೀಸ್ ಇಲಾಖೆಯ ನೌಕರರಿಗೆ ಸಂಬಂಧಿಸಿದ್ದು. ಕಾನೂನು ನಿಯಮಗಳನ್ನು ಗೌರವಿಸಿ ಕಾಪಾಡಬೇಕಾದಂತಹ ಪೊಲೀಸ್ ಅಧಿಕಾರಿಗಳು ತಮ್ಮದೇ ಸಹಕಾರ ಸಂಘದಲ್ಲಿ ಎಲ್ಲಾ ನೀತಿನಿಯಮಗಳನ್ನು, ಕಾನೂನುಗಳನ್ನು ಕಾಲಡಿಯಲ್ಲಿ ಹಾಕಿಕೊಂಡು ಕೋಟ್ಯಂತರ ರೂಪಾಯಿಯ ಅವ್ಯವಹಾರ ನಡೆಸುತ್ತಿದ್ದಾರೆ. ಈ ಭ್ರಷ್ಟಾಚಾರಿಗಳ ಹಿಂದಿಗೆ ಸಂಘದ ಅಧ್ಯಕ್ಷ ಹಾಗೂ ಕಾರ್ಯದರ್ಶಿಗಳೇ ಸಾರಥ್ಯ ವಹಿಸಿಕೊಂಡಿದ್ದಾರೆ. ಇವರು ಸಹಕಾರ ತತ್ವದ ಮೂಲ ಆಶಯಕ್ಕೆ ವಿರುದ್ಧವಾಗಿ ಹೇಗೆ ದರ್ಬಾರ್ ನಡೆಸುತ್ತಿದ್ದಾರೆಂಬುದು ಈ ಕೆಳಗಿನ ಒಂದು ಉದಾಹರಣೆಯಲ್ಲಿಯೇ ಸಾಬೀತಾಗುತ್ತದೆ.

1971ರಲ್ಲಿ ತಮ್ಮ ಬಳಿ ಕೆಲಸ ಮಾಡುತ್ತಿದ್ದ ನೌಕರರಿಗೆ ನಿವೇಶನ ಹಂಚುವ ಸಲುವಾಗಿ ಮಹಾರಾಜರಾಗಿದ್ದ ಶ್ರೀಜಯಚಾಮರಾಜೇಂದ್ರ ಒಡೆಯರ್‌ರವರು, ಈ ಸಂಘದ ಅಧ್ಯಕ್ಷರನ್ನು ಟ್ರಸ್ಟಿಯನ್ನಾಗಿಸಿ ಚಾಮುಂಡಿ ಬೆಟ್ಟಕ್ಕೆ ಹೋಗುವ ರಸ್ತೆಯಲ್ಲಿದ್ದ 51 ಎಕರೆ ಜಮೀನನ್ನು ದಾನಪತ್ರದ ಮೂಲಕ ಕೊಟ್ಟಿದ್ದರು. ಅದೇ ಜಮೀನಿನಲ್ಲಿ ಜಯಚಾಮರಾಜೇಂದ್ರ (ಜೆಸಿ) ನಗರ ನಿರ್ಮಾಣವಾಗಿದೆ. ಈ ಬಡಾವಣೆ ನಿರ್ಮಾಣದ ಹೆಸರಿನಲ್ಲಿ ನಡೆದಿರುವ, ನಡೆಯುತ್ತಿರುವ ಕಾನೂನುಗಳ ಉಲ್ಲಂಘನೆ ಕೋಟ್ಯಾಂತರ ರೂಪಾಯಿಗಳ ಅವ್ಯವಹಾರ ಬಹುಶಃ ಬೇರ‍್ಯಾವ ಸಂಘದಲ್ಲೂ ನಡೆದಿಲ್ಲವೆಂದು ಹೇಳಬಹುದು.


ಪರಮೇಶ್ವರ


ರಾಚೇಗೌಡ

ಈ ಸಂಘಕ್ಕೆ ಸಂಬಂಧಿಸಿದ 2006-07ನೇ ಸಾಲಿನ ಲೆಕ್ಕಪತ್ರವನ್ನು ಪಡೆದುಕೊಂಡು ಪುಟಗಳನ್ನು ತಿರುವಿ ಹಾಕಿದರೆ, ನಿವೇಶನ ಮಾರಾಟ ಕುಳುವಾರು ಪಟ್ಟಿ ಎಂಬ ಒಂದು ಪಟ್ಟಿಯನ್ನು ಪ್ರತ್ಯೇಕವಾಗಿ ಲಗತ್ತಿಸಿರುವುದು ಕಂಡುಬರುತ್ತದೆ. ಇದರಲ್ಲಿ 22 ನಿವೇಶನಗಳನ್ನು ಮಾರಾಟ ಮಾಡಿರುವ ಬಗ್ಗೆ ವಿವರ ನೀಡಲಾಗಿದೆ. ಮೈಸೂರು ನಗರ ಹೃದಯಭಾಗದಲ್ಲಿರುವ ಈ ಬಡಾವಣೆಯ ನಿವೇಶನಗಳು ಚದರಡಿಗೆ 1500ರಿಂದ 2000 ರೂಪಾಯಿಗಳಿಗೆ ಮಾರಾಟವಾಗುತ್ತಿವೆ. ಅಂದರೆ 40x60 ಅಳತೆಯ ಒಂದು ನಿವೇಶನ 36 ರಿಂದ 48 ಲಕ್ಷ ರೂಪಾಯಿಗಳವರೆಗೆ ಮಾರಾಟವಾತ್ತದೆ. ಆದರೆ ಈ ಪಟ್ಟಿಯನ್ನು ಗಮನಿಸಿದರೆ 40x60 ಅಳತೆಯ ನಿವೇಶನವನ್ನು ಕೇವಲ 3,60,000 ರೂಪಾಯಿಗಳಿಗೆ ಮಾರಾಟ ಮಾಡಿರುವಂತೆ ಲೆಕ್ಕ ತೋರಿಸಲಾಗಿದೆ! ಈ ಲೆಕ್ಕಪತ್ರವನ್ನು ಪರಿಶೀಲನೆ ನಡೆಸಿರುವ ಸಹಕಾರ ಸಂಘಗಳ ಲೆಕ್ಕ ಪರಿಶೋಧಕ ಪಿ.ಕೆ. ಜಗದೀಶ್ ಹೊಟ್ಟೆಗೆ ಅನ್ನ ತಿಂದು ಕೆಲಸ ಮಾಡಿದ್ದರೆ ಸಂಘದ ಅಧ್ಯಕ್ಷ, ಕಾರ್ಯದರ್ಶಿಗಳು ವರ್ಷದ ಹಿಂದೆಯೇ ಜೈಲುಕಂಬಿಯನ್ನು ಎಣಿಸುತ್ತಿದ್ದರು. ಈ ಪುಣ್ಯಾತ್ಮ ಅದೇನು ತಿಂದನೋ ಗೊತ್ತಿಲ್ಲ, ನಿವೇಶನ ಮಾರಾಟಕ್ಕೆ ಸಂಬಂಧಿಸಿದ ಕ್ರಯಪತ್ರವನ್ನು ಪರಿಶೀಲಿಸದೆ ಜಾಣತನ ಪ್ರದರ್ಶಿಸಿಬಿಟ್ಟಿದ್ದಾನೆ.

ಕುಳುವಾರು ಪಟ್ಟಿಯಲ್ಲಿ 33ನೇ ಸಂಖ್ಯೆಯ ನಿವೇಶನವನ್ನು (45x30 ಅಳತೆಯದ್ದು) 2,02,500 ರೂಪಾಯಿಗಳಿಗೆ ಮಾರಾಟ ಮಾಡಿರುವಂತೆ ಲೆಕ್ಕ ತೋರಿಸಲಾಗಿದೆ. ಇದರ ಕ್ರಯಪತ್ರವನ್ನು ಪರಿಶೀಲಿಸಿದರೆ, 4,05,000 ರೂಪಾಯಿಗಳಿಗೆ ಮಾರಾಟ ಮಾಡಿರುವುದು ಕಂಡುಬರುತ್ತದೆ. ಅದೇ ರೀತಿ 3ನೇ ಸಂಖ್ಯೆಯ ನಿವೇಶನವನ್ನು (40x60 ಅಳತೆಯದ್ದು) 3,60,000 ರೂಪಾಯಿಗಳಿಗೆ ಮಾರಾಟ ಮಾಡಿರುವಂತೆ ಲೆಕ್ಕ ತೋರಿಸಲಾಗಿದೆ. ಕ್ರಯಪತ್ರವನ್ನು ಪರಿಶೀಲಿಸಿದಾಗ 7,20,000 ರೂಪಾಯಿಗಳಿಗೆ ಮಾರಾಟ ಮಾಡಿರುವುದು ಕಂಡುಬರುತ್ತದೆ. ಕ್ರಯಪತ್ರದಲ್ಲಿರುವ ಹಣದ ಅರ್ಧದಷ್ಟನ್ನು ಲೆಕ್ಕಪತ್ರದಲ್ಲಿ ತೋರಿಸಲಾಗಿದೆ. ಅಂದರೆ ದಾಖಲೆಗಳ ಪ್ರಕಾರವೇ ಕೇವಲ 22 ನಿವೇಶನಗಳ ಮಾರಾಟದಲ್ಲಿ 57,82,500 ರೂಪಾಯಿಗಳನ್ನು ಗುಳುಂ ಮಾಡಿದ್ದಾರೆ ಎಂದಾಯಿತು. ಉಳಿದಂತೆ ದಾಖಲೆಗಳ ಹೊರತಾಗಿ ಎಷ್ಟು ಕೋಟಿಯನ್ನು ನುಂಗಿರಬಹುದು?

ದೊಡ್ಡ ಪ್ರಮಾಣದಲ್ಲಿ ಅವ್ಯವಹಾರ ನಡೆದಿದೆ, ಕ್ರಮಕೈಗೊಳ್ಳಿ ಎಂದು ಸಹಕಾರ ಸಂಘಗಳ ಲೆಕ್ಕಪರಿಶೋಧನಾ ಇಲಾಖೆಯ ಸಹಾಯಕ ನಿರ್ದೇಶಕರಾದ ಜಿ.ವಿ.ರಾಮಕೃಷ್ಣರವರಿಗೆ ದೂರು ನೀಡಿ ಸುಮಾರು ಎರಡು ತಿಂಗಳುಗಳಾಗಿವೆ. ಪಾಪ ಸಾಹೇಬ್ರು ಬಹಳ ಬಿಜಿಯಾಗಿದ್ದಾರೆ ಅಂತ ಕಾಣುತ್ತೆ, ಹೀಗಾಗಿ ಇನ್ನು ವಿಚಾರಣೆ ಪ್ರಾರಂಭಿಸಲು ಸಾಧ್ಯವಾಗಿಲ್ಲ, ಸದ್ಯದಲ್ಲಿ ವಿಚಾರಣೆ ನಡೆಯುವ ಲಕ್ಷಣವೂ ಕಂಡುಬರುತ್ತಿಲ್ಲ.

ಸರ್ಕಾರದ ಆದೇಶದ ಪ್ರಕಾರ ಚಾಮುಂಡಿ ಬೆಟ್ಟದ ರಸ್ತೆಯಲ್ಲಿರುವ ನಿವೇಶನಗಳನ್ನು ಹರಾಜಿನ ಮೂಲಕ ಮಾರಾಟ ಮಾಡಬೇಕು. ಆದರೆ ಈ ಆದೇಶಕ್ಕೆ ಕಿಂಚಿತ್ತೂ ಬೆಲೆ ಕೊಡದ ಸಂಘದ ಅಧ್ಯಕ್ಷ ಜಿ.ರಾಚೇಗೌಡ, ಕಾರ್ಯದರ್ಶಿ ಎಚ್.ಎಲ್. ಪರಮೇಶ್ವರ್ ನಿವೇಶನಗಳನ್ನು ನೇರವಾಗಿ ಮಾರಾಟ ಮಾಡುತ್ತಾ ಕೋಟ್ಯಂತರ ರೂಪಾಯಿಯ ಗೋಲ್‌ಮಾಲ್ ನಡೆಸುತ್ತಿದ್ದಾರೆ.


ಇವರ ವಿರುದ್ಧವೂ ಪೊಲೀಸ್ ಮಹಾ ನಿರ್ದೇಶಕರಿಗೆ ದೂರು ನೀಡಲಾಗಿತ್ತು, ಆದರೆ ದುರಂತ ಎಂದರೆ ಈ ಕಳ್ಳರಿಬ್ಬರ ವಿಚಾರಣೆ ನಡೆಸುವ ಜವಾಬ್ದಾರಿಯನ್ನು ಮೈಸೂರು ನಗರದ ಸಹಾಯಕ ಪೊಲೀಸ್ ಆಯುಕ್ತ ಸಿ.ಕೃಷ್ಣಪ್ಪ ಎಂಬ ಮತ್ತೊಬ್ಬ ಮಹಾಕಳ್ಳನಿಗೆ ವಹಿಸಲಾಗಿತ್ತು, ಇನ್ನು ವಿಚಾರಣೆ ಹೇಗೆ ನಡೆಯಿತೆಂಬುದನ್ನು ಪ್ರತ್ಯೇಕವಾಗಿ ವಿವರಿಸುವ ಆವಶ್ಯಕತೆಯೇ ಇಲ್ಲ, ಸಂಘದವರು ತಂದುಕೊಟ್ಟ ನಕಲಿ ದಾಖಲೆಯನ್ನು ಕೈಲಿದಿದು ಕೊಂಡು ಸರ್ಕಾರದ ಆದೇಶದ ಪ್ರಕಾರವೇ ಹರಾಜು ಮೂಲಕ ನಿವೇಶನಗಳನ್ನು ಮಾರಾಟ ಮಾಡಲಾಗಿದೆ, ಯಾವುದೇ ಅವ್ಯವಹಾರ ನಡೆದಿಲ್ಲ ಎಂಬ ವರದಿ ಬರೆದುಕೊಟ್ಟರು.

ವಂಚಕರೊಂದಿಗೆ ಶಾಮೀಲಾಗಿ ಕೃಷ್ಣಪ್ಪನವರು ಸುಳ್ಳು ವರದಿ ನೀಡಿದ್ದಾರೆ ಎಂದು ಪೊಲೀಸ್ ಮಹಾನಿರ್ದೇಶಕರಿಗೆ ಮತ್ತೆ ದೂರನ್ನು ನೀಡಲಾಯಿತು. ಈ ಬಾರಿ ಈ ದೂರಿನ ವಿಚಾರಣೆ ನಡೆಸಿದ ಮೈಸೂರು ನಗರದ ಉಪ ಆರಕ್ಷಕ ಆಯುಕ್ತರಾಗಿದ್ದ ಕೆ.ಟಿ. ಬಾಲಕೃಷ್ಣರವರೂ ಕೂಡ ಅದೇ ನಕಲಿ ದಾಖಲೆಗಳನ್ನು ಕೈಲಿಡಿದುಕೊಂಡು ಎಲ್ಲವೂ ಸರಿಯಾಗಿದೆ, ಯಾವುದೇ ಭ್ರಷ್ಟಾಚಾರ ಅವ್ಯವಹಾರ ನಡೆದಿಲ್ಲ ಎಂದುಬಿಟ್ಟರು.

ಆದರೆ, ಇದರ ವಿರುದ್ಧವೂ ಮತ್ತೆ ಪೊಲೀಸ್ ಮಹಾ ನಿರ್ದೇಶಕರಿಗೆ ದೂರು ನೀಡಲಾಯಿತು. ಈ ವಿಚಾರಣೆಯನ್ನು ಕೈಗೆತ್ತಿಕೊಂಡಿದ್ದು ಸಜ್ಜನಿಕೆಯ ಅಧಿಕಾರಿಯಾಗಿರುವ ಕೆಎಸ್‌ಆರ್‌ಪಿ ಮೌಂಟೆಡ್‌ನ ಡಿವೈಎಸ್ಪಿ ಶ್ರೀ ಚನ್ನಯ್ಯನವರು. ಸಂಘದಲ್ಲಿ ನಡೆದಿರುವ ಅಕ್ರಮ ಅವ್ಯವಹಾರಗಳ ಅಗಾಧತೆಯನ್ನು ನೋಡಿ, ಈ ವಿಚಾರಣೆಯನ್ನು ಸಿಓಡಿ ತನಿಖೆಗೆ ವಹಿಸುವುದೇ ಸೂಕ್ತವೆಂಬ ಅಭಿಪ್ರಾಯವನ್ನು ಬರೆದುಬಿಟ್ಟರು. ಇದನ್ನು ಕೆಎಸ್‌ಆರ್‌ಪಿ ಮೌಂಟೆಡ್‌ನ ಕಮಾಂಡೆಂಟ್ ಶ್ರೀ ಮರಿಬಾಶೆಟ್ಟಿಯವರು ಮತ್ತು ಆಗಿನ ಆರಕ್ಷಕ ಆಯುಕ್ತರಾದ ಶ್ರೀ ರವೀಂದ್ರನಾಥ್ ಅವರು ಅನುಮೋದಿಸಿದರು. ಪರಿಣಾಮವಾಗಿ ಸಿಓಡಿಯವರಿಂದ ತನಿಖೆ, ವಿಚಾರಣೆ ನಡೆದಿದ್ದು ಸಂಘದಲ್ಲಿ ಕಾನೂನುಗಳನ್ನು ಸ್ಪಷ್ಟವಾಗಿ ಉಲ್ಲಂಘಿಸಿ ಕೋಟ್ಯಂತರ ರೂಪಾಯಿಗಳ ಗೋಲ್‌ಮಾಲ್ ನಡೆದಿದೆ ಎಂಬುದರ ಬಗ್ಗೆ ಸವಿಸ್ತಾರ ವರದಿ ತಯಾರಾಗುತ್ತಿದೆ. ನಿಷ್ಪಕ್ಷಪಾತ ತನಿಖೆ ನಡೆಸಬೇಕಿದ್ದ ಸಿ. ಕೃಷ್ಣಪ್ಪ ಕೆ.ಟಿ. ಬಾಲಕೃಷ್ಣರವರು ಕರ್ತವ್ಯಲೋಪವೆಸಗಿರುವುದರ ಬಗ್ಗೆ, ಅವರ ವಿರುದ್ಧ ಇಲಾಖೆ ವಿಚಾರಣೆ ನಡೆಸುವಂತೆ ಅಭಿಪ್ರಾಯಪಡಲಾಗಿದೆ.


ಎಚ್. ವಾಸು


ಮಲ್ಲಣ್ಣ


ನಾಗರಾಜ್

ಈ ಅವ್ಯವಹಾರಗಳ ಬಗೆಗಿನ ದೂರು ನಿನ್ನೆ ಮೊನ್ನೆ ಎದ್ದಿದ್ದಲ್ಲ, 1-07-07 ರಲ್ಲಿ ಅಂದಿನ ಸಹಕಾರ ಸಚಿವ ಮತ್ತು ಮೈಸೂರು ಜಿಲ್ಲಾ ಉಸ್ತುವಾರಿ ಸಚಿವರಾಗಿದ್ದ ಜಿ.ಟಿ. ದೇವೇಗೌಡರಿಗೆ ದೂರು ನೀಡಲಾಗಿತ್ತು, ನಂತರ ಅದು ಸಹಕಾರ ಸಂಘಗಳ ಜಂಟಿ ನಿಬಂಧಕರಿಗೆ, ಅಲ್ಲಿಂದ ಉಪನಿಬಂಧಕರಿಗೆ, ನಂತರ ಸಹಾಯಕ ನಿಬಂಧಕರ ಕೈಗೆ ಬಂದಿತು. ಅಂದಿನ ಸಹಾಯಕ ನಿಬಂಧಕರಾಗಿದ್ದ ಮರೀಗೌಡರು ದೂರನ್ನು ಕೆಳಗೆ ಹಾಕಿಕೊಂಡು ಅದರ ಮೇಲೆ ಕುಳಿತರು. ಯಾವಾಗ ಸಂಘದ ಬಗ್ಗೆ ಸಿಓಡಿ ವಿಚಾರಣೆ ಪ್ರಾರಂಭವಾಗುತ್ತಿದೆ ಎಂಬುದು ತಿಳಿಯಿತೋ ತಕ್ಷಣವೇ ಜಾಗೃತರಾಗಿ ಸುಮಾರು ಒಂದು ವರ್ಷದಷ್ಟು ದೀರ್ಘ ಕಾಲ ಅವರ ಅಂಡಿನ ಕೆಳಗೇ ಇದ್ದ ಆ ದೂರು ಅರ್ಜಿಯನ್ನೀಗ ಕೈಗೆತ್ತಿಕೊಂಡು, ಕಾಟಾಚಾರದ ವಿಚಾರಣೆ ಮಾಡಿ, 10-06-2008 ರಂದು ಆಡಳಿತ ಮಂಡಳಿ ವಿರುದ್ಧ ಕ್ರಮ ತೆಗೆದುಕೊಳ್ಳುವಂತೆ, ಉಪನಿಬಂಧಕರಿಗೆ ವರದಿ ಕಳುಹಿಸಿದರು.

ಅವರ ವರದಿಯ ಆಧಾರದ ಮೇಲೆ ಉಪನಿಬಂಧಕರು 10-09-2008ರಂದು ಆಡಳಿತ ಮಂಡಳಿಯನ್ನು ರದ್ದುಗೊಳಿಸಿ ನಗರ ನಿರೀಕ್ಷಕ ಜೆ.ಸಂಜಯ್ ಎಂಬುವವರನ್ನು ಆಡಳಿತಾಧಿಕಾರಿಯನ್ನಾಗಿ ನೇಮಿಸಿ ಆದೇಶ ಹೊರಡಿಸಿದರು. ಸಂಘದವರು ಸಂಜಯ್ ಅವರಿಗೆ ಅದೆಷ್ಟು ಗೊಬ್ಬರ ತಿನ್ನಿಸಿದ್ದಾರೋ ಗೊತ್ತಿಲ್ಲ, ಸಂಘದ ಅಧ್ಯಕ್ಷ-ಕಾರ್ಯದರ್ಶಿಗಳು ಕೈಗೆ ಸಿಗುತ್ತಿಲ್ಲವೆಂದೂ, ಹಾಗಾಗಿ ಪೂರ್ಣಪ್ರಮಾಣದ ಆಡಳಿತ ವಹಿಸಿಕೊಂಡಿಲ್ಲವೆಂದೂ ಹೇಳಿಕೊಂಡು ಅಡ್ಡಾಡುತ್ತಿದ್ದಾರೆ! ವಾಸ್ತವ ಏನೆಂದರೆ ಅಧ್ಯಕ್ಷರಾಗಲೀ ಕಾರ್ಯದರ್ಶಿಗಳಾಗಲೀ ಯಾರೂ ಭೂಗತವಾಗಿಲ್ಲ, ಮೈಸೂರಿನಲ್ಲೇ ರಾಜಾರೋಷವಾಗಿ ಓಡಾಡಿಕೊಂಡಿದ್ದಾರೆ. ಸನ್ಮಾನ್ಯ ಸಂಜಯ್‌ರವರು ಅಧಿಕಾರ ವಹಿಸಿಕೊಳ್ಳುವಷ್ಟರಲ್ಲಿ ಸಂಘದವರು ಇನ್ನೆಷ್ಟು ಗೋಲ್‌ಮಾಲ್‌ಗಳನ್ನು ನಡೆಸುತ್ತಾರೋ ಆ ಚಾಮುಂಡೇಶ್ವರಿಗೇ ಗೊತ್ತು.

ಶ್ರೀ ಕೃಷ್ಣರಾಜೇಂದ್ರ ಸಹಕಾರಿ ಬ್ಯಾಂಕ್ ನಿಯಮಿತ

ಅಗ್ರಹಾರ ವೃತ್ತದಲ್ಲಿರುವ (ಎನ್. ಮಾಧವರಾವ್ ವೃತ್ತ) ಈ ಸಹಕಾರ ಬ್ಯಾಂಕನಲ್ಲಿ ಎಂತಹ ಅದ್ಭುತ ಚಮತ್ಕಾರ ನಡೆಯುತ್ತಿದೆ ಎಂಬುದನ್ನು ಅರ್ಥ ಮಾಡಿಕೊಳ್ಳಬೇಕೆಂದರೆ ಬ್ಯಾಂಕಿನ 2006-07ನೇ ಸಾಲಿನ, 82ನೇ ಸರ್ವಸದಸ್ಯರ ಸಭೆಯ ಆಹ್ವಾನ ಪತ್ರಿಕೆಯನ್ನು ಪಡೆದುಕೊಂಡು, ಒಳಗಿನ ಎರಡನೇ ಪುಟದ ಕೆಳಭಾಗದತ್ತ ಕಣ್ಣುಹಾಯಿಸಿ. ಅಲ್ಲಿ ಮೂರು ವಿಶೇಷ ಸೂಚನೆ ಕೊಡಲಾಗಿದೆ. ಮೊದಲನೇ ಸೂಚನೆಯನ್ನೊಮ್ಮೆ ನಿಧಾನವಾಗಿ ಓದಿ.

"ಬ್ಯಾಂಕಿನಿಂದ ಕೊಡುವ ಉಡುಗೊರೆಯನ್ನು ವಾರ್ಷಿಕ ಮಹಾಸಭೆಯ ದಿನದಂದು ಬೆಳಗ್ಗೆ 11.30 ರಿಂದ ಸಂಜೆ 5.30ರವರೆಗೆ ಕೊಡಲಾಗುವುದು. ನಂತರ ಈ ಉಡುಗೊರೆಯನ್ನು ಕೊಡುವ ಏರ್ಪಾಟು ಇರುವುದಿಲ್ಲ" ಎಂಬ ಸೂಚನೆ ನೀಡಲಾಗಿದೆ. ಅಂದರೆ ಕೇವಲ ಆರು ಗಂಟೆಯ ಸಮಯದಲ್ಲಿ ಸುಮಾರು ಎಂಟು ಸಾವಿರಕ್ಕೂ ಹೆಚ್ಚು ಸದಸ್ಯರು ತಮಗೆ ಸೇರಬೇಕಾದ ಉಡುಗೊರೆಯನ್ನು ಪಡೆದುಕೊಳ್ಳಬೇಕು. ಇಲ್ಲದಿದ್ದರೆ ಉಡುಗೊರೆ ಸಿಗುವುದಿಲ್ಲ.

ಈ ವಿಶೇಷ ಸೂಚನೆಯ ವಿಚಾರ ಬಹಳ ಸಣ್ಣದೆಂದು ನಿಮಗನ್ನಿಸಬಹುದು. ಆದರೆ, ಅದರ ಹಿಂದಿನ ದುರುದ್ದೇಶಗಳಿವೆಯಲ್ಲ, ಅವು ಸಣ್ಣವಲ್ಲ, ಇಷ್ಟೊಂದು ಕಡಿಮೆ ಅವಧಿಯಲ್ಲಿ ಸಂಘದ ಎಂಟು ಸಾವಿರ ಸದಸ್ಯರು ಉಡುಗೊರೆ ಪಡೆಯಲು ಸಾಧ್ಯವೇ ಎಂಬುದನ್ನು ಮೊದಲು ಯೋಚಿಸಿ. ಪುಸ್ತಕದಲ್ಲಿ ಅಥವಾ ರಶೀದಿಯಲ್ಲಿ ಸಹಿಮಾಡಿ, ವಿಳಾಸ ಬರೆಯಲು, ಆನಂತರ ಉಡುಗೊರೆ ಪಡೆಯಲು ಒಬ್ಬ ಸದಸ್ಯರಿಗೆ ಕನಿಷ್ಠ ಒಂದು ನಿಮಿಷ ಬೇಕೆಂದುಕೊಂಡರೂ ಇವರು ನಿಗದಿಪಡಿಸಿರುವ ಆರು ಗಂಟೆಗಳಲ್ಲಿ 360 ಜನರಿಗೆ ಉಡುಗೊರೆ ಹಂಚಬಹುದು. ಈ ರೀತಿ 10 ಕೌಂಟರ್ ತೆಗೆದು ಹಂಚುತ್ತೇವೆಂದರೂ 3600 ಸದಸ್ಯರಿಗೆ ಉಡುಗೊರೆ ಹಂಚಬಹುದು. ಆದರೆ ಹಾಗಾದರೆ ಉಳಿದ ನಾಲ್ಕೂವರೆ ಸಾವಿರ ಸದಸ್ಯರ ಗತಿಯೇನು? ಅಸಲಿಗೆ ಇದರ ಹಿಂದೆ ಎರಡು ದುರುದ್ದೇಶಗಳಿವೆ. ಮೊದಲನೆಯದು, ಉಡುಗೊರೆ ಪಡೆಯಲು ಸಾಧ್ಯವಾಗದವರ ಉಡುಗೊರೆಯನ್ನು ತಾವೇ ಗುಳುಂ ಮಾಡುವುದು ಹಾಗೂ ಎರಡನೆಯದು ಸದಸ್ಯರೆಲ್ಲಾ ವಾರ್ಷಿಕ ಸಭೆಯಂದು ಉಡುಗೊರೆಗಾಗಿಯೇ ಕಚ್ಚಾಡುವಂತೆ ಮಾಡಿ ಬ್ಯಾಂಕಿನಲ್ಲಿ ನಡೆಯುವ ಅವ್ಯವಹಾರಗಳು ಚರ್ಚೆಗೆ ಬಾರದಂತೆ ನೋಡಿಕೊಳ್ಳುವುದು.

ಈ ಬ್ಯಾಂಕಿನಲ್ಲಿ 2006-07ನೇ ಸಾಲಿನಲ್ಲಿ ಶೇ.5 ರಂತೆ ಡಿವಿಡೆಂಟ್ ನೀಡಿದ್ದನ್ನು ಹೊರತುಪಡಿಸಿದರೆ ಕಳೆದ ಏಳೆಂಟು ವರ್ಷಗಳಿಂದ ಷೇರುದಾರರಿಗೆ ಸರಿಯಾಗಿ ಡಿವಿಡೆಂಟ್ ನೀಡಿಯೇ ಇಲ್ಲ, 2006-07ನೇ ಸಾಲಿನಲ್ಲಿ ಬ್ಯಾಂಕಿಗೆ ಬಂದಿರುವ ನಿವ್ವಳ ಲಾಭಕ್ಕಿಂತಲೂ, 'ಇತರೆ' ಶೀರ್ಷಿಕೆಯಡಿಯಲ್ಲಿನ ಖರ್ಚುವೆಚ್ಚ ಹೆಚ್ಚಾಗಿದೆ! ಠೇವಣಿಗಳು ಮತ್ತು ತಂದ ಸಾಲಗಳ ಮೇಲಿನ ಬಡ್ಡಿ, ಸಂಬಳ, ಭವಿಷ್ಯನಿಧಿ, ಗ್ರಾಚ್ಯುಟಿ, ಎಕ್ಸ್‌ಗ್ರೇಷಿಯಾ, ಡೈರೆಕ್ಟರ್‌ಗಳ ಮೀಟಿಂಗ್ ಭತ್ಯೆ ತೆರಿಗೆ, ವಿಮೆ ಮತ್ತು ದೀಪದ ಖರ್ಚು, ಕಾಯ್ದೆ ವೆಚ್ಚ ಲೆಕ್ಕ ತಪಾಸಣಾ ಶುಲ್ಕ, ಅಂಚೆ, ತಂತಿ ಮತ್ತು ದೂರವಾಣಿ ಖರ್ಚು, ಸವಕಳಿ, ಕರಡು ಸಾಲ ಮತ್ತು ಸಂಶಯಾಸ್ಪದ ಸಾಲ ಇಷ್ಟೆಲ್ಲಾ ಖರ್ಚುಗಳನ್ನು ಪ್ರತ್ಯೇಕವಾಗಿ ನಮೂದಿಸಿಯೂ ಈ 'ಇತರೆ' ಎಂಬ ಲೆಕ್ಕದಲ್ಲಿ 16 ಲಕ್ಷದ 10 ಸಾವಿರದ 117 ರೂಪಾಯಿಗಳನ್ನು ಖರ್ಚು ಮಾಡಿದ್ದಾರೆ ಎಂದರೆ ಅವ್ಯವಹಾರ ನಡೆಯುವ ಪರಿ ಯಾರಿಗಾದರೂ ಅರ್ಥವಾಗುತ್ತದೆ.

ಕೆ.ಆರ್.ಬ್ಯಾಂಕಿನಲ್ಲಿ ಮಂಜೂರಾತಿಗಿಂತ ಹೆಚ್ಚು ಕೆಲಸಗಾರರನ್ನು ನೇಮಿಸಿಕೊಂಡಿರುವುದರ ಬಗ್ಗೆ ಭಾರತೀಯ ರಿಜರ್ವ್ ಬ್ಯಾಂಕೇ ಆಕ್ಷೇಪ ವ್ಯಕ್ತಪಡಿಸಿದೆ. ಇದಾದ ಮೇಲೂ 2-4-2008 ರಂದು ಬ್ಯಾಂಕ್‌ಗೆ ಮತ್ತಿಬ್ಬರು ನೌಕರರನ್ನು ನೇಮಿಸಿಕೊಂಡಿದ್ದಾರೆ. ಆ ಇಬ್ಬರು ನೌಕರರು ಮತ್ಯಾರೂ ಅಲ್ಲ, ಬ್ಯಾಂಕಿನ ವ್ಯವಸ್ಥಾಪಕರಾದ ಮಲ್ಲಣ್ಣನವರ ಮಗ ಗಣೇಶ ಮತ್ತು ಬ್ಯಾಂಕಿನ ನಿರ್ದೇಶಕರಾದ ನಂ. ಸಿದ್ದಪ್ಪನವರ ತಮ್ಮನ ಮಗ ರಾಜೇಂದ್ರಪ್ರಸಾದ್. ಇವರಿಬ್ಬರೂ ಕೆಲಸಕ್ಕೆ ಹಾಜರಾಗಿದ್ದೇ 2-4-2008ರಂದಾದರೂ 17-5-2007 ರಿಂದಲೇ ಕೆಲಸಕ್ಕೆ ಹಾಜರಾಗಿದ್ದಂತೆ ಹಾಜರಾತಿ ಪುಸ್ತಕದಲ್ಲಿ ಹೆಸರು ಬರೆದು ಹಾಜರಾತಿಯನ್ನು ಒಟ್ಟಿಗೆ ಹಾಕಿಕೊಂಡು 1-4-2008ರಿಂದ ಹೊಸ ಹಾಜರಾತಿ ಪುಸ್ತಕವನ್ನು ಇಟ್ಟಿದ್ದಾರೆ. 29-3-2008 ರಂದು ಸೆಕ್ಯೂರಿಟಿ ಹಣವನ್ನು ಪಾವತಿಸಿಕೊಂಡು 27-03-2008ರಿಂದಲೇ ಕೆಲಸವನ್ನು ಕಾಯಂಗೊಳಿಸಿ ಒಟ್ಟಿಗೆ 10 ತಿಂಗಳ ವೇತನವನ್ನು ಖರ್ಚು ಹಾಕಿ ಕಾಯಂ ಆದ ನಂತರದ ವೇತನವನ್ನು ಪಾವತಿಸಿದ್ದಾರೆ. ಸಹಕಾರಿ ಕಾಯ್ದೆಯ ಪ್ರಕಾರ ಈ ನೇಮಕವು ಅಕ್ರಮವಾಗುತ್ತದೆ.

ಕೆ.ಆರ್.ಬ್ಯಾಂಕ್‌ನಲ್ಲಿ ನಡೆದಿರುವ, ನಡೆಯುತ್ತಿರುವ ಅಕ್ರಮ ವ್ಯವಹಾರ, ಕಾನೂನುಬಾಹಿರ ಚಟುವಟಿಕೆಗಳ ಬಗ್ಗೆ ತುರ್ತು ವಿಚಾರಣೆ, ತನಿಖೆ ನಡೆಸಿ ಕೂಡಲೇ ಕ್ರಮ ಕೈಗೊಳ್ಳುವಂತೆ 13-08-2008ರಂದು ಸಹಕಾರ ಸಂಘಗಳ ನಿಬಂಧಕರಿಗೆ ದೂರು ನೀಡಿದ್ದರೆ, ಅವರು ಎರಡು ತಿಂಗಳ ನಂತರ ಅಂದರೆ 21-10-2008ರಂದು ಮೈಸೂರು ವಿಭಾಗದ ಉಪನಿಬಂಧಕರಿಗೆ ಪತ್ರ ಬರೆದು ಬ್ಯಾಂಕಿಗೆ ಭೇಟಿ ನೀಡಿ ವಿಚಾರಣೆ ಮಾಡಿ, ನಿಯಮಾನು

ಪರ ಕ್ರಮ ಕೈಗೊಳ್ಳುವಂತೆ ಸೂಚನೆ ನೀಡಿದ್ದಾರೆ. ತುರ್ತು ಕ್ರಮ ಕೈಗೊಳ್ಳಿ ಎಂದು ಕೋರಿಕೊಂಡರೆ ಒಂದು ಪತ್ರ ಬರೆದು ಬೆಂಗಳೂರಿನಿಂದ ಮೈಸೂರಿಗೆ ದೂರು ಅರ್ಜಿಯನ್ನು ಕಳುಹಿಸಲು ಎರಡು ತಿಂಗಳು ಕಾಲ ತೆಗೆದುಕೊಂಡಿದ್ದಾರೆ ಎಂದರೆ, ಇನ್ನು ಉಪನಿಬಂಧಕರು ವಿಚಾರಣೆ ನಡೆಸಿ ಕ್ರಮ ಕೈಗೊಳ್ಳಲು ಎಷ್ಟು ವರ್ಷ ತೆಗೆದುಕೊಳ್ಳುತ್ತಾರೋ?

ಸಹಕಾರ ಇಲಾಖೆಯಿಂದ ವಿಚಾರಣೆ ನಡೆದು, ಅಕ್ರಮವಾಗಿ ನೇಮಿಸಿಕೊಂಡಿರುವ ತಮ್ಮ ಮಗನನ್ನು ಮನೆಗೆ ಕಳಿಸಿಬಿಟ್ಟರೆ ಯಾರೂ ಹೆಣ್ಣು ಕೊಡುವುದಿಲ್ಲ ಎಂಬ ಉದ್ದೇಶದಿಂದ ಬ್ಯಾಂಕಿನ ವ್ಯವಸ್ಥಾಪಕರಾದ ಮಲ್ಲಣ್ಣ ತಮ್ಮ ಮಗ ಗಣೇಶನಿಗೆ ಹೆಣ್ಣು ನೋಡಿ ಈಗಾಗಲೇ ನಿಶ್ಚಿತಾರ್ಥ ಮಾಡಿದ್ದಾರೆ. ಗಣೇಶನ ಮದುವೆಯಾಗಿ ಮಕ್ಕಳಾದ ನಂತರವೇ ಸಹಕಾರ ಇಲಾಖೆಯವರು ವಿಚಾರಣೆ ನಡೆಸಿ ಕ್ರಮ ಕೈಗೊಳ್ಳಬಹುದೇನೋ?

ದಿ ಮೈಸೂರು ಕೋಆಪರೇಟೀವ್ ಬ್ಯಾಂಕ್ ಲಿಮಿಟೆಡ್

ಮೈಸೂರಿನ ನಾಲ್ವಡಿ ಕೃಷ್ಣರಾಜ ಒಡೆಯರ್‌ರವರು ಸ್ಥಾಪಿಸಿದ್ದ ಈ ಬ್ಯಾಂಕ್ ಇಂದು ಭ್ರಷ್ಟಾಚಾರದ ಕೂಪವಾಗಿ ಪರಿವರ್ತನೆಗೊಂಡುಬಿಟ್ಟಿದೆ. ಇದಕ್ಕೆ ಪ್ರಧಾನ ಕಾರಣ ಎಂದರೆ ಕಳೆದ 17 ವರ್ಷಗಳಿಂದ ಈ ಬ್ಯಾಂಕಿನ ಅಧ್ಯಕ್ಷನಾಗಿ ಒಂದೇ ಕಡೆ ಗೂಟ ಹೊಡೆದುಕೊಂಡು ಕುಳಿತಿರುವ ಪಿ. ನಾಗರಾಜ್ ಎಂಬ ಪರಮಭ್ರಷ್ಟ. ಪ್ರಾಯಶಃ ಇಷ್ಟೊಂದು ಸುದೀರ್ಘ ಅವಧಿಯ ತನಕ ಒಬ್ಬನೇ ಅಧ್ಯಕ್ಷನನ್ನು ಕಂಡ ಬ್ಯಾಂಕ್ ಎಂದರೆ ಈ ದೇಶದಲ್ಲಿ ಇದೊಂದೇ ಇರಬೇಕೇನೋ? ಎಸ್.ಟಿ. ಹೊನ್ನೇಗೌಡ ಎಂಬ ಜಂಟಿ ನಿರ್ದೇಶಕರು 16-5-1986ರಂದು ಆದೇಶವೊಂದನ್ನು ಹೊರಡಿಸಿ ಪಿ. ನಾಗರಾಜ್‌ರವರನ್ನು ಎರಡು ವರ್ಷಗಳಲ್ಲಿ ಯಾವುದೇ ಸಹಕಾರಿ ಚಟುವಟಿಕೆಗಳಲ್ಲಿ ಪಾಲ್ಗೊಳ್ಳದಿರುವಂತೆ ಅಮಾನತುಗೊಳಿಸಿದ್ದರು. ಆದರೆ ಅದನ್ನು ಟಾಯ್ಲೆಟ್ ಪೇಪರ್ ಆಗಿ ಬಳಸಿಕೊಳ್ಳಲಾಯಿತಷ್ಟೆ.

ಇವರ ಆಡಳಿತಾವಧಿಯಲ್ಲಿ ನಡೆದಿರುವ ಅವ್ಯವಹಾರದ ಜಾಡನ್ನು ಹಿಡಿದು ಹೊರಟರೆ ನಾಗರಾಜ್ ಅದೆಂಥ ಶೈತಾನ್ ಹೆಗ್ಗಣ ಎಂಬುದು ಗೊತ್ತಾಗುತ್ತದೆ. ಇವರ ಆಡಳಿತಾವಧಿಯಲ್ಲಿ ನಡೆದಿರುವ ಅನೇಕ ಅಕ್ರಮ ಚಟುವಟಿಕೆಗಳು ಸಾಬೀತಾಗಿರುವುದರಿಂದ (45 ಆರೋಪಗಳು ಸಾಬೀತಾಗಿವೆ) ಬ್ಯಾಂಕ್‌ನ ಕಾರ್ಯದರ್ಶಿ ಮತ್ತು ಆಡಳಿತ ಮಂಡಳಿ ಮೇಲೆ ಕ್ರಮ ಕೈಗೊಳ್ಳುವಂತೆ ಸಹಕಾರ ಸಂಘಗಳ ಸಹಾಯಕ ನಿಬಂಧಕರು ವರದಿ ನೀಡಿದ್ದಾರೆ. ಕೂಡಲೇ ಕ್ರಮ ಕೈಗೊಳ್ಳಬೇಕಾಗಿದ್ದ ಹಿಂದಿನ ಉಪನಿಬಂಧಕರಾದ ಪ್ರಕಾಶ್‌ರವರು ನಾನಾ ರೀತಿಯ ಒತ್ತಡಗಳಿಂದ ಕ್ರಮ ತೆಗೆದುಕೊಳ್ಳದೇ ಇದ್ದುದರಿಂದ ಈಶ್ವರ್ ಎಂಬವರು ಹೈಕೋರ್ಟ್‌ನಲ್ಲಿ ರಿಟ್ ಅರ್ಜಿ ಸಲ್ಲಿಸಿದ್ದರು. ಮನವಿ ಮತ್ತು ದಾಖಲಾತಿಗಳನ್ನು ಪರಿಶೀಲಿಸಿದ ಕೋರ್ಟು 3-12-07ರಂದು ಒಂದು ತಿಂಗಳ ಒಳಗೆ ಕ್ರಮ ಕೈಗೊಳ್ಳುವಂತೆ ಆದೇಶಿಸಿತ್ತು. ಸಹಕಾರ ಸಂಘಗಳು, ಬ್ಯಾಂಕಿನ ಪದಾಧಿಕಾರಿಗಳು ಎಸೆಯುವ ಎಂಜಲು ಬಿಸ್ಕೆಟ್ ತಿನ್ನುವಲ್ಲೇ ಸಮಯ ಕಳೆಯುವ ಅಧಿಕಾರಿಗಳು ನ್ಯಾಯಾಲಯದ ಆದೇಶದ ಪ್ರತಿಯನ್ನು ಪಕ್ಕಕ್ಕಿಟ್ಟು ಎಂಜಲು ಬಿಸ್ಕತ್ತನ್ನು ಮೆಲ್ಲುತ್ತಾ ಕುಳಿತರು.

ಇದರ ಬಗ್ಗೆ ಸಹಕಾರ ಇಲಾಖೆಯವರ ಕಾರ್ಯದರ್ಶಿಯವರ ಗಮನಕ್ಕೆ ತಂದಾಗ ಅವರು 12-12-2008ರಂದು ಉಪನಿಬಂಧಕರಿಗೆ, ಸಹಾಯಕ ನಿಬಂಧಕರಿಗೆ, ಪತ್ರ ಬರೆದು ನ್ಯಾಯಾಲಯದ ನಿರ್ದೇಶನದಂತೆ ಆಡಳಿತ ಸಮಿತಿಯ ಮೇಲೆ ಸೂಕ್ತ ಕಾನೂನು ಕ್ರಮ ಕೈಗೊಳ್ಳುವಂತೆ ಸೂಚಿಸಿದರು. ನ್ಯಾಯಾಲಯದ ಆದೇಶವನ್ನೇ ಪಕ್ಕಕ್ಕಿಟ್ಟವರಿಗೆ, ಕಾರ್ಯದರ್ಶಿಯವರ ಪತ್ರ ಯಾವ ಲೆಕ್ಕ? ಒತ್ತಡ ಜಾಸ್ತಿಯಾದಾಗ, 18-7-2008ರಂದು ಸಹಾಯಕ ನಿಬಂಧಕರು ಆಡಳಿತ ಮಂಡಳಿ ಮೇಲೆ ಕ್ರಮ ಕೈಗೊಳ್ಳುವಂತೆ ಶಿಫಾರಸು ಮಾಡಿದರು. ಅದರ ಆಧಾರದ ಮೇಲೆ ಉಪನಿಬಂಧಕರು 26-07-08ರಂದು ಆಡಳಿತ ಮಂಡಳಿಯವರಿಗೆ ಶೋಕಾಸ್ ನೋಟೀಸ್ ನೀಡಿದರು.

ಈಗ ಹಿಂದಿನ ಸಹಾಯಕ ನಿಬಂಧಕರು, ಉಪನಿಬಂಧಕರನ್ನು ಎತ್ತಂಗಡಿ ಮಾಡಿರುವುದರಿಂದ ಅವರುಗಳ ಜಾಗಕ್ಕೆ ಬೇರೆಯವರು ಬಂದಿದ್ದಾರೆ. ವಿಚಾರಿಸಲು ಹೋದರೆ ಇದೀಗ ಇಲ್ಲಿಗೆ ಬಂದಿದ್ದೇವೆ, ಹಿಂದೆ ಏನಾಗಿದೆ ಎಂದು ತಿಳಿದುಕೊಳ್ಳುತ್ತಿದ್ದೇವೆ, ತಿಳಿದುಕೊಂಡ ನಂತರ ಸೂಕ್ತ ಕ್ರಮ ಕೈಗೊಳ್ಳುತ್ತೇವೆ ಎಂದು ಜಾರಿಕೊಳ್ಳಲು ಪ್ರಯತ್ನಿಸುತ್ತಾರೆ.

ಒಟ್ಟಿನಲ್ಲಿ ಸಹಕಾರ ಕ್ಷೇತ್ರ ಎಷ್ಟರಮಟ್ಟಿಗೆ ಎಕ್ಕುಟ್ಟಿ ಹೋಗಿದೆ ಎಂಬುದಕ್ಕೆ ಈ ಮೇಲಿನ ಮೂರು ಸಂಸ್ಥೆಗಳಲ್ಲಿನ ಅವ್ಯವಹಾರಗಳೇ ಸಾಕ್ಷಿಯಾಗಿ ನಿಲ್ಲುತ್ತವೆ. ಇದರ ಬಗ್ಗೆ ಮಾತನಾಡಿಸೋಣವೆಂದರೆ ಸಹಕಾರ ಸಚಿವ ಲಕ್ಷ್ಮಣ್ ಸವದಿ ಅಡ್ರೆಸ್ಸಿಗೇ ಇಲ್ಲ.

■ ವರದಿಗಾರ



ಬೆಂಗಳೂರು: ಬಿಡಿಎ ಹಗಲು ದರೋಡೆ

ಬೆಂಗಳೂರಿನ ಜನಸಂಖ್ಯೆ ಹತ್ತಿರ ಹತ್ತಿರ ಎಂಭತ್ತು ಲಕ್ಷ ಮುಟ್ಟುತ್ತಿದೆ. ತಲೆ ಮೇಲೊಂದು ಸ್ವಂತ ಸೂರು ಮಾಡಿಕೊಳ್ಳಬೇಕೆಂಬ ಕನಸು ಹೊತ್ತು, ವರ್ಷಗಳ ಹಿಂದೆಯೇ ದುಡ್ಡು ಕಟ್ಟಿ ಅರ್ಜಿ ಹಿಡಿದು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ (ಬಿಡಿಎ) ಬಾಗಿಲು ತಟ್ಟುತ್ತಿರುವವರ ಕ್ಯೂ ಬೆಂಗಳೂರಿನ ರಿಂಗ್ ರೋಡಿನಷ್ಟಿದೆ. ಸರ್ಕಾರ ಮನಸ್ಸು ಮಾಡಿದರೆ, ಬಿಡಿಎ ಪ್ರಾಮಾಣಿಕವಾಗಿ ವರ್ತಿಸಿದರೆ ಸೂರಿಲ್ಲದ ಜನರಿಗೆ ನ್ಯಾಯಯುತವಾದ ಕಡಿಮೆ ಬೆಲೆಯಲ್ಲಿ ಸೂರೊಂದನ್ನು ಒದಗಿಸುವುದು ಅಷ್ಟೊಂದು ದೊಡ್ಡ ಕೆಲಸವೇನಲ್ಲ. ಆದರೆ, ಭ್ರಷ್ಟಾಚಾರವನ್ನೇ ಮೈಗೂಡಿಸಿಕೊಂಡಿರುವ, ಜನಸಾಮಾನ್ಯರ ಅನ್ನದ ತಟ್ಟೆಗೆ ಕನ್ನ ಹಾಕಿಯೇ ಕೊಬ್ಬಿರುವ ಅಧಿಕಾರಿಗಳಿಂದಲೇ ಬಿಡಿಎ ತುಂಬಿರುವಾಗ ಅಂತಹ ಕೆಲಸವನ್ನು ನಿರೀಕ್ಷಿಸುವುದಾದರೂ ಹೇಗೆ? ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ನೌಕರರ ಸಂಘದಲ್ಲಿ ನಡೆಯುತ್ತಿರುವ ಅವ್ಯವಹಾರಗಳನ್ನು, ಅಕ್ರಮಗಳನ್ನು ನೋಡಿದರೆ ಸಾಕು ಇಡೀ ಬಿಡಿಎ ಹೇಗೆ ಕಾರ್ಯನಿರ್ವಹಿಸುತ್ತಿದೆ ಎಂಬ ಚಿತ್ರಣ ಸಿಕ್ಕುಬಿಡುತ್ತದೆ.

ಇತ್ತೀಚೆಗೆ ಲೋಕಾಯುಕ್ತರು ಸಣ್ಣಪುಟ್ಟ ಭ್ರಷ್ಟಾಚಾರಿಗಳನ್ನು ದಾಖಲೆ ಸಮೇತ ಹಿಡಿದಾಗ ರಾಜ್ಯಾದ್ಯಂತ ಪತ್ರಿಕೆಗಳಲ್ಲಿ ದೊಡ್ಡ ಸುದ್ದಿಯಾಗಿತ್ತು. ಆದರೆ, ಬಿಡಿಎದಲ್ಲಿ ಹಗಲು ದರೋಡೆ ನಡೆಸುತ್ತಿರುವ ನೌಕರರ ಸಂಘದ ತಿಮಿಂಗಿಲಗಳ ಎದುರಿಗೆ ಲೋಕಾಯುಕ್ತರು ಬಂಧಿಸಿರುವ ಭ್ರಷ್ಟಾಚಾರಿಗಳು ಏನೂ ಅಲ್ಲ ಬಿಡಿ. ಆದರೂ ಇದೊಂದು ದೊಡ್ಡ ಸುದ್ದಿಯಾಗಲೇ ಇಲ್ಲ ಎಂಬುದು ದುರಂತವೇ ಸರಿ.

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಲ್ಲಿ ಸುಮಾರು 750 ಜನ ನೌಕರರಿದ್ದಾರೆ. ಅವರಲ್ಲಿ ಈಗಾಗಲೇ 730 ಜನರಿಗೆ ಬಿಡಿಎ ವತಿಯಿಂದ ವಾಸಯೋಗ್ಯ ನಿವೇಶನಗಳನ್ನು ಕೊಡಲಾಗಿದೆ. ಅವರೆಲ್ಲ ಈಗ ಮನೆಕಟ್ಟಿಕೊಂಡಿದ್ದಾರಲ್ಲದೇ ಬಾಡಿಗೆಗೂ ಮನೆಗಳನ್ನು ಕೊಟ್ಟು ಹಾಯಾಗಿದ್ದಾರೆ. ಆದರೂ ಬಿಡಿಎ ನೌಕರರಿಗೆ ನಿವೇಶನ ಕೊಡಬೇಕೆಂಬ ನೆಪವನ್ನು ಮುಂದು ಮಾಡಿ ಕೋಟಿಗಟ್ಟಲೆ ಹಣ ನುಂಗುತ್ತಿರುವ ದೊಡ್ಡ ಹಿಂಡೇ ಬಿಡಿಎನಲ್ಲಿ ಕೆಲಸ ಮಾಡುತ್ತಿದೆ. ಈ ಹಗಲು ದರೋಡೆಗೆ ನೇತೃತ್ವ ವಹಿಸಿರುವ ನಾಯಕಶಿಖಾಮಣಿಗಳೆಂದರೆ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ನೌಕರರ ಸಂಘದ ಅಧ್ಯಕ್ಷ ಡಿ.ಎನ್.ಚಿಟ್ಟೇಗೌಡ ಹಾಗೂ ಕಾರ್ಯದರ್ಶಿ ಎಚ್. ನಾಗರಾಜ್.

ಕೇವಲ ಹತ್ತು ವರ್ಷಗಳ ಹಿಂದೆ ಇವರಿಬ್ಬರಿಗೂ ಉಣ್ಣಲು ಅನ್ನವಿರಲಿಲ್ಲ. ಸಾಮಾನ್ಯ ಗುಮಾಸ್ತರಾಗಿ ನೌಕರಿ ಸೇರಿ ಹೇಗೋ ಜೀವನ ಸಾಗಿಸಲಾರಂಭಿಸಿದರು. ಈ ಹೊತ್ತು ಏನಿಲ್ಲವೆಂದರೂ ಒಬ್ಬೊಬ್ಬರು ಇನ್ನೂರು ಕೋಟಿ ಬಾಳುತ್ತಾರೆ ಎಂದರೆ ಎಷ್ಟರ ಮಟ್ಟಿಗೆ ಲೂಟಿ ಹೊಡೆದಿರಬೇಡ? ಬಿಡಿಎ ಎಂಬ ಹುಲುಸಾದ ಹುಲ್ಲುಗಾವಲು ಸಿಕ್ಕರೆ ಕೊಬ್ಬದಿರುತ್ತಾರೆಯೇ?

ಉದಾಹರಣೆಗೆ, ಚಿಟ್ಟೇಗೌಡನನ್ನೇ ತೆಗೆದುಕೊಳ್ಳಿ. ಇತ್ತೀಚೆಗೆ ನಡೆದ ಒಕ್ಕಲಿಗರ ಸಂಘದ ಚುನಾವಣೆಯಲ್ಲಿ ಮಂಡ್ಯ ವಿಭಾಗದಿಂದ ಸ್ಪರ್ಧಿಸಿದ್ದ ಈತ ಚುನಾವಣೆಗಾಗಿ ಕೋಟ್ಯಂತರ ರೂಪಾಯಿ ಖರ್ಚು ಮಾಡಿದ್ದ. ಅಲ್ಲದೇ, ಅಲ್ಲಿ ತನ್ನನ್ನು ಗೆಲ್ಲಿಸಬಹುದಾದ ರಾಜಕೀಯ ಮುಂದಾಳುಗಳಿಗೆ ತಲಾ ಒಬ್ಬೊಬ್ಬರಿಗೆ 60x40ರ ಅಳತೆಯ ಮೂಲೆ ನಿವೇಶನಗಳನ್ನು ಪುಕ್ಕಟೆಯಾಗಿ ನೀಡಿ ಚುನಾವಣೆಯಲ್ಲಿ ಗೆದ್ದುಬಂದ. ಬಾಗೇಗೌಡ ಎಂಬುವವರ ಜೊತೆ ಸೇರಿ ಬೆಂಗಳೂರಿನ ಮೆಜೆಸ್ಟಿಕ್ ಏರಿಯಾದಲ್ಲಿ ಕಟ್ಟಲಾಗುತ್ತಿರುವ ದೊಡ್ಡ ಕಮರ್ಷಿಯಲ್ ಕಾಂಪ್ಲೆಕ್ಸ್‌ನಲ್ಲಿ 25 ಕೋಟಿ ಸುರಿದು ಪಾರ್ಟನರ್ ಆಗಿದ್ದಾನೆ. ತನ್ನ ಸ್ವಂತ

ಭ್ರಷ್ಟಾಚಾರವನ್ನೇ ಮೈಗೂಡಿಸಿಕೊಂಡಿರುವ, ಜನಸಾಮಾನ್ಯರ ಅನ್ನದ ತಟ್ಟೆಗೆ ಕನ್ನ ಹಾಕಿಯೇ ಕೊಬ್ಬಿರುವ ಅಧಿಕಾರಿಗಳಿಂದಲೇ ಬಿಡಿಎ ತುಂಬಿರುವಾಗ ಅಂತಹ ಕೆಲಸವನ್ನು ನಿರೀಕ್ಷಿಸುವುದಾದರೂ ಹೇಗೆ? ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ನೌಕರರ ಸಂಘದಲ್ಲಿ ನಡೆಯುತ್ತಿರುವ ಅವ್ಯವಹಾರಗಳನ್ನು, ಅಕ್ರಮಗಳನ್ನು ನೋಡಿದರೆ ಸಾಕು ಇಡೀ ಬಿಡಿಎ ಹೇಗೆ ಕಾರ್ಯನಿರ್ವಹಿಸುತ್ತಿದೆ ಎಂಬ ಚಿತ್ರಣ ಸಿಕ್ಕುಬಿಡುತ್ತದೆ.

ಊರಾದ ನಾಗಮಂಗಲದಲ್ಲಿ ನೂರು ಎಕರೆಗಿಂತ ಹೆಚ್ಚು ಭೂಮಿ ಖರೀದಿಸಿದ್ದಾನೆ. ಓಡಾಡುವುದಕ್ಕೆ ಐದು ಕಾರುಗಳನ್ನಿಟ್ಟುಕೊಂಡಿದ್ದಾನೆ. ಮಹಾಲಕ್ಷ್ಮಿ ಲೇಔಟ್‌ನಲ್ಲಿ ಸ್ವಂತ ಮನೆಯಿರುವುದಲ್ಲದೆ ಮೈಸೂರು-ಮಂಡ್ಯ ರೋಡಿನಲ್ಲಿ ಕೋಟ್ಯಂತರ ರೂಪಾಯಿ ಬಾಳುವ 15 ಎಕರೆ ಜಮೀನನ್ನೂ ಖರೀದಿಸಿದ್ದಾನೆ. ಹತ್ತು ವರ್ಷಗಳ ಹಿಂದೆ ಒಬ್ಬ ಸಾಮಾನ್ಯ ಗುಮಾಸ್ತನಾಗಿದ್ದವನು ಇಷ್ಟೊಂದು ಆಸ್ತಿ ಮಾಡಿದ್ದಾನೆಂದರೆ ಸಾರ್ವಜನಿಕ ಸಂಪತ್ತನ್ನು ಅದೆಷ್ಟರ ಮಟ್ಟಿಗೆ ಕೊಳ್ಳೆ ಹೊಡೆದಿದ್ದಾನೆಂದು ನೀವೇ ಊಹಿಸಿ.

ಬಿಡಿಎ ನೌಕರರಿಗೆ ನಿವೇಶನ ಹಂಚುವ ನೆಪದಲ್ಲಿಯೇ ಈ ಶಿಖಾಮಣಿಗಳು ನೌಕರರ ಸಂಘದ ವತಿಯಿಂದ ಒಂದು ನಕಲಿ ಕೋಆಪರೇಟಿವ್ ಅನ್ನು ಹುಟ್ಟು ಹಾಕಿದ್ದಾರೆ. ನಂತರ ಬಿಡಿಎಯಿಂದ ನಿವೇಶನಗಳನ್ನು ಮಂಜೂರು ಮಾಡಿಸಿಕೊಂಡು, ನೆಪಮಾತ್ರಕ್ಕೆ ಒಂದೆರಡು ನಿವೇಶನಗಳನ್ನು ನೌಕರರಿಗೆ ಹಂಚಿ ಉಳಿದವುಗಳೆಲ್ಲವನ್ನೂ ನೌಕರರ ಸಂಘದ ಸದಸ್ಯರಲ್ಲದವರಿಗೆ, ಬಹುಮಹಡಿ ಕಟ್ಟಡ ನಿರ್ಮಾಣ ಮಾಡುವ ಬಿಲ್ಡರುಗಳಿಗೆ ಕೋಟ್ಯಂತರ ರೂಪಾಯಿಗಳಿಗೆ ಮಾರಿಕೊಂಡಿದ್ದಾರೆ. ಈ ಹಗಲು ದರೋಡೆಯಲ್ಲಿ ಉನ್ನತಮಟ್ಟದ ಐಎಎಸ್ ಅಧಿಕಾರಿಗಳು, ಹಿರಿಯ ಅಧಿಕಾರಿಗಳು ಶಾಮೀಲಾಗಿರುವುದು ಮೇಲ್ನೋಟಕ್ಕೇ ಕಾಣುತ್ತದೆ.

ಈ ಇಬ್ಬರು ಖದೀಮರು ಲೇಔಟ್ ಪ್ಲಾನ್‌ನಲ್ಲಿ ನಿವೇಶನಗಳ ಅಳತೆಯನ್ನು 30x40 ಎಂದು ತೋರಿಸುತ್ತಾ ವಾಸ್ತವದಲ್ಲಿ 50x80 ಅಳತೆಯ ನಿವೇಶನಗಳನ್ನು ರೂಪಿಸಿಕೊಂಡು ತಮ್ಮ ಬಂಧುಬಳಗದವರಿಗೆ ಹಂಚಿದ್ದಾರೆ. ದೊಡ್ಡಕಲ್ಲಸಂದ್ರದಲ್ಲಿ ಕಾರ್ಯದರ್ಶಿ ನಾಗರಾಜ್ ತೆಗೆದುಕೊಂಡಿರುವ ನಿವೇಶನ ಸಂಖ್ಯೆ 90ನ್ನೇ ನೋಡಿ. ಲೇಔಟ್ ಪ್ಲಾನ್‌ನಲ್ಲಿ ಅದನ್ನು 30x40 ಎಂದು ನಮೂದಿಸಲಾಗಿದೆ. ಅದೇ ನಿವೇಶನವನ್ನು ಹೋಗಿ ಅಳೆದು ನೋಡಿ ಬರೋಬ್ಬರಿ 50x80 ಇದೆ. ಅದರ ಮೇಲೆ ಕಮರ್ಷಿಯಲ್ ಕಾಂಪ್ಲೆಕ್ಸ್ ಕಟ್ಟುವುದಕ್ಕೆ ಪ್ಲಾನ್ ಅನುಮತಿಯನ್ನೂ ಮಂಜೂರು ಮಾಡಿಸಿಕೊಂಡು ಕಾಮಗಾರಿ ಶುರು ಮಾಡಿದ್ದಾನೆ. ಅಲ್ಲದೇ ಬಿಲ್ಡರೊಬ್ಬರೊಂದಿಗೆ ಶಾಮೀಲಾಗಿ ಲ್ಯಾಂಡ್ ಮೇಲೆ ಸುಳ್ಳು ಕೇಸು ಹಾಕಿಸಿ ಆಮೇಲೆ ಅವರಿಗೆ ಪರಿಹಾರವೆಂಬಂತೆ ಒಂದೇ ಸಾಲಿನಲ್ಲಿ 28 ನಿವೇಶನಗಳನ್ನು ಕೊಟ್ಟಿದ್ದಾರೆ ಎಂದರೆ ಇಂತಹ ಹಗಲು ದರೋಡೆಯನ್ನು ಬೇರೆಲ್ಲಿಯಾದರೂ ನೋಡಲು ಸಾಧ್ಯವಿದೆಯೆ?

ಅಸಲಿಗೆ ಇವರಿಗೆ ನಿವೇಶನ ಹಂಚುವ ಅಧಿಕಾರವನ್ನು ಕೊಟ್ಟವ್ಯಾರು ಎಂಬ ಪ್ರಶ್ನೆ ಉದ್ಭವಿಸುತ್ತದೆ. ಬಿಡಿಎದ ಜಾಗದಲ್ಲಿ, ಬಿಡಿಎ ಖರ್ಚು ಮಾಡಿ ನಿರ್ಮಿಸಿದ ಬಡಾವಣೆಗಳಲ್ಲಿ ನಿವೇಶನಗಳನ್ನು ಪಡೆಯುವ ಹಕ್ಕು ಸಾರ್ವಜನಿಕರಿಗಿರುತ್ತದೆ. ಆದರೆ, ಯಾವುದೇ ನೀತಿ-ನಿಯಮಗಳನ್ನು ಪಾಲಿಸದೇ, ಕನಿಷ್ಠ ಸೆಲ್ಫ್ ಅಫಿಡವಿಟ್ ಕೂಡ ಸಲ್ಲಿಸದೇ, ತಮಗೆ ಇಚ್ಛೆ ಬಂದವರಿಗೆ, ಇಚ್ಛೆ ಬಂದ ಅಳತೆಯಲ್ಲಿ ಹಾಡುಹಗಲೆ ಮಾರಾಟ ಮಾಡುತ್ತಿದ್ದಾರೆಂದರೆ ಏನೆನ್ನಬೇಕು. ಇಂತಹ ಸ್ವೇಚ್ಛಾಧಿಕಾರ ಪ್ರಾಯಶಃ ರಾಜ್ಯದ ಮುಖ್ಯಮಂತ್ರಿಗಳಿಗೂ ಇಲ್ಲವೇನೋ?

ಈ ಅಕ್ರಮ ನಿವೇಶನ ಹಂಚಿಕೆಯ ಬಗ್ಗೆ ಯಾರಾದರೂ ಪ್ರಶ್ನಿಸಿದರೆ ಮುಖ್ಯಮಂತ್ರಿಗಳ ಶಿಫಾರಸ್ಸಿನ ಮೇರೆಗೆ ನೀಡಲಾಗಿದೆ, ಆಯುಕ್ತರ ಶಿಫಾರಸ್ಸಿನ ಮೇರೆಗೆ ನೀಡಲಾಗಿದೆ, ಲೋಕಾಯುಕ್ತರ ಶಿಫಾರಸ್ಸಿನ ಮೇರೆಗೆ ನೀಡಲಾಗಿದೆ, ಮಂತ್ರಿಮಹೋದಯರ ಶಿಫಾರಸ್ಸಿನ ಮೇರೆಗೆ ನೀಡಲಾಗಿದೆ ಎಂದು ಪೂಸಿ ಹೊಡೆಯುತ್ತಾರೆ. ಹಾಗೆ ನೋಡಿದರೆ ಹೀಗೆ ಶಿಫಾರಸ್ಸಿನ ಮೇರೆಗೆ ಮನಬಂದವರಿಗೆ ನಿವೇಶನ ನೀಡುವುದೂ ಕಾನೂನುಬಾಹಿರವಾಗುತ್ತದೆ. ಅಸಲಿಗೆ ಅಂತಹ ಶಿಫಾರಸ್ಸುಗಳನ್ನು ಯಾರೂ ಮಾಡಿಯೇ ಇಲ್ಲ ಎಂಬುದು ಸ್ವಲ್ಪ ಕೆದಕಿದರೆ ಅರ್ಥವಾಗುವ ವಿಚಾರ. ಮಂತ್ರಿಗಳ, ಲೋಕಾಯುಕ್ತರ ಹೆಸರಿನಲ್ಲಿ ಇಲ್ಲಿನ ಕಳ್ಳರೇ ನಡೆಸುತ್ತಿರುವ ವ್ಯವಸ್ಥಿತ ಜಾಲವಿದು. ನೌಕರರೇನಾದರೂ ಪಟ್ಟು ಹಿಡಿದು ಕೇಳಲು ಹೋದರೆ ಟ್ರಾನ್ಸ್‌ಫರ್ ಎಂಬ ಭೂತವನ್ನು ತೋರಿಸಿ ಹೆದರಿಸುವಲ್ಲಿ ಚಿಟ್ಟೆಗೌಡ ಮತ್ತು ನಾಗರಾಜ್ ಇಬ್ಬರೂ ಪಳಗಿದ್ದಾರೆ.

ಈಗ ಮತ್ತೆ 7 ಎಕರೆ ಜಾಗದ ನಿವೇಶನಗಳನ್ನು ಪಡೆಯುವುದಕ್ಕೆ ತಯಾರಿ ಶುರುವಾಗಿದೆ. ಈಗಾಗಲೇ ಹೇಳಿರುವಂತೆ ಬಿಡಿಎನಲ್ಲಿ ಕಾರ್ಯನಿರ್ವಹಿಸುತ್ತಿರುವ ಎಲ್ಲಾ ನೌಕರರಿಗೂ ನಿವೇಶನಗಳನ್ನು ಕೊಟ್ಟಾಗಿದೆ. ಅವರೆಲ್ಲರೂ ಮನೆಮಠ ಕಟ್ಟಿಕೊಂಡು ಬಾಡಿಗೆ ಪಡೆದುಕೊಂಡು ಚೆನ್ನಾಗಿಯೇ ಇದ್ದಾರೆ. ಹಾಗಿದ್ದರೂ ಮತ್ತೆ ಅವರ ಹೆಸರಿನಲ್ಲಿ ನಿವೇಶನ ಮಾಡುವ ದಂಧೆ ಪ್ರಾರಂಭವಾಗಿದೆ. ಉದಾಹರಣೆಗಾಗಿ ಹೇಳಬೇಕೆಂದರೆ ಪಿ.ನಾರಾಯಣಮೂರ್ತಿ ಎಂಬ ನೌಕರನಿಗೆ ಈಗಾಗಲೇ ಬಿಇಎಲ್ ಮುಖ್ಯ ರಸ್ತೆಯಲ್ಲಿ ಎರಡು ಲಕ್ಷ ಬಾಡಿಗೆ ಬರುವ ಕಮರ್ಷಿಯಲ್ ಕಾಂಪ್ಲೆಕ್ಸ್ ಇದೆ. ಬಿಡಿಎನಿಂದ ಪಡೆದ ನಿವೇಶನದಲ್ಲಿಯೇ ಈ ಕಾಂಪ್ಲೆಕ್ಸ್ ಕಟ್ಟಲಾಗಿದೆ. ಈತನಿಗೆ ವಿಜಯನಗರ, ವೈಯಾಲಿಕಾವಲ್‌ನಲ್ಲಿ ಸ್ವಂತ ಮನೆಗಳಿವೆ. ಈತನಿಗೆ ಈಗ ಮತ್ತೆ ನಿವೇಶನ ಕೊಡುವುದಕ್ಕೆ ಮುಂದಾಗಿದ್ದಾರೆ. ಮತ್ತೊಬ್ಬ ಡ್ರೈವರ್ ಚಂದ್ರೇಗೌಡನಿಗೆ ಬನಶಂಕರಿಯಲ್ಲಿ 60x40 ಅಳತೆಯ ನಿವೇಶನ ನೀಡಲಾಗಿದ್ದು ಅದರಲ್ಲಿ ನಾಲ್ಕು ಅಂತಸ್ತಿನ ಮನೆ ಕಟ್ಟಲಾಗಿದೆ. ಜೊತೆಗೆ ಮಕ್ಕಳ ಹೆಸರಿನಲ್ಲಿ, ಹೆಂಡತಿಯ ಹೆಸರಿನಲ್ಲಿ ಹಲವಾರು ನಿವೇಶನಗಳಿವೆ. ಆದರೂ ಇವರಿಗೆ ಬಿಡಿಎ ನಿವೇಶನ ನೀಡಲಾಗಿದೆ. ಇವು ಕೇವಲ ಕೆಲವು ಸ್ಯಾಂಪಲ್ಲುಗಳಷ್ಟೇ. ಕೆದಕುತ್ತಾ ಹೋದರೆ ಇಂತಹ ನೂರಾರು ಪ್ರಕರಣಗಳು ಕಣ್ಣಿಗೆ ರಾಚುತ್ತವೆ. ಹೀಗೆ ಸಾರ್ವಜನಿಕರಿಗೆ ಸೂರು ಒದಗಿಸಬೇಕಾದ ಚಿಟ್ಟೆಗೌಡ ಮತ್ತು ನಾಗರಾಜ್ ಎಂಬ ಹಗಲು ದರೋಡೆಕೋರರು ಕಾನೂನನ್ನು, ನೀತಿ ನಿಯಮಗಳನ್ನು ಗಾಳಿಗೆ ತೂರಿ ಎಷ್ಟರಮಟ್ಟಿಗೆ ಲೂಟಿ ಹೊಡೆಯುತ್ತಿದ್ದಾರೆಂದರೆ ಬಿಡಿಎದ ನೌಕರರೇ ಇವರನ್ನು ಅಟಕಾಯಿಸಿಕೊಳ್ಳುವ ದಿನ ದೂರವಿಲ್ಲ ಎನಿಸುತ್ತದೆ.

■ ಕುಮಾರ್ ಬುರಡಿಕಟ್ಟಿ

ಸಮಾಜಸೇವಕರ ದಾದಾಗಿರಿ




ಶ್ರೀಧರಮೂರ್ತಿ ಅಲಿಯಾಸ್ ಅಗ್ನಿ ಶ್ರೀಧರನ ಮನೆಯ ಕಾಂಪೌಂಡಿನೊಳಗೆ ಸ್ಕಾಟ್‌ನೆದುರು ರೌಡಿಗಳು ಪ್ರದರ್ಶಿಸುತ್ತಿರುವ ಮಾರಕಾಸ್ತ್ರಗಳು

ಅಮೆರಿಕನ್ ಪತ್ರಕರ್ತ ಸ್ಕಾಟ್ ಕಾರ್ನಿ ಎಂಬುವನು ಬೆಂಗಳೂರಿನ ಮಾಫಿಯಾ ಡಾನ್‌ಗಳ ಬಗ್ಗೆ ಬರೆದಿರುವ ತನಿಖಾ ವರದಿಯ ಅನುವಾದ ಇದು. ಈ ವರದಿ ಇತ್ತೀಚೆಗೆ WIRED ಎಂಬ ಇಂಟರ್‌ನೆಟ್ ಮ್ಯಾಗಜಿನ್‌ನಲ್ಲಿ ಫೋಟೋ ಸಹಿತ ಪ್ರಕಟವಾಗಿದೆ.

ಫೋಟೋ ಕೃಪೆ: ಸ್ಕಾಟ್ ಕಾರ್ನಿ

■ ಪಾರ್ವತೀಶ್

'ನಾನೀಗ ಬದಲಾಗಿದ್ದೀನಿ'


'ನಾನೀಗ ರೌಡಿಯಲ್ಲ, ಸಮಾಜ ಸೇವಕ.'

'ನಾನೀಗ ಡಾನ್ ಅಲ್ಲ, ನನ್ನ ಹೆಸರು ಹೇಳಿ ಯಾರಾದ್ರೂ ವಸೂಲಿಗೆ ಬಂದ್ರೆ ಪೊಲೀಸ್‌ಗೆ ಹೇಳಿ"

–ಇದು ಬೆಂಗಳೂರಿನ so called ಮಾಜಿ ಡಾನ್‌ಗಳಿಬ್ಬರು ದಿನನಿತ್ಯ ಉದುರಿಸುವ ಅಣಿಮುತ್ತುಗಳು. ಬಹಳಷ್ಟು ಮುಗ್ಧ ಜನ ಇದನ್ನು ನಿಜಾ ಅಂತಲೇ ನಂಬಿಕೊಂಡಿರುವುದು ಉಂಟು.

ಆದರೆ

ಸ್ಕಾಟ್ ಕಾರ್ನಿ ಎಂಬ ವಿದೇಶಿ ಪತ್ರಕರ್ತನೊಬ್ಬ ಈ ಮಾಜಿ ಡಾನ್‌ಗಳ ಹಾಲಿ ಮುಖವಾಡಗಳನ್ನು ಇತ್ತೀಚೆಗೆ ತಣ್ಣಗೆ ಬಿಚ್ಚಿಟ್ಟಿದ್ದಾನೆ. Wired Mag azine ಎನ್ನುವ ಇಂಟರ್‌ನೆಟ್ ಪತ್ರಿಕೆ ಯೊಂದು ಅಕ್ಟೋಬರ್ 20ರಂದು ಪ್ರಕಟಿಸಿರುವ The Godfather of Bangalore ಎಂಬ ಸಂದರ್ಶನಾಧಾರಿತ ವರದಿಯೊಂದು ಎಲ್ಲರನ್ನೂ ಬೆಚ್ಚಿ ಬೀಳಿಸುವಂತಿದೆ.



ಮುತ್ತಪ್ಪ ರೈ

ಈ ಡಾನ್‌ಗಳ ಅಡ್ಡೆಗಳಲ್ಲಿ ನಡೆದ ಮಾತುಗಳು, ಸುತ್ತ ಕಂಡ ದೃಶ್ಯ ಜನ, ಆಯುಧಗಳು, ಬಲಗೈ ಬಂಟರೆನಿಸಿಕೊಂಡವರ ರಕ್ತಸಿಕ್ತ ಮಾತುಗಳನ್ನೆಲ್ಲಾ ಸ್ಕಾಟ್ ಕಾರ್ನಿ ದಾಖಲಿಸಿದ್ದಾನೆ... ಫೋಟೋಗಳೊಂದಿಗೆ!

ಕಳೆದ ಎರಡು ವರ್ಷಗಳಿಂದ ಬೆಂಗಳೂರಿನ ಲ್ಯಾಂಡ್ ಮಾಫಿಯಾಗಳ ಚಟುವಟಿಕೆಗಳ ಬಗ್ಗೆ ಅಧ್ಯಯನ ನಡೆಸುತ್ತಿದ್ದ ಸ್ಕಾಟ್ ಕಾರ್ನಿ ತಾನು ಕಣ್ಣಾರೆ ಕಂಡ, ಭೇಟಿಯಾದ ವ್ಯಕ್ತಿಗಳ ಬಗ್ಗೆ ಯಾವುದೇ ಪೂರ್ವಾಗ್ರಹಗಳಿರದ ಹೇಗಿದ್ದರೋ ಹಾಗೇ ದಾಖಲಿಸಿದ್ದಾನೆ.

ಅವನು ನಿರೂಪಿಸಿರುವ ಕೆಲವು ಮುಖ್ಯ ಘಟನೆಗಳನ್ನು ಇಲ್ಲಿ ಪ್ರಕಟಿಸಿದೆ.

ಕಾರ್ನಿ ನಿರೂಪಣೆ

ಭಾರತದ ಐದನೇ ಅತೀ ಜನಭರಿತ ನಗರವಾದ ಬೆಂಗಳೂರು ಜಗತ್ತಿನ Tech outsourcing capital ಕೂಡ ಆಗಿದೆ. ಕಳೆದ ದಶಕದಲ್ಲಿ ಐನೂರಕ್ಕೂ ಹೆಚ್ಚು ಮಲ್ಟಿ ನ್ಯಾಷನಲ್ ಕಂಪನಿಗಳು ತಮ್ಮ ಫ್ಯಾಕ್ಟರಿ, ಕಚೇರಿ, ಕಾಲ್ ಸೆಂಟರ್, ಲಕ್ಸುರಿ ಹೋಟೆಲ್‌ಗಳನ್ನು ಸ್ಥಾಪಿಸಿವೆ. ಅಮೆರಿಕನ್ ಕಂಪನಿಗಳಾದ Adobe, Dell, IBM, Intel, Microsoft ಮತ್ತು Yahoo ಅಲ್ಲದೆ ಸ್ಥಳೀಯ ಇನ್‌ಫೋಸಿಸ್, ವಿಪ್ರೋಗಳು ಬೆಂಗಳೂರನ್ನು ಜಾಗತೀಕರಣದ ಶೋಕೇಸ್ ಆಗಿ ಬಿಂಬಿಸಿವೆ. ಇಂಡಿಯಾದ 34 ಬಿಲಿಯನ್ ಡಾಲರ್ ಐಟಿ ಉದ್ಯಮದ ಮೂರುಪಾಲು ಬೆಂಗಳೂರಿನದೇ ಆಗಿದೆ. ಅಮೆರಿಕಾದ ಎಂಪೈರ್ ಸ್ಟೇಟ್ ಬಿಲ್ಡಿಂಗ್‌ನಷ್ಟೇ ಭರ್ಜರಿಯಾಗಿರುವ ಯುಬಿ ಟವರ್, IISC ಥರದ ಉನ್ನತ ಸಂಸ್ಥೆಗಳೂ ಇಲ್ಲಿವೆ.

ಆದರೆ ಇದೇ ಬೆಂಗಳೂರಿಗೆ ಇನ್ನೊಂದು ಕರಾಳ ಮುಖವೂ ಇದೆ. ಲಂಚಕೋರರಲ್ಲದ ಅಧಿಕಾರಿಗಳು ನಗರ ಜೀವನವನ್ನು ಸರಿದಾರಿಯಲ್ಲಿ ನಡೆಸಲು ಪ್ರಯತ್ನಿಸುತ್ತಿದ್ದರೂ ವ್ಯವಸ್ಥೆ ಭ್ರಷ್ಟವಾಗಿ ಹೋಗಿದೆ. ನ್ಯಾಯ ವ್ಯವಸ್ಥೆ ಜಡವಾಗಿದೆ. ಇದರಿಂದಾಗಿ ಬೆಂಗಳೂರಿನ ಭೂಗತ ಲೋಕ ನಗರದ ರಿಯಲ್ ಎಸ್ಟೇಟ್ ವ್ಯವಹಾರವನ್ನು ಸಂಪೂರ್ಣವಾಗಿ ತನ್ನ ಕೈಗೇ ತೆಗೆದುಕೊಂಡಿದೆ. ಐಟಿ ಕಂಪನಿಗಳ ದಾಹದಿಂದಾಗಿ ಭೂಮಿಗಾಗಿನ ಬೇಡಿಕೆ ವಿಪರೀತ ಏರಿದ್ದು 2001 ರಲ್ಲಿ ಚದರಡಿಗೆ ದರ ಒಂದು ಡಾಲರ್ ಇದ್ದರೆ ಅದೀಗ ನಾನೂರು ಡಾಲರ್ ತಲುಪಿದೆ.



ಬೆಂಗಳೂರಿನ ರಿಯಲ್ ಎಸ್ಟೇಟ್ ಬಗ್ಗೆಯೇ ವಿಶೇಷ ಅಧ್ಯಯನ ನಡೆಸಿರುವ ಟೊರಾಂಟೊ ವಿಶ್ವವಿದ್ಯಾಲಯದ ಸೊಲೋಮನ್ ಬೆಂಜಮಿನ್ ಎಂಬಾತನ ಅಭಿಪ್ರಾಯ ಗಮನಾರ್ಹವಾಗಿದೆ. ವಂಶಪಾರಂಪರ್ಯದ ಆಸ್ತಿ ಖಚಿತ ದಾಖಲೆಗಳಿಲ್ಲದಿರುವುದು, ಉತ್ತರಾಧಿಕಾರಿಗಳ ಆಸ್ತಿ ಕಿತ್ತಾಟಗಳು ಪೀಳಿಗೆಯಿಂದ ಪೀಳಿಗೆಗೆ ಬೆಳೆಯುತ್ತಾ ಯಾವುದೇ ಒಂದು ಆಸ್ತಿಯ ಅಸಲಿ ಮಾಲೀಕ ಯಾರೆಂಬುದು ಮಸುಕಾಗುತ್ತಾ ಹೋಗುತ್ತದೆ ಎನ್ನುತ್ತಾನೆ. ಇಂಥ ಭೂಮಿ ಖರೀದಿಸಲು ಬಯಸುವವರು ಏಕಕಾಲದಲ್ಲಿ ಡಜನ್‌ಗಟ್ಟಲೆ ಜನರೊಂದಿಗೆ ವ್ಯವಹರಿಸಬೇಕಾಗಿ ಬರುತ್ತದೆ. ಇಂತಲ್ಲಿ ವಿವಾದಗಳು ಭುಗಿಲೇಳುತ್ತವೆ.

ಲ್ಯಾಂಡ್ ಮಾಫಿಯಾ ಕಾಣಿಸಿಕೊಳ್ಳುವುದೇ ಆವಾಗ. ಇವರು ತೋಳ್ಬಲ ಬಳಸಿ ವಿವಾದಿತ ಭೂಮಿ ಆಕ್ರಮಿಸಿಕೊಳ್ಳುತ್ತಾರೆ. ಕಾನೂನುಬದ್ಧ ಕೋರ್ಟಿಗಿನ್ನ ಮಿಗಿಲೆಂಬಂತೆ ಮಾಫಿಯಾ ಕೋರ್ಟ್ ನಡೆಸಿ ತುರ್ತಾಗಿ ತೀರ್ಪು ನೀಡುತ್ತಾರೆ. ಬೆಂಗಳೂರಿನ ಶೇ. 40ರಷ್ಟು ಭೂವ್ಯವಹಾರ ಈಗ ಲ್ಯಾಂಡ್ ಮಾಫಿಯಾಗಳ ಮೂಲಕವೇ ನಡೆದಿದೆ ಎನ್ನುವುದು ದೆಹಲಿಯ ಜವಾಹರ್‌ಲಾಲ್ ಯೂನಿವರ್ಸಿಟಿಯ ಅರ್ಥಶಾಸ್ತ್ರಜ್ಞ ಅರುಣ್ ಕುಮಾರ್‌ರವರ ಅಭಿಪ್ರಾಯವಾಗಿದೆ.

ಮುಲಾಮ ಅಲಿಯಾಸ್ ಲೋಕೇಶ್ ಇಂಥವರಲ್ಲೊಬ್ಬ. ಇವನ ಅಡ್ಡ ಹೆಸರೇ ಹೇಳುವಂತೆ ಯಾವುದೇ ವಿವಾದವೆಂಬ ಗಾಯಕ್ಕೆ ಇವನೇ ಮುಲಾಮು...



ಅಗ್ನಿ ಶ್ರೀಧರ


ಅರ್ಥಾತ್ ಔಷಧಿ. ಈತ ಈಗ 'ಅಗ್ನಿ' ಶ್ರೀಧರ ಎಂ[...] ಕರೆದುಕೊಳ್ಳುತ್ತಿರುವ ಶ್ರೀಧರಮೂರ್ತಿ ಎಂಬ ಡಾನ್[...] ಬಲಗೈ ಭಂಟ. ನಾನು ಶ್ರೀಧರಮೂರ್ತಿಯನ್ನು ಭೇಟಿಯಾ[...]ಗಲು ಹೋದಾಗ ಕೆಲ ಹೊತ್ತು ಕಾಯಲು ಹೇಳಲಾಯಿತು[...] ಒಳಗೆ ಯಾರೊಂದಿಗೆ ಮಾತನಾಡುತ್ತಿದ್ದಾರೆಂದು ನಾ[...] ವಿಚಾರಿಸಿದಾಗ 'ಎಂಬೆಸಿ ಬಿಲ್ಡರ್ಸ್‌ನವರೊಂದಿಗೆ' ಎಂದೊ[...] ಉತ್ತರಿಸಿದ. ಆಗ ನಾನು ಕಾಯುತ್ತಿದ್ದ ಜಾಗದಲ್ಲೇ [...] ಮುಲಾಮ ಇದ್ದ. ನಾನು ಆ ರೌಡಿ ಜೊತೆ ಮಾತಾ[...]ತ್ತಾ ಈಗಲೂ ವೆಪನ್ಸ್ ಇದೆಯಾ ಅಂದಿದ್ದಕ್ಕೆ ಮುಲಾ[...] ತನ್ನ ಕಾರಿನ ಡಿಕ್ಕಿ ತೆಗೆಸಿ ಹಲವಾರು ಲಾಂಗ್‌ಗ[...] ಮತ್ತು ಚೈನಾ ಮೇಡ್ ಚಾಕುಗಳನ್ನು ತೋರಿಸಿ[...] ಮುಲಾಮನ ಮೇಲೆ ಹಲವಾರು ಕೊಲೆ, ಅಪಹರ[...] ಹಾಗೂ ಬೆದರಿಸಿ ಹಣ ಕಿತ್ತ ಕೇಸ್‌ಗಳಿದ್ದವು. ಆದರ[...] ಅವನು "ಲ್ಯಾಂಡ್ ವ್ಯವಹಾರದ[...] ಹಣ ಎಷ್ಟು ಜಾಸ್ತಿ ಇದೆ ಅಂದ[...] ಅದರೆದುರು ಮನುಷ್ಯನ ಪ್ರಾಣ[...] ಬೆಲೆ ಕಡಿಮೆ ಯಾಗಿದೆ" ಅಂ[...] "ಜನ ಈಗ ಗನ್‌ಗಳ ಮೂಲ[...] ಕಾದಾಡುತ್ತಾರೆ" ಎಂತಲೂ ಸೇರಿಸಿ[...] ನಂತರ ನಾನು ಶ್ರೀಧರಮೂರ್ತಿ[...] ಜೊತೆ ಮಾತಿಗೆ ಕೂತಾಗ 'ಎಂಬೆ[...] ಬಿಲ್ಡರ್ಸ್‌ನವರು ಯಾಕೆ ಬಂದಿದ್ದ[...] ಎಂದು ಕೇಳಿದೆ. ಆತ 'ನನ[...] ಬೆಂಗಳೂರು ಬಗ್ಗೆ ಚೆನ್ನಾಗಿ ಗೊತ್ತ[...] ಆದಕ್ಕೆ' ಎಂದು ಸಣ್ಣದಾಗಿ ನಗು[...] ಉತ್ತರಿಸಿದ.

ಅಂದಹಾಗೆ, ಮುಲಾ[...] ಅಷ್ಟೊಂದು ಮಾರಕಾಸ್ತ್ರಗಳ[...] ತನ್ನೊಂದಿಗೆ ಇಟ್ಟುಕೊಂಡಿ[...] ಯಾವುದೇ ಕ್ಷಣದಲ್ಲಿ ಯಾರನ್ನ ಬೇಕಾದರೂ ಕೊಲ್ಲುವುದ[...] ಇಲ್ಲವೆಂದರೆ ಕನಿಷ್ಠ ಪಕ್ಷ ತನ್ನ 'ತೋಳ್ಬಲ'ವನ್ನು ಪ್ರದರ್ಶಿಸು[...] ಮೂಲಕ ಲ್ಯಾಂಡ್ ಡೀಲ್‌ಗಳನ್ನು ಕುದುರಿಸುವುದಕ[...]


ಬೆಂಗಳೂರಿನ ಇನ್ಸ್‌ಪೆಕ್ಟರ್ ಎಸ್.ಕೆ. ಉಮೇಶ್ [...] ಭೂಮಾಫಿಯಾಗಳ ವಿರುದ್ಧ ಕಠಿಣ ಕ್ರಮ ತೆಗೆದುಕೊಂ[...] ಇದುವರೆಗೂ ಐವರು ಕುಖ್ಯಾತ ಕ್ರಿಮಿನಲ್‌ಗಳ[...] ಕೊಂದಿದ್ದಾರೆ ಹಾಗೂ ಹಲವಾರು ಸುಪಾರಿ ಕಿಲ್ಲರ್‌ಗಳ[...] ಬಂಧಿಸಿದ್ದಾರೆ. ಮಾಫಿಯಾಗಳ ಚಲನವಲನಗಳ [...] ನಿಗಾ ಇಟ್ಟಿರುವ ಅವರು "ಬೆಂಗಳೂರಿನಲ್ಲಿ ಅಂದಾ[...] 2000 ರೌಡಿಗಳಿದ್ದಾರೆ. ಅವರಲ್ಲಿ ಶೇ. 90 ಮಂದಿ ರಿಯ[...]




ಮಾಫಿಯಾ ಡಾನ್ ಮುತ್ತಪ್ಪ ರೈನ ಮನೆ ಹಾಗೂ ಸಶಸ್ತ್ರ ಬಾಡಿಗಾರ್ಡುಗಳು

ಮುತ್ತಪ್ಪ ರೈನ ಶೋಕಿ ಬದುಕು





ಶ್ರೀಧರನ ಮನೆಯಲ್ಲಿ ಕೊಲೆ, ಅಪಹರಣ, ಬೆದರಿಸಿ ಹಣ ವಸೂಲಿಗಳ ಆರೋಪಿ ನಟೋರಿಯಸ್ ರೌಡಿ ಮುಲಾಮ ಅಲಿಯಾಸ್ ಲೋಕೇಶ

...ಟ್ ಮಾರ್ಕೆಟ್‌ನಲ್ಲಿದ್ದಾರೆ" ಎಂದರು. ತಮ್ಮ ...ಟರ್ ಆನ್ ಮಾಡಿ ಹಲವಾರು ಮಾಫಿಯಾ ...ಗಳ ಫೋಟೋ ತೋರಿಸುತ್ತಾ ಡಾನ್‌ಗಳು ನಡೆಸಿದ ...ಳ ಬಗ್ಗೆ ಕಾಮೆಂಟರಿ ನೀಡುತ್ತಾ ಹೋದರು. ಅದರಲ್ಲಿ ...ಪ್ಪ ರೈ ಒಬ್ಬನಾಗಿದ್ದ. ಮಾಫಿಯಾ ಡಾನ್ ಆಗಿ ...ರ್ ರೂಪಿಸಿಕೊಂಡ ರೈ ಇವತ್ತು ಬಲಿಯನ್‌ಗಟ್ಟಲೆ ...ರ್ ತೂಗುತ್ತಾನೆ. ಒಂದು ಕಾಲದಲ್ಲಿ ಇಂಡಿಯಾದ ...t **wanted men** ಗಳಲ್ಲಿ ಒಬ್ಬನಾಗಿದ್ದ ರೈ ಈಗ ... ಬದಲಾಗಿರುವುದಾಗಿ ಹಿಂಸೆ ...ರುವುದಾಗಿ ಹೇಳಿ ಸಮಾಜ ಸೇವೆಯ ...ಾಡುತ್ತಾನೆ. ಆದರೆ ಅವನೂ ಕೂಡಾ ...ಟ್ ಎಸ್ಟೇಟ್‌ನಲ್ಲಿದ್ದಾನೆ.

...ಂಗಳೂರಿನಿಂದ ದಕ್ಷಿಣದ ಕಡೆಗೆ ಒಂದು ...ಮ ಪ್ರಯಾಣ ಮಾಡಿ, ನಾನು ಮುತ್ತಪ್ಪ ...ೇಟಿಗೆ ಹೋದಾಗ ಕೋಟೆಯ ರೀತಿ ... ಮನೆಯ ಕಾಂಪೌಂಡ್‌ನಲ್ಲೇ ಇಬ್ಬರು ...ಕುಧಾರಿಗಳು ತೆಳುವಾಗಿ ನಕ್ಕರು. ...ು ಬಣ್ಣದ ಬೃಹದಾಕಾರದ ಮನೆ ಅದು. ... ಕಾಂಪೌಂಡ್ ಗೋಡೆಗಳು 20 ಅಡಿ ...ದ್ದವು. ಮನೆಯ ಗೇಟ್ ಬಳಿ ಮತ್ತಿಬ್ಬರು ... ಶೋಧಿಸಿದರು. ನನ್ನ ಡಿಜಿಟಲ್ ಕ್ಯಾಮರಾ ... ಬಾಂಬ್ ಇರಬಹುದೇ ಎನ್ನುವಂತೆ ... ಮಾಡಿದರು. ಮುಂದೆ ನನ್ನನ್ನು ಒಂದು ... ಆಟಗಾರರು ಬಳಸುವ ಚಿಕ್ಕ ವೆಹಿಕಲ್ ...ಳಭಾಗಕ್ಕೆ ಕರೆದೊಯ್ಯಲಾಯಿತು. ಅಲ್ಲಿ ...ಜ್ ಬಳಿ ನಾನು ಬುಲೆಟ್ ಪ್ರೂಫ್ ...ಟ್ ಕ್ರುಸಿಯರ್ ಕಾರ್ ಗಮನಿಸಿದೆ. ...ಾನದ ಮಾಜಿ ಪ್ರಧಾನಿ ನವಾಜ್ ಷರೀಫ್ ...ಸಿದ್ದರೂ ರೈ ಆ ಕಾರನ್ನು ತನ್ನದಾಗಿಸಿ ...ನೆಂದು ಒಬ್ಬ ಹೇಳಿದ. ಆ ಕಾರ್ ... 47 ಬುಲೆಟ್‌ಗಳನ್ನು ಮತ್ತು ರಾಕೆಟ್ ...ಲ್ಡ್ ಗ್ರೈನೇಡ್ ದಾಳಿಗಳನ್ನು ತಡೆಯುವಂತ

...ನಿಮಗೆ ಇಷ್ಟೊಂದು ಸೆಕ್ಯುರಿಟಿ ಯಾಕೆ ಬೇಕು?" ... ಕೇಳಿದ್ದಕ್ಕೆ ರೈ "ನಾನು ಯಾರನ್ನೂ ನಂಬುವಂತಿಲ್ಲ. ...ರವನ್ನಾಗಲಿ ಇಲ್ಲಾ ನನ್ನ ಹಳೆಯ ಶತ್ರುಗಳನ್ನಾಗಲಿ ...ವುದಿಲ್ಲ" ಎಂದುತ್ತರಿಸಿದ. ಮುತ್ತಪ್ಪ ರೈ ಈಗ ...ಜ ಸೇವೆಯ ಮೂಲಕ ತನ್ನನ್ನು ತಾನು ಪುನರ್ ...ಕೊಳ್ಳಲು ಹೊರಟಿದ್ದಾನೆ. ಕರ್ನಾಟಕದ ಉದ್ಧಾರಕ್ಕಾಗಿ ...ರ್ನಾಟಕ ಎಂಬ ಲಾಭರಹಿತ ಸಂಸ್ಥೆ ಹುಟ್ಟುಹಾಕಿದ್ದಾನೆ. ...ಸಂಘಟನೆಯ ವೆಬ್‌ಸೈಟ್‌ನಲ್ಲಿ 'ಮನುಷ್ಯನ ಘನತೆ, ...ೋದರತ್ವ, ಮುಕ್ತ ಅಭಿವ್ಯಕ್ತಿ'ಯೇ ತನ್ನ ಗುರಿ ಎಂದು ...ಸಿಕೊಂಡಿದೆ. ಜಯ ಕರ್ನಾಟಕ ಸಂಘಟನೆ ಉಚಿತ ...ಗ್ಯ ಶಿಬಿರಗಳು, ಬರಪ್ರದೇಶಗಳಲ್ಲಿ ಬೋರ್‌ವೆಲ್ ...ಸುವುದು, ಬಡಜನರ ಕಣ್ಣು-ಹೃದಯ ಶಸ್ತ್ರ ಚಿಕಿತ್ಸೆಗೆ ...ಹಾಯ ಮಾಡುತ್ತದೆ. ಜೈ ಕರ್ನಾಟಕದ 300 ...ಗಳೂ, 7 ಲಕ್ಷ ಸದಸ್ಯರೂ ಇದ್ದಾರಂತೆ. ...ಡೇ ಸಂಘಟನೆ ಮುತ್ತಪ್ಪ ರೈನ ರಿಯಲ್ ಎಸ್ಟೇಟ್ ವ್ಯವಹಾರಗಳಲ್ಲೂ ಭಾಗಿಯಾಗುತ್ತದೆ.

"ಒಂದು ವಿದೇಶಿ ಕಂಪನಿ ಯಾವುದಾದರೂ ಬ್ಯುಸಿನೆಸ್‌ಗಾಗಿ ಇಲ್ಲಿಗೆ ಬಂದಾಗ ಯಾರನ್ನು ನಂಬ ಬೇಕೆಂಬುದೇ ಗೊತ್ತಿರುವುದಿಲ್ಲ. ಅವರಿಗೆ ಜಮೀನುಗಳ ದಾಖಲೆ ಪಕ್ಕಾ ಇರಬೇಕು. ಹಾಗಂತ ಸ್ಥಳೀಯರ ಹತ್ತಿರ ಹೋದರೆ ನೂರೆಂಟು ಕಾನೂನು ರಗಳೆಗಳಿರುತ್ತವೆ. ಆದರೆ ಈ ರೈ ಒಂದು ಭೂದಾಖಲೆ ಕೊಟ್ಟಾ ಅಂದರೆ ಹಂಡ್ರೆಡ್ ಪರ್ಸೆಂಟ್ ಕರೆಕ್ಟಾಗಿರುತ್ತೆ, ಲಿಟಿಗೇಷನ್ ಇರಲ್ಲ, ಮೋಸ



ಶ್ರೀಧರನ ಮನೆ ಕಾಂಪೌಂಡಿನಲ್ಲಿ ಬಾಡಿಗಾರ್ಡ್‌ಗಳಾದ ಬಾಬು ಹಾಗೂ ಮತ್ತೊಬ್ಬ ರೌಡಿಯಿಂದ ಆಯುಧಗಳ ಪ್ರದರ್ಶನ...

ಇಲ್ಲ, ಎಲ್ಲಾ ನೇರಾನೇರ ವ್ಯವಹಾರ ಅದು. ಮುತ್ತಪ್ಪನೇ ಹೇಳಿದ ಪ್ರಕಾರ ಪ್ರತಿದಿನ ಕನಿಷ್ಠ ನೂರೈವತ್ತು ಜನರಾದರೂ ಅವನ ಮಾಫಿಯಾ ಕೋರ್ಟಿಗೆ ಸಹಾಯ ಕೇಳಿ ಬರುತ್ತಾರಂತೆ. ಆದರೆ ಅವರ ಹೆಸರುಗಳನ್ನು ರೈ ಹೇಳಲಿಲ್ಲ, ಅವರ ಬ್ಯುಸಿನೆಸ್‌ಗೆ ತೊಂದರೆಯಾಗುತ್ತೆ ಎಂದು. ಮಾತಿನ



ಮಧ್ಯೆ ಮುತ್ತಪ್ಪ ಬಾಯಿತಪ್ಪಿ, ತಾನು ಇತ್ತೀಚೆಗೆ ರಿಲೆಯನ್ಸ್ ಕಂಪನಿಗೆ ಇನ್ನೂರು ಎಕರೆ ಭೂಸ್ವಾಧೀನಪಡಿಸಿಕೊಂಡು ಹಸ್ತಾಂತರಿಸಿದ್ದಾಗಿ ಹೇಳಿಕೊಂಡ.

ಬೆಂಗಳೂರಿನ ಲ್ಯಾಂಡ್ ವ್ಯವಹಾರಗಳ ಕೇಸ್‌ಗಳನ್ನು ನಡೆಸುವ ಪರಿಣಿತ ಲಾಯರ್ ಒಬ್ಬ ಹೇಳಿದಂತೆ ಈ ದಂಧೆ ಹೀಗೆ ನಡೆಯುತ್ತದೆ. ಖರೀದಿದಾರನೊಬ್ಬ ತನಗೆ ಬೇಕಾಗಿರುವ ಲ್ಯಾಂಡ್ ಬಗ್ಗೆ ರೈ ಬಳಿ ಪ್ರಸ್ತಾಪ ಮಾಡುತ್ತಾನೆ. ರೈ ಕೂಡಲೇ ಆ ಭೂಮಿಯ ಮಾಲೀಕ ಯಾರೆಂದು ಚೆಕ್ ಮಾಡುತ್ತಾನೆ. ಆಗ ಇಬ್ಬರು ವ್ಯಕ್ತಿಗಳು ಭೂಮಿ ತಮ್ಮದೆಂದು ವಾದಿಸಿದರೆ ಯಾರಿಗೆ ಜಾಸ್ತಿ ಹಕ್ಕಿದೆ (ರೈ ಪ್ರಕಾರ 80% ಲೀಗಲ್) ಎನ್ನುವುದನ್ನು ರೈ ತೀರ್ಮಾನಿಸುತ್ತಾನೆ. ನಂತರ ಅಂತವನಿಗೆ ಆ ಭೂಮಿ ಬೆಲೆಯ ಶೇ. 50 ಬೆಲೆ ನಗದಾಗಿ ನೀಡಿ ಇನ್ನೊಬ್ಬನಿಗೆ ಬಾಯಿ ಮುಚ್ಚಿಕೊಂಡಿರಲು ಶೇ. 25 ಎಂದು ನಿಗದಿ ಮಾಡುತ್ತಾನೆ. ಕೊನೆಗೆ ಆ ಭೂಮಿಯನ್ನು ತಾನೇ ನೇರವಾಗಿ ಖರೀದಿದಾರನಿಗೆ ಮಾರಿ ಉಳಿದ 25 ಪರ್ಸೆಂಟ್ ಜೇಬಿಗಿಳಿಬಿಡುತ್ತಾನೆ. ಇದನ್ನು ಒಪ್ಪದವರು ಮುತ್ತಪ್ಪನ ಜೊತೆಗೇ ನೇರ ಕದನಕ್ಕಿಳಿಯಬೇಕಾಗುತ್ತದೆ.

ಮುತ್ತಪ್ಪನ ಬಲಗೈ ಬಂಟ ಸಂಗೀತಾ ಎನ್ನುವವನು "ಹಿಂಸಾಚಾರ, ಬೆದರಿಕೆ ನಮಗೆ ದೊಡ್ಡ ವಿಚಾರಾನೇ ಅಲ್ಲ" ಎನ್ನುತ್ತಾನೆ. "ಯಾರಿಗೆ ಆಗಲಿ ಭಯ ಹುಟ್ಟಿಸಲು ರೈ ಹೆಸರೇ ಸಾಕು" ಎನ್ನುವುದು ಸಂಗೀತಾ ನಂಬಿಕೆ. "ಮುತ್ತಪ್ಪ ರೈ ಕೈ ಹಾಕಿದ ಲ್ಯಾಂಡ್ ಡೀಲಿನಲ್ಲಿ ಅವನಿಗೆ ಎದುರಾಗಿ ಬೇರೆ ಇನ್ಯಾರಾದರೂ ರೌಡಿ ಕಾಣಿಸಿಕೊಂಡ ಅಂತಿಟ್ಟುಕೊಳ್ಳಿ. ಅವನು ನಮ್ಮ ಮಾತಿಗೆ ಬಗ್ಗದಿದ್ದರೆ ನಾವು ನೇರವಾಗಿ ಆ ರೌಡಿಯ ಹಿಂದಿರುವ ವ್ಯಕ್ತಿ ಬಳಿಗೇ ಹೋಗಿ ಬೆನ್ನುಮೂಳೆ ಮುರಿಯುತ್ತೇವೆ" ಎಂದು ಸಂಗೀತಾ ತಮ್ಮ ಕಾರ್ಯವಿಧಾನದ ಬಗ್ಗೆ ವಿವರಿಸಿದ. "ಆಗಲೂ ಪರಿಸ್ಥಿತಿ ಕಂಟ್ರೋಲಿಗೆ ಬರದಿದ್ದರೆ ನಾವು ಯಾರಿಗಾದರೂ ಹೊಡೆದು ಹಿಂಸಿಸಿ, ಮಾರನೇ ದಿನ ನಾವೇ ಅದನ್ನು ಮಾಡಿದ್ದೆಂಬ ಮೆಸೇಜ್ ತಲುಪಿಸುತ್ತೇವೆ, ನಮ್ಮ ಹೆಸರೊಂದೇ ಸಾಕು ಎಂತವರನ್ನು ಷೇಕ್ ಮಾಡೋಕೆ" ಎಂದು ಸಂಗೀತಾ ತಣ್ಣಗೆ ಹೇಳುತ್ತಾನೆ.

ಇದೊಂದು ವ್ಯವಸ್ಥಿತವಾದ ಮಾಫಿಯಾ ಜಾಲ. ಅದು ಭ್ರಷ್ಟತನದ್ದೇ ಆಗಿದ್ದರೂ ತಾನೇ ಒಂದು ವ್ಯವಸ್ಥೆಯಾಗಿದೆ. ಇದರಿಂದ ಕೆಲವರು ತೊಂದರೆಗೀಡಾದರೂ ರೈ ಪ್ರಕಾರ "ಏನೇ ಆದರೂ, ಪ್ರತಿಯೊಬ್ಬರೂ ವಿವಾದ ಸೆಟಲ್ ಆಗಲಿ ಅಂತ ಬಯಸುತ್ತಾರೆಯೇ ವಿನಃ ಯಾರೊಬ್ಬರೂ ಕೋರ್ಟಿಗೆ ಹೋಗಲು ಇಷ್ಟಪಡಲ್ಲ" ಎಂಬುದಾಗಿದೆ.

ತನ್ನ ಮನೆಯೊಳಗೆ ಲೆದರ್ ಸೋಫಾದಲ್ಲಿ ಕುಳಿತು ಮುತ್ತಪ್ಪ ರೈ ಕೊನೆಗೆ ಹೇಳಿದ್ದೇನೆಂದರೆ "ಫಾರಿನ್ ಕಂಪನಿಗಳು ಬರುತ್ತಿವೆ. ಇಲ್ಲಿ ಎಲ್ಲಾ ಇಂಪ್ರೂವ್ ಆಗುತ್ತೆ, ನಾನಿದನ್ನು ಪ್ರಪಂಚದ ಎಲ್ಲಾ ಕಡೆ ನೋಡಿದ್ದೀನಿ, ಇಲ್ಲಿ ಅದಕ್ಕೆ ನಾನು ಸಹಾಯ ಮಾಡ್ತಿದ್ದೀನಿ" ಎಂದು.



ಸಮಾಜಸೇವಕ ಮುತ್ತಪ್ಪ ರೈನ ಭದ್ರಕೋಟೆ...



ಬಡವರ ಬಂಧು ಮುತ್ತಪ್ಪ ರೈನ 40 ಎಕರೆ ಗಾರ್ಡನ್ ಮತ್ತು ಬಂಗಲೆ



ಯಾರಿವನು ಸ್ಕಾಟ್ ಕಾರ್ನಿ?

The Godfather of Bangalore ತನಿಖಾ ವರದಿ ಬರೆದಿರುವ ಸ್ಕಾಟ್ ಕಾರ್ನಿ ಒಬ್ಬ ವಿಶಿಷ್ಟ ಹವ್ಯಾಸಗಳ ಪತ್ರಕರ್ತ. ಕಳೆದ ಮೂರು ವರ್ಷಗಳಿಂದ ದಕ್ಷಿಣ ಏಷ್ಯಾ ದೇಶಗಳಲ್ಲಿ ಓಡಾಡಿ ಕೊಂಡು ನಮ್ಮ ನೆಲದಲ್ಲಿ ನಮಗೇ ಕಂಡಿರದ ಸತ್ಯಗಳನ್ನು ಬಗೆದು ತೋರಿಸಿದ್ದಾನೆ. ಈಗ ಬೆಂಗಳೂರಿನ ಮಾಫಿಯಾ ಡಾನ್‌ಗಳ ಅಸಲಿ ಮುಖವಾಡದ ಬಗ್ಗೆ ಸಾಕ್ಷಿ ಸಮೇತ ಬರೆದಿರುವ ಸ್ಕಾಟ್ **The Bone Factory** ಎಂಬ ಇನ್ನೊಂದು ತನಿಖಾ ವರದಿ ಬರೆದಿದ್ದ. ಅದು **2007** ರ ಡಿಸೆಂಬರ್‌ನಲ್ಲಿ **WIRED** ಇಂಟರ್ ನೆಟ್ ಮ್ಯಾಗಜೈನ್‌ನಲ್ಲಿ ಪ್ರಕಟವಾಗಿತ್ತು.



ಫೋಟೋಗ್ರಾಫರ್ ಅಕ್ಷಯ್ ಮಹಾಜನ್

ಭಾರತದಲ್ಲಿ ಹೆಣಗಳ ವ್ಯಾಪಾರ ಕುರಿತ ಭಯಾನಕ ಮಾಫಿಯಾ ದಂಧೆಯ ಚಿತ್ರಣವೇ **The Bone Factory.** ಕೊಲ್ಕತ್ತಾದ ಮಾಫಿಯಾ ಗಳು ಹೇಗೆ ಸ್ಮಶಾನ, ಆಸ್ಪತ್ರೆ ಹಾಗೂ ಹಲವಾರು ಮೂಲಗಳಿಂದ ಮನುಷ್ಯನ ಮೂಳೆ, ಅಸ್ಥಿಪಂಜರ ಗಳನ್ನು ಸಂಗ್ರಹಿಸಿ ಅಮೆರಿಕಾ-ಯೂರೋಪ್ ದೇಶಗಳ ವೈದ್ಯಕೀಯ ಸಂಶೋಧನೆಗಳಿಗೆ ಸ್ಮಗಲ್ ಮಾಡುತ್ತಿದ್ದಾರೆಂಬ ವರದಿ ಅದು.

ಸ್ಕಾಟ್ ಇಂಥದ್ದೇ **`Indians buy organs with impunity,' 'Testing drugs on India's poor'** ಮುಂತಾದ ತನಿಖಾ ವರದಿಗಳನ್ನು ಬರೆದಿದ್ದಾನೆ.

ಬೆಂಗಳೂರಿನ ಲ್ಯಾಂಡ್ ಮಾಫಿಯಾ ಡಾನ್ ಗಳಿಬ್ಬರು, ಅವರ ಸಮಾಜ ಸೇವೆಯ ನಟನೆ, ಅವರಿಬ್ಬರ ಬೆನ್ನಿಗೆ ತೆರೆಮರೆಯಲ್ಲಿರುವ ಪಾತಕಿಗಳಾದ ಮುಲಾಮ ಯಾನೆ ಲೋಕೇಶ್ ಹಾಗೂ ಸಂಗೀತಾ ಇವರುಗಳ ಬಗ್ಗೆ ನೀವೂ ಕೂಡ ಇಂಟರ್‌ನೆಟ್‌ನಲ್ಲೇ ನೇರವಾಗಿ ಓದ ಬಹುದು.

www.scottcarneyonline.com

www. WIRED.com

ಅಲ್ಲದೆ ಕನ್ನಡಿಗ ಮತ್ತು ಔಟ್‌ಲುಕ್ ಪತ್ರಿಕೆಯ ಸಂಪಾದಕ ಕೃಷ್ಣಪ್ರಸಾದ್ ಅವರು ನಡೆಸುವ ಬ್ಲಾಗ್ ಸ್ಪಾಟ್ churumuriಯಲ್ಲೂ ಇದು ಲಭ್ಯ.

‘ಮೈಹೋಮ್’ ಹೆಸರಲ್ಲಿ ಹಿಂದೂ ಉಗ್ರರ ಮತಾಂತರ!



ಮೇಘಾಲಯ ಮಕ್ಕಳ ಅಕ್ರಮ ಸಾಗಾಟ

ಚರ್ಚ್‌ಗಳಲ್ಲಿ ಮತಾಂತರ ನಡೆಯುತ್ತಿದೆ ಎಂದು ಆರೋಪಿಸಿ ಚರ್ಚ್‌ಗಳ ಮೇಲೆ ನಿರಂತರವಾಗಿ ದಾಳಿ ನಡೆಸುತ್ತಿರುವ, ಕ್ರೈಸ್ತ ಭಗಿನಿಯರ ಮೇಲೆ ಅತ್ಯಾಚಾರವೆಸಗುತ್ತಿರುವ, ಕ್ರೈಸ್ತರನ್ನು ಜೀವಂತವಾಗಿ ದಹಿಸುತ್ತಿರುವ ಹಿಂದೂತ್ವವಾದಿ ಸಂಘಪರಿವಾರವೂ ಮತಾಂತರದಲ್ಲಿ ನಿರತವಾಗಿರುವುದು ಗುಟ್ಟಾಗಿ ಏನೂ ಉಳಿದಿಲ್ಲ.

ಮರಳಿ ಮಾತೃಧರ್ಮಕ್ಕೆ ಎಂಬ ಘೋಷಣೆಯೊಂದಿಗೆ ಕಾನೂನುಬಾಹಿರ ‘ಮರು’ ಮತಾಂತರ ಪ್ರಕ್ರಿಯೆಯಲ್ಲಿ ತೊಡಗಿರುವ ಸಂಘ ಪರಿವಾರ, ಹಿಂದೂ ಯುವಕ-ಯುವತಿಯರನ್ನು ಪ್ರೇಮಿಸುವ ಮುಸ್ಲಿಮ್ ಹಾಗೂ ಕ್ರೈಸ್ತ ಮತಸ್ಥ ಯುವಕ-ಯುವತಿಯರನ್ನು ಯಾವ ಅಡೆತಡೆಯೂ ಇಲ್ಲದೆ ಸಂಭ್ರಮದಿಂದ ಮತಾಂತರ ಮಾಡಿ ಮೌನವಾಗುತ್ತದೆ.

ಸಂಘ ಪರಿವಾರಕ್ಕೆ ನೂರಾರು ಮುಖಗಳು. ಒಂದೊಂದು ಮುಖಕ್ಕೂ ಒಂದೊಂದು ಅಜೆಂಡಾ. ಕೆಲವು ಮುಖಗಳು ಬಹಿರಂಗವಾಗಿ ಕಂಡುಬಂದರೆ, ಹಲವು ಮುಖಗಳು ರಹಸ್ಯ ಕಾರ್ಯಾಚರಣೆ ನಡೆಸುತ್ತವೆ. ಪಾಕಿಸ್ತಾನದ ಐಎಸ್‌ಐನಂತೆ!

ಸಂಘ ಪರಿವಾರದ ಇಂತಹದೊಂದು ಸಂಸ್ಥೆಯೇ ‘ಮೈ ಹೋಮ್’. ಮತಾಂತರ ಮಾಡುವುದೇ ಈ ಸಂಸ್ಥೆಯ ಕೆಲಸ. ಸದ್ದುಗದ್ದಲವಿಲ್ಲದೆ, ಗುಪ್ತವಾಗಿ ತನ್ನ ಕೆಲಸದಲ್ಲಿ ನಿರತವಾಗಿದೆ ಮೈ ಹೋಮ್!

ಮೇಘಾಲಯ, ಮಣಿಪುರ ಮುಂತಾದ ಈಶಾನ್ಯ ರಾಜ್ಯಗಳ ಬುಡಕಟ್ಟು ಸಮುದಾಯಕ್ಕೆ ಸೇರಿದ ಹಾಗೂ ಕ್ರೈಸ್ತ ಮತಕ್ಕೆ ಸೇರಿದ ಬಡಕುಟುಂಬದ ಮಕ್ಕಳನ್ನು ಅಕ್ರಮವಾಗಿ ಕರ್ನಾಟಕಕ್ಕೆ ಕರೆತಂದು ಮತಾಂತರ ಮಾಡುವಲ್ಲಿ ನಿರತವಾಗಿದೆ ಮೈ ಹೋಮ್.

ಮೇಘಾಲಯ ರಾಜ್ಯದ 1600 ಕ್ಕೂ ಅಧಿಕ ವಿದ್ಯಾರ್ಥಿಗಳನ್ನು ಮೈ ಹೋಮ್ ಸಂಸ್ಥೆ ಕಾನೂನುಬಾಹಿರವಾಗಿ ಕರ್ನಾಟಕಕ್ಕೆ ಸಾಗಾಟ ಮಾಡಿಕೊಂಡು ತಂದಿರಿಸಿದೆ.

ಕರ್ನಾಟಕದ ವಿವಿಧ ಜಿಲ್ಲೆಗಳ ನಿರ್ದಿಷ್ಟ-ಅಂದರೆ ಸಂಘ ಪರಿವಾರದ ಪರವಾಗಿರುವ ಶಾಲೆಗಳಲ್ಲಿ ಅನಧಿಕೃತ ವಿದ್ಯಾರ್ಥಿಗಳನ್ನಾಗಿ ಈ ಮಕ್ಕಳನ್ನು ಸೇರ್ಪಡೆಗೊಳಿಸಲಾಗಿದೆ.

ಕನ್ನಡ ಬಾರದ ಮೇಘಾಲಯದ ವಿದ್ಯಾರ್ಥಿಗಳು ತರಗತಿಯಲ್ಲಿ ಕನ್ನಡದ ವಿದ್ಯಾರ್ಥಿಗಳೊಂದಿಗೆ ಮುಖ ಮುಖ ನೋಡುತ್ತಾ ಪಾಠ ಕೇಳಿಸಿಕೊಳ್ಳಬೇಕು.

ಶಾಲಾ ತರಗತಿ ಕಾಟಾಚಾರಕ್ಕೆ ಮಾತ್ರ. ಇವರಿಗೆ ಪ್ರತ್ಯೇಕವಾಗಿ ಸಂಘ ಪರಿವಾರದ ‘ಬುದ್ಧಿಜೀವಿ’ ಶಿಕ್ಷಕರೇ ಹಿಂದೂತ್ವದ ಪಾಠ ಮಾಡ್ತಾರೆ. ಭಜನೆ ಇತ್ಯಾದಿಗಳನ್ನು ಮಾಡಿಸುತ್ತಾ ವೈದಿಕ ಸಂಸ್ಕೃತಿಯನ್ನು ಹೇಳಿಕೊಡಲಾಗುತ್ತದೆ.

ಕೆಲವು ಶಾಲೆಗಳಲ್ಲಿ ತರಗತಿ ಕೋಣೆಯಲ್ಲಿ, ಇನ್ನು ಕೆಲವು ಕಡೆಗಳಲ್ಲಿ ಶಾಲಾ ಪರಿಸರದಲ್ಲಿರುವ ಸಣ್ಣದಾದ ಕೊಠಡಿಯಲ್ಲಿ ಮಕ್ಕಳ ವಾಸ್ತವ್ಯ.

ಒಂದು ಸಣ್ಣ ಕೋಳಿಗೂಡಿನಂತಹ ಕೋಣೆಯಲ್ಲಿ 15 ರಿಂದ 20 ಮಂದಿ ಹೆಣ್ಮಕ್ಕಳನ್ನು ಕೂಡಿಹಾಕಿ ಹಿಂಸಿಸಲಾಗುತ್ತಿದೆ.

ನಾಲ್ಕು ಸಾವಿರ ಕಿ.ಮೀ. ದೂರದ ಮೇಘಾಲಯದ ಅಪ್ರಾಪ್ತ ಪ್ರಾಯದ ಮಕ್ಕಳು ತಮ್ಮ ಹೆತ್ತವರನ್ನು ಬಿಟ್ಟು ಕರ್ನಾಟಕದ ವಿವಿಧ ಜಿಲ್ಲೆಗಳಲ್ಲಿ ತಮ್ಮ ಭಾಷೆ ಬಾರದ ಇತರ ವಿದ್ಯಾರ್ಥಿಗಳೊಂದಿಗೆ ಕಲಿಯುವ ಅನಿವಾರ್ಯ ಪರಿಸ್ಥಿತಿಯನ್ನು ಸಂಘ ಪರಿವಾರ ಸೃಷ್ಟಿಸಿದೆ. ಇದು ಮತಾಂತರಕ್ಕಾಗಿ!

ಸಂಘ ಪರಿವಾರದ ನಾಯಕ ಮತ್ತು ಕೊಲ್ಲೂರು ಶ್ರೀ ಮೂಕಾಂಬಿಕ ದೇವಸ್ಥಾನದ ಆಡಳಿತ ಮೊಕ್ತೇಸರ ಕೆ. ಕೃಷ್ಣಪ್ರಸಾದ್ ಅಡ್ಯಂತಾಯರ ಹಿಡಿತದಲ್ಲಿರುವ ಕೊಲ್ಲೂರು ಶಾಲೆಯಲ್ಲಿ ಮೇಘಾಲಯದ ವಿದ್ಯಾರ್ಥಿಗಳಿದ್ದಾರೆ.

ಒಂದು ಮತ್ತು ಎರಡನೇ ತರಗತಿಯಲ್ಲಿ ಕಲಿಯುತ್ತಿರುವ ಸುಮಾರು 27 ಮಕ್ಕಳು ಇಲ್ಲಿದ್ದಾರೆ. ಇವರ ಹೆತ್ತವರು ಯಾರು? ಇವರ ನಿರ್ದಿಷ್ಟ ವಯಸ್ಸೆಷ್ಟು? ಇತ್ಯಾದಿ ಯಾರಿಗೂ ತಿಳಿದಿಲ್ಲ, ಈ ಎಲ್ಲಾ ಮಕ್ಕಳನ್ನೂ ದೇವಸ್ಥಾನಕ್ಕೆ ಸೇರಿದ ಕೊಠಡಿಯೊಂದರಲ್ಲಿ ಕೂಡಿ ಹಾಕಲಾಗಿದೆ.

ಉಡುಪಿ ತಾಲ್ಲೂಕಿನ ಕೊಳಲಗಿರಿ ಸಮೀಪದ ತೆಂಕಬೆಟ್ಟು ಖಾಸಗಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿಯೂ ಮೇಘಾಲಯದ 17 ಮಕ್ಕಳು ಇದ್ದಾರೆ.

ಇವರೆಲ್ಲರೂ ಹೆಣ್ಮಕ್ಕಳಾಗಿದ್ದು ಒಂದು ಮತ್ತು ಎರಡನೇ ತರಗತಿಯವರಾಗಿದ್ದಾರೆ.

10x10 ಅಳತೆಯ ಕೋಣೆಯೊಂದರಲ್ಲಿ ಇವರ[...] ಗೃಹಬಂಧನದಲ್ಲಿ ಇರಿಸಲಾಗಿದೆ. ಚಂದ್ರಶೇಖರ ಶೆ[...] ಎಂಬವರು ಈ ಶಾಲೆಯ ಅಧ್ಯಕ್ಷರು. ಕಾಪು ಎಂಬಲ್ಲಿರು[...] ವಿದ್ಯಾನಿಕೇತನ್ ಪಬ್ಲಿಕ್ ಸ್ಕೂಲ್‌ನಲ್ಲೂ ಮಕ್ಕಳಿದ್ದಾರ[...] ಕೆ.ಪಿ. ಆಚಾರ್ಯ ಎಂಬವರಿಗೆ ಸೇರಿದ ಖಾಸಗಿ ಸ್ಕೂಲ[...] ಇದು. ಇಲ್ಲಿ ಕಲಿಯುತ್ತಿರುವ ಮಕ್ಕಳು ಹೈಸ್ಕೂಲ[...] ವಿದ್ಯಾರ್ಥಿಗಳು.

ಉಡುಪಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಇಂತ[...] 420 ಮಕ್ಕಳಿದ್ದಾರೆ. ಕಲ್ಲಡ್ಕದ ಶ್ರೀರಾಮ ಶಾಲೆಯಲ್ಲಿ[...] ಬೆಂಗಳೂರಿನ ಆದಿಚುಂಚನಗಿರಿ ಶಾಲೆ ಸಹಿತ ರಾಜ್ಯದ[...] ವಿವಿಧ ಶಾಲೆಗಳಲ್ಲಿ ಕಾನೂನುಬಾಹಿರವಾಗಿ ಮೇಘಾಲಯದ ಮಕ್ಕಳನ್ನು ಶಾಲೆಗೆ ಸೇರಿಸಲಾಗಿದೆ.

ಬಾಲನ್ಯಾಯ ಕಾಯಿದೆ (ಜೆಜೆ ಆಕ್ಟ್) ಪ್ರಕಾ[...] ಒಂದು ರಾಜ್ಯದಿಂದ ಇನ್ನೊಂದು ರಾಜ್ಯಕ್ಕೆ ಮಕ್ಕ[...] ವಲಸೆ ಕಾನೂನುಬಾಹಿರವಾಗುತ್ತದೆ.

ಹಾಗೊಂದು ಪಕ್ಷ ಮಕ್ಕಳ ವಲಸೆ ಪ್ರಕ್ರಿಯೆ[...] ನಡೆದರೂ, ಶಾಲಾ ಮುಖ್ಯ ಶಿಕ್ಷಕರಾಗಲಿ[...] ಪೋಷಕರಾಗಲಿ, ಇಂತಹ ಮಕ್ಕಳನ್ನು ರಾಜ್ಯಪಾಲರಿಂದ ನಿಯುಕ್ತಗೊಂಡ ಮಕ್ಕಳ ಕಲ್ಯಾಣ ಸಮಿತಿ (ಸಿಡಬ್ಲ್ಯುಸಿ[...] ಮುಂದೆ ಹಾಜರುಪಡಿಸಬೇಕಾಗುತ್ತದೆ.

ನೀತಿ-ನಿಯಮಾವಳಿ ಪಾಲಿಸದೆ ಇದ್ದಾಗ ಇಂತಹ ಪ್ರಕ್ರಿಯೆಯನ್ನು ಮಕ್ಕಳ ಅಕ್ರಮ ಸಾಗಾಟ ಎಂದೇ ಪರಿಗಣಿಸಲಾಗುತ್ತದೆ. ಸಂಘ ಪರಿವಾರಕ್ಕೆ ಸೇರಿದ ‘ಮೈ ಹೋಮ್’ ಎಂಬ ಮತಾಂತರವನ್ನೇ ಅಜೆಂಡಾ[...] ಮಾಡಿಕೊಂಡಿರುವ ಸಂಸ್ಥೆ ಮೇಘಾಲಯದಿಂದ 160[0] ಅಪ್ರಾಪ್ತ ಮಕ್ಕಳನ್ನು ಅಕ್ರಮವಾಗಿ ಕರ್ನಾಟಕಕ್ಕೆ ಸಾಗಾಟ ಮಾಡಿತಂದಿರುವುದು ಈಗಾಗಲೇ ಸರ್ಕಾರದ ಗಮನ[...] ಬಂದಿದೆ.

ಆದರೂ ಜಿಲ್ಲಾಡಳಿತಗಳಾಗಲಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯಾಗಲಿ ಈ ಬಗ್ಗೆ ತಲೆ[...] ಕೆಡಿಸದೆ ಇರುವುದು, ಈ ಕಾನೂನುಬಾಹಿರ ಮಕ್ಕಳ ಸಾಗಾಟ ಜಾಲದಲ್ಲಿ ರಾಜ್ಯದ ಬಿಜೆಪಿ ಸರ್ಕಾರವೂ ಶಾಮೀಲಾಗಿದೆ ಎನ್ನುವುದಕ್ಕೆ ಸಾಕ್ಷಿಯಾಗಿದೆ.

ಮತಾಂತರ, ಮತಾಂತರ ಎಂದು ಕ್ರೈಸ್ತರ ವಿರುದ್ಧ ಬೊಬ್ಬೆ ಹೊಡೆದು ಕಂಠ ಶೋಷಣೆ ಮಾಡುತ್ತಿರುವ ಕೋಮುವಾದಿ ಸಂಘ ಪರಿವಾರದ ಉಗ್ರರು ಹಾಗೂ ಭೈರಪ್ಪನಂತಹವರು ಮೈ ಹೋಮ್ ನಡೆಸುತ್ತಿರುವ ಮತಾಂತರದ ಬಗ್ಗೆ ಜಾಣಮೌನ ವಹಿಸಿದ್ದಾರೆ ಯಾಕೆ[...]

■ ಶ್ರೀರಾಮ ದಿವಾಣ

ಕರ್ನಾಟಕ ವಿ.ವಿ.: ಅದು ಸಿಂಡಿಕೇಟ್ ಅಲ್ಲ, ಹಿಂಡಿಕೇಟ್

ಕರ್ನಾಟಕ ವಿಶ್ವವಿದ್ಯಾಲಯದ ಸಿಂಡಿಕೇಟ್‌ಅನ್ನು ಹಿಂಡಿಕೇಟ್ ಎಂದು ಕರೆಯದೇ ಬೇರೆ ವಿಧಿಯಿಲ್ಲ, ಏಕೆಂದರೆ ಸಿಂಡಿಕೇಟ್‌ನ ಮಂದಿ ಹೊಟ್ಟೆಗೆ ಅನ್ನ ತಿನ್ನುತ್ತಿದ್ದಾರೋ ಅಥವಾ ಹಿಂಡಿ ತಿನ್ನುತ್ತಿದ್ದಾರೋ ಗೊತ್ತಿಲ್ಲ, ಆದರೆ, ಹಿಂಡಿ ತಿಂದವರು ಮಾಡುವ ಕೆಲಸವನ್ನಂತೂ ಮಾಡುತ್ತಿದ್ದಾರೆ.


ಒಂದು ಕಾಲಕ್ಕೆ, ಧಾರವಾಡದಲ್ಲಿರುವ ಕರ್ನಾಟಕ ವಿಶ್ವವಿದ್ಯಾಲಯ ನಮ್ಮ ರಾಜ್ಯದಲ್ಲಿದೆ ಎಂಬ ಅಭಿಮಾನ ಮೂಡುತ್ತಿತ್ತು, ಆದರೆ, ಈ ಹೊತ್ತು ಅದೆಷ್ಟು ಕುಲಗೆಟ್ಟು ಹೋಗಿದೆ ಎಂದರೆ ವಿ.ವಿಯ ಅಡಿಯಡಿಯಲ್ಲೂ ಕ್ರಿಮಿನಲ್ಲುಗಳು, ದಗಾಕೋರರು ತುಂಬಿಕೊಂಡಿದ್ದಾರೆ. ವಿಶ್ವವಿದ್ಯಾಲಯದ ಘನತೆಗೆ ಕುಂದು ತರುವಂತಹ ಪ್ರಕರಣಗಳು, ಹಗರಣಗಳು ಒಂದಾದ ಮೇಲೊಂದರಂತೆ ಬೆಳಕಿಗೆ ಬರುತ್ತಿವೆ. ಈಗ ಅವುಗಳ ಸಾಲಿಗೆ ಮತ್ತೊಂದು ಸೇರ್ಪಡೆಯಾಗಿದೆ.

ಕಳೆದ 32 ವರ್ಷಗಳ ಅವಧಿಯಲ್ಲಿ ಇದೇ ಮೊದಲ ಬಾರಿಗೆ ಕರ್ನಾಟಕ ವಿಶ್ವವಿದ್ಯಾಲಯದ ಅಪರಾಧಶಾಸ್ತ್ರ ಮತ್ತು ವಿಧಿವಿಜ್ಞಾನ ವಿಭಾಗದಲ್ಲಿ ಸ್ನಾತಕೋತ್ತರ ಉಪನ್ಯಾಸಕರ ಹುದ್ದೆಗಳ ಭರ್ತಿಗಾಗಿ ಅರ್ಜಿ ಕರೆಯಲಾಗಿತ್ತು, ದುರಂತ ಎಂದರೆ ಈ ಎರಡೂ ವಿಭಾಗಗಳಿಗೆ ಪಕ್ಕಾ ಕ್ರಿಮಿನಲ್ಲುಗಳನ್ನೇ ಆಯ್ಕೆ ಮಾಡಲಾಗಿದೆ. ಇದು ಹಿಂಡಿ ತಿಂದಿರುವ ಸಿಂಡಿಕೇಟ್‌ನ ಕೆಲಸ. ಇದರಿಂದಾಗಿ ಕ್ರಿಮಿನಾಲಜಿ ವಿಭಾಗವಂತೂ ಕ್ರಿಮಿನಲ್ಲುಗಳಿಂದಲೇ ತುಂಬಿಹೋದಂತಾಗಿದೆ.

ಯುಜಿಸಿ ನಿಯಮಾವಳಿಗಳ ಪ್ರಕಾರ ಪ್ರೊಫೆಸರ್/ಕೇಡರದಲ್ಲಿಯ ಉಪನ್ಯಾಸಕರನ್ನು ಸಂದರ್ಶನ ಮಾಡಬೇಕು, ಪರಿಣಿತರನ್ನಾಗಿ ನೇಮಿಸಬೇಕು. ಆದರೆ ಈ ಪದ್ಧತಿಯನ್ನು ಗಾಳಿಗೆ ತೂರಿದ ಆಯ್ಕೆ ಸಮಿತಿಯು ಡಾ.ಡಿ.ಜೆ.ನಾರಾಯಣಕರ, ಡಾ.ವೇಣುಮಾಧವನ್ ಜೆ.ಎಸ್. ಹಾಗೂ ಡಾ.ರಿಯೊಜ್ ಮನಗೂಳಿಯವರಂಥ ಕ್ರಿಮಿನಲ್ಲುಗಳನ್ನು ಅಪರಾಧಶಾಸ್ತ್ರ ವಿಭಾಗಕ್ಕೆ ಕಳೆದ ಡಿಸೆಂಬರ್ 14ರಂದು ಆಯ್ಕೆ ಸಮಿತಿಯು ಆಯ್ಕೆ ಮಾಡಿತ್ತು, ನಂತರ ಇದೇ ವರ್ಷದ ಫೆಬ್ರವರಿ 8ರಂದು ನಡೆದ ಸಿಂಡಿಕೇಟ್ ಸಭೆ ಡಾ.ನಾರಾಯಣಕರ ಮತ್ತು ಡಾ.ವೇಣುಮಾಧವ ಅವರ ಆಯ್ಕೆಯನ್ನು ಅನುಮೋದಿಸಿ ಮನಗೂಳಿಯ ಆಯ್ಕೆಯನ್ನು ಕಾಯ್ದಿರಿಸಿತು. ಅಲ್ಲದೇ ಮನಗೂಳಿಯನ್ನು ಅಪರಾಧಶಾಸ್ತ್ರ ಬೋಧನಾ ಸಹಾಯಕರೆಂಬ ಹುದ್ದೆಯಿಂದಲೂ ವಜಾಗೊಳಿಸಲಾಯಿತು.

ಹಾಗೆ ನೋಡಿದರೆ ಮನಗೂಳಿಗೂ ನಾರಾಯಣಕರಗೂ ಹೆಚ್ಚಿನ ವ್ಯತ್ಯಾಸವೇನಿಲ್ಲ, ಅಪರಾಧದಲ್ಲಿ ಒಂದು ಹೆಜ್ಜೆ ಮುಂದು ಎಂದೇ ಹೇಳಬಹುದಾದ ನಾರಾಯಣಕರ್ ವಿಶ್ವವಿದ್ಯಾಲಯಕ್ಕೆ ಮನಗೂಳಿಗಿಂತಲೂ ಹೆಚ್ಚಿನ ನಷ್ಟ ಉಂಟು ಮಾಡಿದ್ದಾನೆ. ಅಂತಹವನಿಗೆ ಕಾಯಂ ಉಪನ್ಯಾಸಕನಾಗಿ ಮುಂದುವರೆಯುವ ಅವಕಾಶ ಕೊಡಲಾಗಿದೆ. ಈ ಮೂಲಕ ಕಳೆದ ಮೂವತ್ತೆರಡು ವರ್ಷಗಳಿಂದ ಇದೇ ವಿಭಾಗದಲ್ಲಿ ಪ್ರಾಮಾಣಿಕವಾಗಿ ದುಡಿದ ಎಲ್ಲರ ತಲೆಯ ಮೇಲೆ ಚಪ್ಪಡಿ ಎಳೆದಿದೆ.

ಮನಗೂಳಿಯನ್ನು ಆಯ್ಕೆ ಮಾಡದಿರುವುದಕ್ಕೆ ಅನೇಕ ಕಾರಣಗಳನ್ನು ಸಿಂಡಿಕೇಟ್ ಕೊಟ್ಟಿದೆ. ಹಾಗಿದ್ದಮೇಲೆ, ನಾರಾಯಣಕರ್‌ನನ್ನು ಏಕೆ ಆಯ್ಕೆ ಮಾಡಲಾಯಿತು? ಅವನೆಷ್ಟು ಸಾಚಾ? ಈ ಪ್ರಶ್ನೆಗಳಿಗೆ ಸಿಂಡಿಕೇಟ್ ಹತ್ತಿರ ಉತ್ತರಗಳಿಲ್ಲ.



ಈ ನಾರಾಯಣಕರ್‌ನ ಅಕೆಡೆಮಿಕ್ ರೆಕಾರ್ಡ್ ನೋಡಿ. ಬಿ.ಎನಲ್ಲಿ ಶೇ.64, ಎಂ.ಎ.ನಲ್ಲಿ ಶೇ.60 ಫೆಲೋಶಿಪ್ ಪಡೆದಿದ್ದಾನೆ. ದಲಿತ ಪಿ.ಜಿ. ವಿದ್ಯಾರ್ಥಿಗಳಿಗೆ ಅತಿಥಿ ಉಪನ್ಯಾಸಕನಾಗಿ ಮೂರು ವರ್ಷ ಕೆಲಸ ಮಾಡಿದ್ದಾನೆ. ಆದರೆ, ಈ ಅವಧಿಯಲ್ಲಿ ಈತ ಪಾಠ ಮಾಡಿದ್ದಕ್ಕಿಂತ ಅವ್ಯವಹಾರಗಳನ್ನು ಮಾಡಿದ್ದೇ ಹೆಚ್ಚು ಎಂದು ಇಡೀ ವಿಶ್ವವಿದ್ಯಾಲಯದ ಕ್ಯಾಂಪಸ್ ಆಡಿಕೊಳ್ಳುತ್ತಿದೆ. ಆಗಸ್ಟ್ 2007ರಲ್ಲಿ ಅತಿಥಿ ಉಪನ್ಯಾಸಕನಾಗಿದ್ದುಕೊಂಡೇ ಓರಿಯೆಂಟೇಶನ್/ರಿಫ್ರೆಶರ್ ತರಬೇತಿಯಲ್ಲಿ ಪಾಲ್ಗೊಂಡು ಅದರಲ್ಲಿಯ ಎಲ್ಲಾ ಸವಲತ್ತುಗಳನ್ನು ಪಡೆದಿದ್ದಾನಲ್ಲದೇ ಅದೇ ಅವಧಿಯಲ್ಲಿ ಅತಿಥಿ ಉಪನ್ಯಾಸಕನಾಗಿ ಸೇವೆ ಸಲ್ಲಿಸಿದ್ದೇನೆ ಎಂದು ಆ ತಿಂಗಳ ಸಂಬಳವನ್ನೂ ಪಡೆದಿದ್ದ.

ಕಳೆದ ವರ್ಷ ನವೆಂಬರ್ 27, 28ರಂದು ಎಂ.ಎ. ವಿದ್ಯಾರ್ಥಿಗಳನ್ನು ಕಟ್ಟಿಕೊಂಡು ಗೋವಾಕ್ಕೆ ಮೋಜಿನ ಪ್ರವಾಸ ಕೈಗೊಂಡಿದ್ದರ ವಿರುದ್ಧ ದೊಡ್ಡ ಗುಲ್ಲೇ ವಿ.ವಿ.ಆವರಣದಲ್ಲಿ ಎದ್ದಿತ್ತು. ಕೊನೆಗೆ ನಾರಾಯಣಕರ್ ವಿರುದ್ಧ ಕ್ರಮ ಕೈಗೊಳ್ಳುವಂತೆ ಡಾ.ಎಸ್.ಸಿ.ನಾಗೂರ್ ಡೀನ್‌ಗೆ ಪತ್ರ ಬರೆದು ರಾದ್ಧಾಂತ ಮಾಡಿದ್ದರು. ಇದಲ್ಲದೇ ಕಾಯಂ ಉಪನ್ಯಾಸಕರ ಹುದ್ದೆಗೆ ಅರ್ಜಿ ಸಲ್ಲಿಸುವಾಗ 42 ರಾಷ್ಟ್ರೀಯ ಗೋಷ್ಠಿಗಳಲ್ಲಿ ಭಾಗವಹಿಸಿದ್ದೇನೆಂ[...] ಸುಳ್ಳು ದಾಖಲೆ ಸೃಷ್ಟಿಸಿದ್ದಾನೆ.

ಈತ ಕೇವಲ ವಿಶ್ವವಿದ್ಯಾಲಯಕ್ಕೆ ಮಾತ್ರವ[...] ಭಾರತೀಯ ರೇಲ್ವೆಗೂ ಮೋಸ ಮಾಡಿರುವ ಇತಿಹಾಸ[...] ಸಂಶೋಧನಾ ವಿದ್ಯಾರ್ಥಿಗಳ ಹೆಸರಿನಲ್ಲಿ ನಕ[...] ದಾಖಲೆಗಳನ್ನು ಸೃಷ್ಟಿಸಿ ರೇಲ್ವೆಯಲ್ಲಿ ಪ್ರವಾಸ ಮಾಡಿದ[...] ಕೂಡ ಎಲ್ಲರಿಗೂ ಗೊತ್ತಿರುವ ವಿಚಾ[...] ನಕಲಿ ದಾಖಲೆಗಳ ಆಧಾರದಲ್ಲಿ 18.0[...] 2007ರಲ್ಲಿ ಧಾರವಾಡದಿಂದ ಕಲ್ಕತಾ[...] ಹೌರಾ ಎಕ್ಸ್‌ಪ್ರೆಸ್‌ನಲ್ಲಿ ಪ್ರಯಾಣಿಸಿ[...] (ರಿಯಾಯತಿ ಅರ್ಜಿ ನಂ. 4772[...] ಇದಕ್ಕೊಂದು ಸಣ್ಣ ಉದಾಹರಣೆಯ[...] ಇಂತಹ ಕ್ರಿಮಿನಲ್ಲನ್ನು ಕ್ರಿಮಿನಾಲ[...] ವಿಭಾಗಕ್ಕೆ ಕಾಯಂ ಉಪನ್ಯಾಸಕನನ್ನಾಗಿ ಆಯ್ಕೆ ಮಾಡಲಾಗಿದೆ.

ಆಯ್ಕೆಯಾಗಿರುವ ಇನ್ನೊಬ್ಬ ಕ್ರಿಮಿನ[...] ವೇಣು ಮಾಧವನ್‌ನ ಟ್ರ್ಯಾಕ್ ರೆಕಾರ್ಡ್ ನೋಡಿ. ಸಂಶೋಧನಾ ವಿದ್ಯಾರ್ಥಿಯಾಗಿದ್ದಾಗಲೇ ಈತ ಮಹಿಳಾ ಅಧ್ಯಯನ [...] ವಿಭಾಗದಲ್ಲಿ ಅರೆಕಾಲಿಕ ಉಪನ್ಯಾಸಕನಾಗಿಯೂ ಸೇ[...] ಸಲ್ಲಿಸಿದ ಮಹಾಶಯನೀತ. ಅಂದರೆ, ಒಂದೆ[...] ಸಂಶೋಧನಾ ವಿದ್ಯಾರ್ಥಿಗಳಿಗೆ ನೀಡುವ ಶಿಷ್ಯ ವೇತನಗಳನ್ನೂ ಬಾಚಿಕೊಂಡ ಮತ್ತೊಂದೆಡೆ ಅರೆಕಾಲಿಕ ಉಪನ್ಯಾಸಕರಿಗೆ ಸಿಗುವ ಪಗಾರವನ್ನೂ ದೋಚಿಕೊಂಡ. ಕೊನೆಗೆ ಇದು ಬಯಲಿಗೆ ಬಂದಮೇಲೆ ವಿ.ವಿ.ಯ ಹಣಕಾಸು ವಿಭಾಗ ಇವನಿಗೆ ನೋಟೀಸ್ ಜಾರಿ ಮಾಡಿದ್ದೂ ಆಯಿತು. ಇಂತಹವನನ್ನೂ ಈಗ ಸಿಂಡಿಕೇಟ್ ಕಾಯಂ ಉಪನ್ಯಾಸಕನಾಗಿ ಆಯ್ಕೆ ಮಾಡಿದೆ.

ಈ ಇಬ್ಬರು ಮಹಾಶಯರನ್ನು ಕಾಯಂಗೊಳಿಸುವುದರಲ್ಲಿ ಸಿಂಡಿಕೇಟ್ ತಿಂದಿರುವ ಹಿಂಡಿ ಎಷ್ಟು ಎಂಬುದು ಬಯಲಿಗೆ ಬರಬೇಕಿರುವ ಸತ್ಯ.

■ ಹುಬ್ಬಳ್ಳಿಯಾಂ[...]






ನ ಮನ್ನಿಕೇರಿ

ಅಥಣಿ: ಬಿಇಓ ಗಜಾನನನಿಗೆ ಮೂಗುದಾರ ಹಾಕೋರ್‍ಯಾರು?

ಥಣಿಗೆ ಬಡಿದಿರೋ ಗರ ಸದ್ಯಕ್ಕೆ ತೊಲಗುವ ಲಕ್ಷಣ ಕಾಣುತ್ತಿಲ್ಲ. ರಣರ ನಾಡಾಗಿದ್ದ ಮುರುಘೇಂದ್ರ ಶಿವಯೋಗಿಗಳಂತಹ ಯೋಗಿಗಳನ್ನು ಕೊಟ್ಟ ಅಥಣಿ ಶ್ರೀಕ್ಷೇತ್ರ ಈ ದಿನ ಪುಂಡುಪೋಕರಿಗಳ, ಭ್ರಷ್ಟಾಚಾರಿಗಳ ರಾಗಿ ಹೆಸರು ಮಾಡುತ್ತಿರುವುದು ದುರಂತ.

ಅಥಣಿಯಲ್ಲಿರುವ ಭ್ರಷ್ಟಾಚಾರಿಗಳ ಪಟ್ಟಿಯೊಂದನ್ನು ಮಾಡಿದ್ದರೆ ಅದರ ನದಲ್ಲಿ ನಿಲ್ಲುವ ಅರ್ಹತೆ ಅಥಣಿಯ ಬಿಇಓ ಗಜಾನನ ಮನ್ನಿಕೇರಿಗೆ ಇದೆ ಎಂದರೆ ತಪ್ಪಾಗುವುದಿಲ್ಲ. ಏಕೆಂದರೆ, ಮೇಯುವ ವಿಚಾರದಲ್ಲಿ ಹಿಂದಿದ್ದ ಬಿಇಓಗಳನ್ನೆಲ್ಲ ಮೀರಿಸಿಬಿಟ್ಟಿದ್ದಾನೆ. ಸುಜ್ಞಾನ, ಸತ್‌ಚಾರಿತ್ರ್ಯ ಮೌಲ್ಯಗಳನ್ನು ತನ್ನ ಸ್ವಂತ ಜೀವನದಲ್ಲಿ ಆಚರಿಸುತ್ತಾ ಶಿಕ್ಷಕರಿಗೆ ಮತ್ತು ಗೆ ಆದರ್ಶವಾಗಿರಬೇಕಾಗಿದ್ದ ಬಿಇಓ ಗಜಾನನ ಖುದ್ದು ಭ್ರಷ್ಟಾಚಾರದಲ್ಲಿ ತನಕ ಮುಳುಗಿಹೋಗಿದ್ದಾನೆ. ತನ್ನ ಮೇಯುವಿಕೆ ಸಾಂಗವಾಗಿ ಿಸಲೆಂದೇ ತನ್ನ ಹಿಂದೆ ಭ್ರಷ್ಟಾಚಾರಿಗಳ ದೊಡ್ಡ ಹಿಂಡನ್ನೇ ಕಟ್ಟಿಕೊಂಡಿದ್ದಾನೆ.



ಗಜಾನನ ಮನ್ನಿಕೇರಿ ತನ್ನ ಕೆಳಗಿನ ಕ್ಷೇತ್ರ ಸಂಪನ್ಮೂಲ ಸಂಯೋಜಕ ಮತ್ತು ಸಮೂಹ ಸಂಪನ್ಮೂಲ ಸಂಯೋಜಕರನ್ನು ಕಟ್ಟಿಕೊಂಡು ಸಾಮೂಹಿಕ ಹಣ ನುಂಗುವ ದಂಧೆಯಲ್ಲಿ ತೊಡಗಿರುವುದು ಯಾರಿಗೂ ತಿಳಿಯದ ವಿಚಾರವೇನಲ್ಲ. ಇವರ ಟಾರ್ಚರ್ ತಾಳಲಾರದೆ ಅಷ್ಟೋ ಇಷ್ಟೋ ದುಡ್ಡು ಚೆಲ್ಲಿಯಾದರೂ ಸರಿ ಮೊದಲು ಇಲ್ಲಿಂದ ಹೊರಟು ಹೋಗಬೇಕು ಎಂದು ಅದೆಷ್ಟೋ ಶಿಕ್ಷಕರು ಟ್ರಾನ್ಸ್ ಮನವಿ ಹಿಡಿದುಕೊಂಡು ನಿಂತಿದ್ದಾರೆಂದರೆ ಪರಿಸ್ಥಿತಿ ಹೇಗಿರಬಹುದು ಯೋಚಿಸಿ.

ಜಾನನ ಮನ್ನಿಕೇರಿ ಕಮಾಯಿಗಾಗಿ ಕಂಡುಕೊಂಡ ಮೊದಲ ಮಾರ್ಗ ೆ ಶಿಕ್ಷಕರ ಟ್ರಾನ್ಸ್‌ಫರ್ ದಂಧೆ. ಟ್ರಾನ್ಸ್‌ಫರ್‌ಗಾಗಿ ಅರ್ಜಿ ಹಿಡಿದುಕೊಂಡು ದ ಶಿಕ್ಷಕರನ್ನು ಸುಲಿಯುವುದಕ್ಕಾಗಿಯೇ ಈ ಗಜಾನನ ಉಪಾಧ್ಯ ಎಂಬ ಕ್ಲರ್ಕ್ ಒಬ್ಬನನ್ನು ನೇಮಿಸಿದ್ದಾನೆ. ಈ ಉಪಾಧ್ಯ ಒಬ್ಬೊಬ್ಬ ಶಿಕ್ಷಕನಿಂದ ೆಂದರೂ 25 ಸಾವಿರ ಕಿತ್ತುಕೊಳ್ಳುತ್ತಾನೆ. ಆತ ಕೇಳಿದಷ್ಟು ದುಡ್ಡು ದ ಶಿಕ್ಷಕರು ಟ್ರಾನ್ಸ್‌ಫರ್ ಆಗೋದಿರ್‍ಲಿ ಆಮೇಲೆ ಡ್ಯೂಟಿ ಮಾಡೋಕೂ ಡಬೇಕಾದ ಪರಿಸ್ಥಿತಿ ನಿರ್ಮಾಣ ಮಾಡುತ್ತಾನೆ. ಶಿಕ್ಷಕರು ಪೂರ್ತಿ ಕೊಟ್ಟ ಮೇಲೆ ಗಜಾನನ ಮನ್ನಿಕೇರಿಯ ಪಾಲನ್ನು ಕೊಟ್ಟು ಉಳಿದದ್ದನ್ನು ಬಗಿಳಿಸಿಕೊಂಡು ಟ್ರಾನ್ಸ್‌ಫರ್ ಫೈಲನ್ನು ಮೂವ್ ಮಾಡ್ತಾನೆ. ಟ್ರಾನ್ಸ್‌ಫರ್ ್ ಕೈಗೆ ಸಿಕ್ಕಿದ್ದೇ ತಡ, ಶಿಕ್ಷಕರು ಕೆಟ್ಟೆನೋ ಸತ್ತೆನೋ ಎಂದು ೋಗುತ್ತಾರೆ. ಮುಂದೆಂದೂ ಅವರು ಅಥಣಿ ಕಡೆ ತಲೆ ಇಟ್ಟು ಕೂಡ ುವುದಿಲ್ಲ ಬಿಡಿ.



ಲಕ್ಷ್ಮಣ್

ಜಾನನ ಮನ್ನಿಕೇರಿ ಎಷ್ಟೊಂದು ಚಾಲಾಕಿ ರೆ ಈತ ಎಂದಿಗೂ ಶಿಕ್ಷಕರಿಂದ ನೇರವಾಗಿ ಾಗಿ ಡಿಮ್ಯಾಂಡು ಮಾಡುವುದಿಲ್ಲ, ಅದನ್ನೆಲ್ಲಾ ಧ್ಯಗೆ ವಹಿಸಿದ್ದಾನೆ. ಶಿಕ್ಷಕರಿಂದ ಉಪಾಧ್ಯ ಿಂಡ ದುಡ್ಡು ಅವರಿಬ್ಬರ ಮಧ್ಯ ಹಂಚಿಕೆಯಾಗು ರಾತ್ರಿ ಬಾರ್‌ನಲ್ಲಿಯೇ. ಹಾಗೆ ನೋಡಿದರೆ ್ನನ ಸುಲಿಯುವಿಕೆ ನಿನ್ನೆ ಮೊನ್ನೆ ಪ್ರಾರಂಭವಾದು ಈ ಹಿಂದಿನ ಬಿಇಓ ಚೌಧರಿ ಮತ್ತು ್ಯ ಇಬ್ಬರೂ ಲಂಚ ಸ್ವೀಕರಿಸುವಾಗಲೇ ರೆಡ್ ಹ್ಯಾಂಡಾಗಿ ಸಿಕ್ಕಿಬಿದ್ದಿದ್ದರು. ಗಿ ಸಸ್ಪೆಂಡ್ ಕೂಡ ಆಗಿದ್ದರು. ಆದರಲ್ಲೂ ಉಪಾಧ್ಯನಂತೂ ನಾಲ್ಕು ಸಸ್ಪೆಂಡ್ ಆಗಿ ದಾಖಲೆ ನಿರ್ಮಿಸಿದ್ದಾನೆ.

ನ್ನು ಕಮಾಯಿಗಾಗಿ ಮನ್ನಿಕೇರಿ ಕಂಡುಕೊಂಡ ಎರಡನೇ ಮಾರ್ಗ ಿ ಇನ್ಶೂರೆನ್ಸ್ ಕಂಪನಿಗಳೊಂದಿಗಿನ ಅನಧಿಕೃತ ಕಾಂಟ್ರಾಕ್ಟ್. ಅದರಲ್ಲೂ ಷವಾಗಿ ಬಜಾಜ್ ಅಲಯನ್ಸ್‌ನಂತಹ ಇನ್ಶೂರೆನ್ಸ್ ಕಂಪನಿಗಳೊಂದಿಗೆ ್ಪಂದ ಮಾಡಿಕೊಂಡಿರುವ ಈತ ತನ್ನ ಅಡಿಯಲ್ಲಿ ಬರುವ ಶಿಕ್ಷಕರಿಗೆ ಪೂರ್ವಕವಾಗಿ ಇನ್ಶೂರೆನ್ಸ್ ಪಾಲಿಸಿಗಳನ್ನು ಹೇರುತ್ತಾನೆ. ಈ ಕೆಲಸಕ್ಕೆ ಸಂಪನ್ಮೂಲ ಸಂಯೋಜಕರು ಮತ್ತು ಸಮೂಹ ಸಂಪನ್ಮೂಲ ಿಗಳನ್ನು ಬಿಟ್ಟಿದ್ದಾನೆ. ಕೆಲವೊಮ್ಮೆ ಈತ ಕ್ಷೇತ್ರ ಶಿಕ್ಷಣಾಧಿಕಾರಿಯೋ ಬಜಾಜ್ ಅಲಯನ್ಸ್ ಕಂಪೆನಿಯ ಏಜೆಂಟನೋ ಎಂಬುದೇ ಾಗುವುದಿಲ್ಲ.

ಷ್ಟೆಲ್ಲಾ ಘನಂದಾರಿ ಕೆಲಸಗಳನ್ನು ಮಾಡಿರುವ ಗಜಾನನ ಮನ್ನಿಕೇರಿಯನ್ನು ಇಲಾಖೆ ಇನ್ನೂ ಬಿಟ್ಟುಕೊಂಡಿದೆ ಎಂದರೆ ಸಚಿವ ಲಕ್ಷ್ಮಣ್ ಸವದಿಗೆ ಉತ್ತಮ ಪ್ರಶಸ್ತಿ ಕೊಡಲೇಬೇಕು; ಇಲ್ಲಿಯತನಕವಾದರೂ ಶಿಕ್ಷಕರೆಲ್ಲಾ ಬಟ್ಟೆ ಬಿಚ್ಚಿ ನಡುಬೀದಿಯಲ್ಲಿ ಮೆರವಣಿಗೆ ಮಾಡಿಲ್ಲ ಎಂದರೆ [illegible] ಮೆಚ್ಚಲೇಬೇಕು. ಎಲ್ಲಿಯತನಕ ಇಂತಹ ಕೈಲಾಗದ [illegible] ಎಲ್ಲಿಯತನಕ ಲಕ್ಷ್ಮಣ್ [illegible] ಎಲ್ಲಿಯತನಕ ಕಾಗೇರಿಯಂತ ಭ್ರಷ್ಟಾತಿಭ್ರಷ್ಟರು ಶಿಕ್ಷಣ [illegible] ಅಲ್ಲಿಯತನಕ ಗಜಾನನ ಮನ್ನಿಕೇರಿಯಂತಹ [illegible] ಶಿಕ್ಷಕರ ರಕ್ತ ಹೀರುತ್ತಲೇ ಇರುತ್ತಾನೆ ಬಿಡಿ. ಅಥಣಿಯ ಶಿಕ್ಷಣ [illegible] ಆ ಭಗವಂತನೂ ಕಾಪಾಡಲಾರ. ■ ಮಧುಬಾಲಾ

ದಿಕ್ಕು ತಪ್ಪಿರುವ ಗುಲಬರ್ಗಾ ಡೆಮಾಲಿಶ್ ಕಾರ್ಯಾಚರಣೆ



ಜನಸಾಮಾನ್ಯನ 'ದುರಾಸೆ'ಗೆ 'ಅಡ್ನಾಡಿ ಅಧಿಕಾರಿ'ಗಳ ಒಪ್ಪಿಗೆ ದೊರೆತರೆ ಮುಂದೊಂದು ದಿನ ಯಾವ ನೋವು ಅನುಭವಿಸಬೇಕೋ ಅದನ್ನು ಇಂದು ಗುಲಬರ್ಗಾ ನಗರದ ಜನ ಅನುಭವಿಸುವಂತಾಗಿದೆ. ಎರಡು ತಿಂಗಳಿಗಿಂತಲೂ ಹೆಚ್ಚಿನ ಅವಧಿಯಲ್ಲಿ ಶುರುವಾಗಿರುವ ರಸ್ತೆ ಅಗಲೀಕರಣ ಪ್ರಕ್ರಿಯೆಗೆ ಇನ್ನೂ ಮುಕ್ತಿ ದೊರಕಿಲ್ಲ. ಈಗ ನೀವು ಗುಲಬರ್ಗಾದ ಮುಖ್ಯ ರಸ್ತೆ ಗುಂಟ ನಡೆದುಹೋಗುತ್ತಿದ್ದರೆ ಬರೀ ಕಲ್ಲು ಮಣ್ಣಿನ ರಾಶಿಗಳೆ ಇದಿರಾಗುತ್ತವೆ. ಸ್ವಲ್ಪ ನಿಂತರೆ ಮಣ್ಣಿನ ಹುಡಿ ನಿಮ್ಮ ಮುಖ- ಮೈಮೆತ್ತಿಕೊಳ್ಳುತ್ತದೆ. ಜೆ.ಸಿ.ಬಿ. ಯಂತ್ರಗಳ ರುದ್ರನರ್ತನ ನಿಮ್ಮ ಕಿವಿಗೆ ಅಪ್ಪಳಿಸಿ ಕರ್ಕಶಗೊಳಿಸುತ್ತದೆ.

ಬಹುವರ್ಷಗಳ ಕನಸಾದ ಗುಲಬರ್ಗಾ ನಗರದ ಮಾಸ್ಟರ್ ಪ್ಲಾನ್ ಕಾರ್ಯಾಚರಣೆ ಆರಂಭದಲ್ಲಿ ಶುರುವಾದಾಗ ವಿಘ್ನಗಳೆ ಹೆಚ್ಚಾಗಿದ್ದವು. ಹೈದ್ರಾಬಾದ್ 'ಕರ್ನಾಟಕ ವಾಣಿಜ್ಯ ಮಂಡಳಿ'ಯ ಉಮಾಕಾಂತ ನಿಗ್ಗುಡಗಿ ಅವರ ಮೂಲಕ ಮಾರ್ಕೆಟಿನ ಬಹುತೇಕ ವ್ಯಾಪಾರಸ್ಥರು ಗುಡುಗಿದ್ದರು. ಕೆಲವರು ಅದಾಗಲೆ ಕೋರ್ಟ ಕಡೆಯಿಂದ ತಡೆಯಾಜ್ಞೆಯನ್ನು ತಂದುಬಿಟ್ಟಿದ್ದರು. ಆದರೆ ಡೆಮಾಲಿಶ್ ಖ್ಯಾತಿಯ ಹರ್ಷ ಗುಪ್ತ ಎಂಬ (ಹಾಲಿ ಬೀದರ ಜಿಲ್ಲೆಯ





ಜಿಲ್ಲಾಧಿಕಾರಿ) ಗುಲಬರ್ಗಾಕ್ಕೆ ಯಾವಾಗ ಪ್ರಭಾರಿ ವಿಭಾಗಾಧಿಕಾರಿಯಾಗಿ ಅಧಿಕಾರ ವಹಿಸಿಕೊಂಡರೋ ಆವಾಗ ಅವರೆಲ್ಲರ ಧ್ವನಿ ಉಸಿರಿಲ್ಲದೆ ಚೀರು ಧ್ವನಿಯಾಗಿಹೋಯ್ತು. ಏಕೆಂದರೆ ಹರ್ಷ ಗುಪ್ತನ ಡೆಮಾಲಿಶ್‌ಗೆ ಬೀದರ್ ನಗರ ಹಿಂದೆಂದೂ ಕಂಡರಿಯದ ಅಗಲೀಕರಣಕ್ಕೆ ತುತ್ತಾಗಿದ್ದವು. ಅಲ್ಲಿನ ಸಂಸದ ನರಸಿಂಗರಾವ್ ಸೂರ್ಯವಂಶಿ ಹಾಗೂ ಗುರುಪಾದಪ್ಪ ನಾಗಮಾರಪಳ್ಳಿ, ಬಂಡೆಪ್ಪ ಕಾಶಂಪುರ ಮುಂತಾದ ಘಟಾನುಘಟಿ ರಾಜಕೀಯ ನೇತಾರರ ಮನೆ-ಕಾಂಪ್ಲೆಕ್ಸ್‌ಗಳನ್ನು ನೆಲಸಮ ಮಾಡಿದ ಖ್ಯಾತಿ ಆದಾಗಲೆ ಗುಲಬರ್ಗಾದ ಜನರಿಗೆ ತಲುಪಿತ್ತು.



ಚಂದ್ರಶೇಖರ್

ಹಾಗೆ ನೋಡಿದರೆ ಗುಲಬರ್ಗಾ ನಗರಕ್ಕೆ ಎಂದೋ 'ಮಾಸ್ಟರ್ ಪ್ಲಾನ್' ಅಪ್ಲೈ ಆಗಬೇಕಿತ್ತು. ಆದರೆ ಇಲ್ಲಿನ ಕಮರುಲ್ ಇಸ್ಲಾಂ ಎಂಬ ನಗರೀಕರಣ ವಿರೋಧಿ ರಾಜಕೀಯ ನೇತಾರರು ಬಹಳಷ್ಟು ಭೂಕಬಳಿಕೆ ಮಾಡಿಕೊಂಡಿದ್ದರು. ಅಲ್ಲದೆ ಮಹಾನಗರ ಪಾಲಿಕೆಯ ಇಂಜಿನಿಯರ್‌ಗಳು, ಇಲ್ಲಿನ ಅಧಿಕಾರಿಗಳು, ಜೊತೆಗೆ ಇವರೆಲ್ಲರೊಂದಿಗೆ ಸಖ್ಯಹೊಂದಿರುವ ನಾಗರಿಕರೂ ಸರಕಾರದ ಜಾಗವನ್ನು ಯಾವ ಎಗ್ಗಿಲ್ಲದೆ ಬಳಸಿಕೊಂಡು ಮನೆ, ಸಂಕೀರ್ಣಗಳನ್ನು (ಪಟೇಲ ಚೌಕ್‌ನಿಂದ ಬಸ್ ಸ್ಟ್ಯಾಂಡಿಗೆ ಹೋಗುವ ದಾರಿಯಲ್ಲಿರುವ ನೋಬೆಲ್ಲ ಶಾಲೆಯ ಕಟ್ಟಡ) ಕಟ್ಟಿಕೊಂಡಿದ್ದರು. ಇವರಿಗೆಲ್ಲ ಗುಲಬರ್ಗಾದ ರಸ್ತೆಗಳು ಅಗಲಗೊಳ್ಳುವುದು ಬೇಕಿರಲೇ ಇಲ್ಲ.

ಬೀದರ್-ಬೆಂಗಳೂರಿನ ರಾಜ್ಯದ ಹೆದ್ದಾರಿ ರಸ್ತೆಯಾಗಿದ್ದರೂ ಅದು ಗುಲಬರ್ಗಾ ನಗರಕ್ಕೆ ಸಮೀಪಿಸುತ್ತಲೆ ಅದು 'ಕಿಷ್ಕಿಂಧೆ'ಯಾಗಿ ಹೋಗುತ್ತಿತ್ತು. ಬೀದರನಿಂದ ಗುಲಬರ್ಗಾದ ಹೊರವಲಯಕ್ಕೆ ತಲುಪಲು ಕೇವಲ ಎರಡು ಗಂಟೆ ಹಿಡಿದರೆ ಹುಮ್ನಾಬಾದ್ ರಸ್ತೆಯಿಂದ ಗುಲಬರ್ಗಾದ ಮುಖ್ಯ ಬಸ್ ಸ್ಟ್ಯಾಂಡಿಗೆ ಮುಟ್ಟಲು ಕನಿಷ್ಠ ನಲವತ್ತೈದು ನಿಮಿಷಕ್ಕೂ ಹೆಚ್ಚು ಸಮಯ ತಗುಲುತ್ತದೆ. ಇದಕ್ಕೆಲ್ಲ ಮುಖ್ಯ ಕಾರಣ ಟ್ರಾಫಿಕ್ ಅನ್ನುವುದಕ್ಕಿಂತ ಇಕ್ಕಟ್ಟಾದ ರಸ್ತೆಗಳು, ಒತ್ತುವರಿಯಾದ ರಸ್ತೆಗಳು ಎಂದು ಹೇಳದೆ ವಿಧಿಯಿಲ್ಲವಾಗಿದೆ. ಇಂಥ ಇಕ್ಕಟ್ಟಿನ ರಸ್ತೆ ಇಟ್ಟುಕೊಂಡೂ ಅದಕ್ಕೆ ಅಗಲೀಕರಣವೇ ಬೇಡ ಎಂದು ಹಠ ಹಿಡಿದಿರುವ ಜನಕ್ಕೆ 'ಪ್ರಗತಿ' ಎಂಬ ಶಬ್ದದ ಅರ್ಥವೂ ಗೊತ್ತಿಲ್ಲದಿರುವುದು ಎಲ್ಲರಿಗೆ ಸೋಜಿಗವನ್ನುಂಟುಮಾಡಿದೆ.

ಈ ನಡುವೆ ಯಡ್ಡಿ ಸರ್ಕಾರದ ಅಡಾದಿಡ್ಡಿ ವರ್ಗಾವಣೆಯಿಂದ ಪ್ರಭಾರಿ ವಿಭಾಗಾಧಿಕಾರಿ ಹರ್ಷ ಗುಪ್ತ ಒಳಗಾದರು. ಇದರಿಂದ ಹೈದ್ರಾಬಾದ್ ಕರ್ನಾಟಕ ಚೇಂಬರ್ ಆಫ್ ಕಾಮರ್ಸ್‌ನ ಚಟುವಟಿಕೆಗಳು ಮತ್ತಷ್ಟು ಹೆಚ್ಚಾದವು. ರಸ್ತೆ ಅಗಲೀಕರಣ ಪ್ರಕ್ರಿಯೆ ನಿಂತೇಹೋಯಿತು ಎಂಬಂತಾಯಿತು. ಆದರೆ ಎಸ್.ಕೆ.ಕಾಂತಾ ಅವರಂಥ ಹಾಗೂ ಹಲವಾರು ಪ್ರಜ್ಞಾವಂತ ಸಂಘಟನೆಗಳು ಬೀದಿಗೆ ಇಳಿದು ಗುಲಬರ್ಗಾದ ರಸ್ತೆ ಅಗಲೀಕರಣವನ್ನು ಸಮರ್ಥಿಸಿ ಸರಕಾರಕ್ಕೆ ಚುರುಕು ಮುಟ್ಟಿಸಿದವು. ಜಿಲ್ಲಾ ಉಸ್ತುವಾರಿ ಸಚಿವ ಲಕ್ಷ್ಮಣ ಸವದಿ ನಗರಕ್ಕೆ ಬಂದಾಗಲೆಲ್ಲ ಘೇರಾವು ಹಾಕಿ ಜನ ಪ್ರತಿಭಟಿಸದೆ ಹೋಗಿದ್ದರೆ ಬಹುಶಃ ರಸ್ತೆ ಅಗಲೀಕರಣ ಮತ್ತೆ ಮರೀಚಿಕೆಯಾಗುತ್ತಿತ್ತು.

ಇದೇ ಸಂದರ್ಭದಲ್ಲಿ ಗುಲಬರ್ಗಾದ ಜಿಲ್ಲಾಧಿಕಾರಿ ಸತ್ಯಮೂರ್ತಿ, ಟ್ರೇನಿಂಗ್‌ಗಾಗಿ ಮೂರು ತಿಂಗಳು ದೆಹಲಿಗೆ ಹೊರಟುಹೋದರು. ಪ್ರಭಾರಿ ವಿಭಾಗಾಧಿಕಾರಿಯಾದ (ಡೆಮಾಲಿಶ್ ಅಧಿಕಾರಿ) ಹರ್ಷ ಗುಪ್ತರನ್ನು ಹೆಚ್ಚಿನ ಕೆಲಸದಿಂದ ಕೈಬಿಡಲಾಯಿತು. ಈ ಜಾಗಕ್ಕೆ ಶಾಲಿನಿ ರಜನೀಶ್ ಅಧಿಕಾರ ವಹಿಸಿಕೊಂಡರು. ಆದರೆ ಜನಸಾಮಾನ್ಯನ ಚಿತ್ತ ಮಾತ್ರ ರಸ್ತೆ ಅಗಲೀಕರಣ ಕಾರ್ಯಾಚರಣೆಯ ಕಡೆಗೆ ಇತ್ತು. ಬಹುಶಃ ಜನಸಾಮಾನ್ಯನ ಅಂತರಾಳದ ಧ್ವನಿಯ ವಿರುದ್ಧ ಸರಕಾರ ಕ್ರಮಕೈಗೊಂಡಿದ್ದರೆ ಬಹುದೊಡ್ಡ ಪ್ರತಿಭಟನೆ ಅನುಭವಿಸಬೇಕಾಗುತ್ತಿತ್ತು. ಇದನ್ನು ಬಹುಬೇಗ ಚಡ್ಡಿಗಳ ಸರ್ಕಾರ ಗಮನಿಸಿತು.

ಜನರ ಎಚ್ಚೆತ್ತ ಪ್ರಜ್ಞೆಗಾಗಿ ಎಂಬಂತೆ ಮತ್ತೆ ಅಗಲೀಕರಣಕ್ಕೆ ಅನುವಾಗಲಿ ಎಂಬುದಕ್ಕೇನೋ ಎಂಬಂತೆ ಶಾಲಿನಿ ರಜನೀಶ ಬದಲಿಗೆ ವಿಭಾಗಾಧಿಕಾರಿಯಾದ ಅವರ ಪತಿ ರಜನೀಶ ಗೋಯಲ್‌ರನ್ನು ಪುನರ್ ನೇಮಿಸಿದೆ. ಹೀಗಾಗಿ ಮತ್ತೆ ನಗರದ ತುಂಬೆಲ್ಲ ಬುಲ್ಡೋಜರ್‌ಗಳ ರುದ್ರನರ್ತನ ಯಾವ ಎಗ್ಗಿಲ್ಲದೆ ಸಾಗಿದೆ.

ಆದರೆ ತಲಸ್ಪರ್ಶಿಯಾದ ಅಧ್ಯಯನ ಕೊರತೆಯಿಂದ ಲಾಲಗೇರಿ ಕ್ರಾಸ್-ರಾಘವೇಂದ್ರ ಕಾಲೋನಿಯನ್ನು ಪ್ರವೇಶಿಸಿದ ರಸ್ತೆ ಡೆಮಾಲಿಶ್ ಕಾರ್ಯಾಚರಣೆ ಸಂಪೂರ್ಣ ಎಡವಿದೆಯೆಂದೇ ಹೇಳಬೇಕು. ಭಾಂಡೆ ಬಜಾರ್-ಕಿರಾಣಾ ಬಜಾರ್ ಅಗಲೀಕರಣ ಕಾರ್ಯ ಕೈಗೆತ್ತಿಕೊಳ್ಳದೆ ವರ್ತಕರ ಹಾಗೂ ವತನದಾರರ ಲಾಬಿಗೆ ಜಿಲ್ಲಾಡಳಿತ ಸಂಪೂರ್ಣ ಮಣಿದದ್ದು ಮೇಲ್ನೋಟಕ್ಕೆ ಕಂಡುಬರುತ್ತಿದೆ. ಸರಕಾರದ ಜಾಗೆಯನ್ನು ಒತ್ತುವರಿ ಮಾಡಿದ್ದರೆ ಆ ಮಾತು ಬೇರೆ. ಆದರೆ ಅವರಿಗೂ ಕೂಡ ಯಾವುದೇ ಮುನ್ಸೂಚನೆ ನೀಡದೆ ಅವರನ್ನು ಅಲ್ಲಿಂದ ತೆರವುಗೊಳಿಸುವುದೂ ಸರಿಯಾದುದಲ್ಲ ಎಂಬ ಕನಿಷ್ಠ ಸಂಗತಿಯೂ ಜಿಲ್ಲಾಡಳಿತಕ್ಕೆ ಇಲ್ಲ. ಇದರಿಂದಾಗಿ ಬಹುತೇಕ ಸಾಮಾನ್ಯ ಜನ ಇದ್ದೊಂದು ಸೂರು ಕಳಕೊಂಡು ಸಂಪೂರ್ಣ ನಿರ್ಗತಿಕರಾಗಿ ರಸ್ತೆಯ ಮೇಲೆಯೇ ನಿಲ್ಲಬೇಕಾದ ದುಸ್ಥಿತಿ ಇದಿರಾಗಿದೆ. ಇಂಥ ಅನಾಥ ಹಾಗೂ ಇದ್ದೊಂದು ಜಾಗವನ್ನು ಕಳಕೊಂಡ ಜನರಿಗೆ ಪರ್ಯಾಯ ವ್ಯವಸ್ಥೆ ಕಲ್ಪಿಸಬೇಕು ಎಂಬ ಕನಿಷ್ಠ ತಿಳಿವಳಿಕೆಯೂ ಜಿಲ್ಲಾಡಳಿತಕ್ಕೆ ಇಲ್ಲದೆ ಹೋದದ್ದು ಇಲ್ಲಿನ ಜನಗಳ ದುರಂತ.

ಇಂಥ ಸಂದರ್ಭದಲ್ಲಿ ಜನರ ಕಷ್ಟಗಳೊಂದಿಗೆ ಬೆರೆತು ಅವರ ನೋವಿನೊಂದಿಗೆ ಧ್ವನಿಗೂಡಿಸಬೇಕಾದ ಶಾಸಕ ಚಂದ್ರಶೇಖರ ಪಾಟೀಲ ರೇವೂರ ಹೇಳಿಕೇಳಿ ಲಡ್ಡು ಹೊಡೆದ ಗಿರಾಕಿ. ಮೇಲಾಗಿ ಈ ಕನಿಷ್ಠ ಸಂಗತಿಗಳು ಆತನ ಕಿವಿಯ ಮೇಲೆ ಬಿದ್ದಿವೆ ಎಂಬ ಸಂಗತಿ ಆಶ್ಚರ್ಯ ಹುಟ್ಟಿಸುವಂಥದ್ದು. ಜನಸಾಮಾನ್ಯನ ವಿತ್ತ ಜೀವಗಳನ್ನು, ಅವರ ಗೌರವಯುತ ಬದುಕನ್ನು ಸಂರಕ್ಷಿಸಬೇಕಾದ ಸರಕಾರ ಹೀಗೆ ತನ್ನ ಅಂದಾದುಂದಿ ನಡವಳಿಕೆಯಿಂದ ಎಗರಾಡುತ್ತ ನಡೆದರೆ ಇದನ್ನು ಕೇಳುವವರು ಯಾರು?

"ಅಗಲೀಕರಣ ನಮಗೂ ಬೇಕ್ರಿ. ಆದ್ರ ಇದು ಪದ್ಧತಿ ಅಲ್ಲ ಬಿಡ್ರಿ. ನಿನ್ನಿ ಬಂದು ಬಣ್ಣದ ಗೆರೆ ಹಾಕಿ ಹೋದವರು. ಇವತ್ ಬಂದು ಮನಿ ಒಡಿಲಿಕ್ಕಿ ಜೆಸಿಬಿ ತಂದು ನಿಂತಗೊಂಡಾರ. ನಾವ್ರ ಬಾಯಿ ಸತ್ತೋರು ಅಂತ ಹೀಂಗ್ಯ ಬಡವರ ವ್ಯಾಗ ಹಮಲಾ ಮಾಡೋದೇನ್ರೀ...?"

"ರಾತ್ರೋರಾತ್ರಿ ಮನಿ ಖಾಲಿ ಮಾಡ್ರಿ ಅಂದ್ರ ಹ್ಯಾಂಗ ಆಗ್ತದ್ರಿ? ಒಡಿಲಿಕ ಬಂದವರಿಗೆ ನಮ್ಮ ಕಷ್ಟ ತಿಳಿಯುವ ಸೌಜನ್ಯ ಇರಬೇಕು. ನಮಗೆ ಪರ್‍ಯಾಯ ವ್ಯವಸ್ಥೆ ಮಾಡದೆ, ಪರಿಹಾರ ಕೊಡದೆ ಹೀಂಗ ಅನಾಥರನ್ನಾಗಿ ಮಾಡಿದ್ರ ಹ್ಯಾಂಗ್?"

"ಲಾಲಗೇರಿ ಕ್ರಾಸ್ ರಸ್ತೆಯಲ್ಲಿ ಬರುವ ಜಂಗೆ ಮನೆಯ ಮೂಲೆಯಲ್ಲಿರುವ ಎಂಭತ್ನಾಲ್ಕು ವಯಸ್ಸಿನ ಅನಸುಬಾಯಿ ಅಜ್ಜಿಯ ಗೋಳು ಕೇಳುವುದಕ್ಕೂ ಆಗುವುದಿಲ್ಲ."

"ನಮ್ಮ ಆಸ್ತಿ ರಸ್ತಾ ದೊಡ್ಡದು ಮಾಡ್ಲಿಕ ಒಡದಾರ ಅಂದ್ರೂ ನಮಗ ಯಾನರ ಕೊಡ್ತಾರಾ? ಬಂದು ಮನಿ ಒಡದಂತೂ ಹೋಗ್ಯಾರ. ನಾವೆಲ್ಲರೂ ಪರೇಶಾನ್ ಆಗೀವಿ" ಎಂಬ ಇಳಿವಯಸ್ಸಿನ ಮುದುಕಿಯ ಆರ್ತನಾದ ಕೇಳುವ ಕಿವಿ, ಅವರ ನೋವಿಗೆ ಸ್ಪಂದಿಸುವ ಚರ್ಮ ನಮ್ಮ ಗುಲಬರ್ಗಾದ ಅಧಿಕಾರಿಗಳಿಗಂತೂ ಇಲ್ಲವೇ ಇಲ್ಲ.

ಬಡವರ ಮೇಲೆ, ನಿರ್ಗತಿಕರ ಮೇಲೆ, ಬಲಹೀನರ ಮೇಲೆ ಆರ್ಭಟಿಸುವ ಜೆಸಿಬಿ ಯಂತ್ರಗಳು ಕಿರಾಣಾ ಬಜಾರ ಭಾಂಡೆ ಬಜಾರಗೆ ಬಂದಾಗ ತಣ್ಣಗಾಗುತ್ತವೆ ಏಕೆ? ಎಂದು ಗುಲಬರ್ಗಾ ಡೆಮಾಲಿಶ್ ಕಾರ್ಯಾಚರಣೆಯನ್ನು [illegible] ಜನಗಳೆ ಈಗ ಕೇಳುತ್ತಿದ್ದಾರೆ [illegible]

■ [illegible]



‘ಪಂಪಾಯಾತ್ರೆ’: ಕೆಲವು ಚಾರಿತ್ರಿಕ ಟಿಪ್ಪಣಿಗಳು

ತರುಣ ಲೇಖಕನೊಬ್ಬನ ಬರೆಹವಾಗಿರುವ ‘ಪಂಪಾಯಾತ್ರೆ’ ಬಹಳ ಆಕರ್ಷಕವಾಗಿದೆ. ಇದು ಒಳಗೊಂಡಿರುವ ಧಾರ್ಮಿಕ ಮನೋಭಾವವೂ ಗತ ಚರಿತ್ರೆಯನ್ನು ಕುರಿತ ದೃಷ್ಟಿಕೋನವೂ ಇದನ್ನೊಂದು ಸರಳ ಯಾತ್ರಾಕಥನಕ್ಕಿಂತ ಭಿನ್ನವಾದ ಕೃತಿಯನ್ನಾಗಿಸಿವೆ; ಇದನ್ನು ಸಾಹಿತ್ಯ ಕೃತಿಯನ್ನಾಗಿ ಮಾತ್ರವಲ್ಲದೆ, ಚಾರಿತ್ರಿಕ ನೋಟಗಳುಳ್ಳ ರಾಜಕೀಯ ಪಠ್ಯವನ್ನಾಗಿ ನೋಡುವಂತೆ ಒತ್ತಾಯಿಸುತ್ತವೆ. ಈ ದಿಸೆಯಲ್ಲಿ ಈ ಕೆಲವು ಟಿಪ್ಪಣಿಗಳು.


■ ರಹಮತ್ ತರೀಕೆರೆ

ಕಾಲು ಶತಮಾನದ ಹಿಂದೆ ‘ಪಂಪಾಯಾತ್ರೆ’ಯನ್ನು ಓದಿದ್ದೆ ಯಾಕೊ ಏನೊ. ಅದರಲ್ಲಿ ಈಗಲೂ ಮನಸ್ಸಿನಲ್ಲಿ ಉಳಿದಿರುವುದು, ಐವರು ಯಾತ್ರಿಕರು ಹಂಪಿಯ ‘ಪೋಳದುದ್ದ ನೊಂದರಗಪ್ಪೆ ಗೇಣುದ್ದ ಚೇಳು”ಗಳಿಗೆ ಹೆದರಿ ನಡುಗುವ ಪ್ರಸಂಗ. ಬಹುಶಃ ವಿಸೀಯವರು ಬಂದಾಗ (1925) ಹಂಪಿ ಪರಿಸರವು ಕಾಡುತನದಿಂದ ಕೂಡಿದ್ದಿರಬಹುದು. ಈ ಕಾಡುತನ-ಪಾಳುತನ ಈಗಲೂ ಅಲ್ಲಿ ಕೆಲಮಟ್ಟಿಗೆ ಉಳಿದಿದೆ. ‘ಪಂಪಾಯಾತ್ರೆ’ ಕಥನದಲ್ಲಿರುವ ಉತ್ಪ್ರೇಕ್ಷಿತ ಮತ್ತು ವಿನೋದ ಧಾಟಿಯು, ಇಲ್ಲಿರುವ ಚಿತ್ರಗಳನ್ನು ಹಾಗೆ ಕಟುವಾಸ್ತವದ್ದೆಂದು ನಂಬಬೇಕಿಲ್ಲವೆಂದು ಸೂಚಿಸುತ್ತದೆ, ನಿಜ. ಆದರೂ ಹಂಪಿ ಪರಿಸರವು ಜನವಾಸಕ್ಕೆ ಅರ್ಹವಲ್ಲದ ಜಾಗ (“ಹುರುಹಕ್ಕಿ ಕಾಣದ ಸುಡುಗಾಡು ದೇಶ”) ಎಂಬಂತಹ ಧ್ವನಿಯನ್ನು ಅದು ವ್ಯಾಪಕವಾಗಿ ಒಳಗೊಂಡಿದೆ. ಇದನ್ನು ಮಧ್ಯಮವರ್ಗದ ನಗರವಾಸಿಗಳ ದೃಷ್ಟಿಕೋನದಲ್ಲಿ ಮೂಡಿದ ಚಿತ್ರವೆಂತಲೂ ಕರೆಯಬಹುದು. ಯಾಕೆಂದರೆ ಹಂಪಿಗೆ ನೂರಾರು ವರ್ಷಗಳಿಂದ ಬರಿಗಾಲಲ್ಲಿ ಭಜನೆ ಹಾಡಿಕೊಂಡು ಯಾತ್ರೆ ಬರುವವರು ಇದ್ದು, ಅವರು ಒಂದೊಮ್ಮೆ ಹಂಪಿ ಬಗ್ಗೆ ಬರೆದರೆ ಆ ‘ಪಂಪಾಯಾತ್ರೆ’ ಬೇರೆಯೇ ಆಗಿರಬಲ್ಲದು.

ಆದರೂ ತರುಣ ಲೇಖಕನೊಬ್ಬನ ಬರೆಹವಾಗಿರುವ ‘ಪಂಪಾಯಾತ್ರೆ’ ಬಹಳ ಆಕರ್ಷಕವಾಗಿದೆ. ಇದು ಒಳಗೊಂಡಿರುವ ಧಾರ್ಮಿಕ ಮನೋಭಾವವೂ ಗತ ಚರಿತ್ರೆಯನ್ನು ಕುರಿತ ದೃಷ್ಟಿಕೋನವೂ ಇದನ್ನೊಂದು ಸರಳ ಯಾತ್ರಾಕಥನಕ್ಕಿಂತ ಭಿನ್ನವಾದ ಕೃತಿಯನ್ನಾಗಿಸಿವೆ; ಇದನ್ನು ಸಾಹಿತ್ಯ ಕೃತಿಯನ್ನಾಗಿ ಮಾತ್ರವಲ್ಲದೆ, ಚಾರಿತ್ರಿಕ ನೋಟಗಳುಳ್ಳ ರಾಜಕೀಯ ಪಠ್ಯವನ್ನಾಗಿ ನೋಡುವಂತೆ ಒತ್ತಾಯಿಸುತ್ತವೆ. ಈ ದಿಸೆಯಲ್ಲಿ ಈ ಕೆಲವು ಟಿಪ್ಪಣಿಗಳು.

* * * * * *

ಕೃತಿಯ ಹೆಸರೇ ಸೂಚಿಸುವಂತೆ ‘ಪಂಪಾಯಾತ್ರೆ’ಯು ಪ್ರಧಾನವಾಗಿ ಒಂದು ಯಾತ್ರಾಕಥನ. ಪ್ರವಾಸಕ್ಕೆ ಲೌಕಿಕ ಆಯಾಮವಿದ್ದರೆ, ಯಾತ್ರೆಗೆ ಧಾರ್ಮಿಕ ಆಯಾಮವಿರುತ್ತದೆ. ‘ಯಾತ್ರೆ’ಯ ಧಾರ್ಮಿಕ ಉದ್ದೇಶ ಮತ್ತು ಯಾತ್ರಿಕರ ಸಾಮಾಜಿಕ ಹಿನ್ನೆಲೆಗಳು ನೋಡುವ ನೋಟಕ್ಕೆ ಒಂದು ಚೌಕಟ್ಟನ್ನು ಹಾಕುತ್ತವೆ. ‘ಪಂಪಾಯಾತ್ರೆ’ಯ ಧಾರ್ಮಿಕತೆಯು ವೈದಿಕ-ಬ್ರಾಹ್ಮಣ ನೆಲೆಯದು; ಇನ್ನೂ ನಿರ್ದಿಷ್ಟವಾಗಿ ಹೇಳಬೇಕೆಂದರೆ ಸ್ಮಾರ್ತ ನೆಲೆಯದು. ವಿಶೇಷವೆಂದರೆ, ಈ ಯಾತ್ರೆಯಲ್ಲಿ ಪ್ರಧಾನ ಸ್ಥಾನ ಪಂಪಾಕ್ಷೇತ್ರದ ಅಧಿಪತಿಯಾದ ವಿರೂಪಾಕ್ಷನದಲ್ಲ, ಅವನ ಗುಡಿಯದೂ ಅಲ್ಲ, ಬದಲಿಗೆ ವಿಜಯನಗರ ಸ್ಥಾಪನೆಗೆ ಪ್ರೇರಣೆ ನೀಡಿದವರು ಎನ್ನಲಾಗುವ ಅದ್ವೈತ ತತ್ವಪ್ರತಿಪಾದಕ ಯತಿಯಾದ ವಿದ್ಯಾರಣ್ಯರದು ಮತ್ತು ರಾಮಾಯಣದ ಜತೆ ಪೌರಾಣಿಕ ಸಂಬಂಧ ಕಲ್ಪಿಸುವ ಪಂಪಾಸರೋವರದ್ದು. ಕೃತಿಯ ಹೆಸರು ಬಂದಿರುವುದೇ ಪಂಪಾತೀರ್ಥಕ್ಕೆ ಮಾಡುವ ಯಾತ್ರೆಯಿಂದ. ಕಥನದಲ್ಲಿ ವಿರೂಪಾಕ್ಷ ಗುಡಿಯ ಪರಿಸರವನ್ನೂ ಪಂಪಾಸರೋವರದ ಪರಿಸರವನ್ನೂ ವರ್ಣಿಸುವಲ್ಲಿ ಇರುವ ಭಾಷೆ ಭಾವುಕತೆಗಳ ಫರಕನ್ನು ಗಮನಿಸಬೇಕು. ‘ಪಂಪಾಯಾತ್ರೆ’ಯ ನಿರೂಪಕನು ವಿಜಯನಗರ ಸಾಮ್ರಾಜ್ಯವನ್ನು ವಿದ್ಯಾರಣ್ಯರು ಕಟ್ಟಿದ “ಅದ್ವೈತ ಸಾಮ್ರಾಜ್ಯ” ಎಂದು ನಂಬಿದವನು; ಯಾತ್ರಿಕರು ಹಂಪಿಯಲ್ಲಿ ವಿದ್ಯಾರಣ್ಯರ ಆರಾಧನೆ ಮಾಡುತ್ತಾರೆ.



ಪ್ರಶ್ನೆಯೆಂದರೆ-ಈ ವಿದ್ಯಾರಣ್ಯರು ಯಾರು? ಅವರೊಬ್ಬ ಐತಿಹಾಸಿಕ ವ್ಯಕ್ತಿಯೆ? ವಿಜಯನಗರ ಸ್ಥಾಪನೆಗೆ ಅವರು ನಿಜವಾಗಿ ಪ್ರೇರಣೆ ಕೊಟ್ಟರೆ? ಈ ಬಗ್ಗೆ ವಿದ್ವಾಂಸರಲ್ಲಿ ಬಗೆಹರಿಯದ ಭಿನ್ನ ಮತಗಳಿವೆ. ವಿಜಯನಗರ ಸಾಮ್ರಾಜ್ಯ ಸ್ಥಾಪನೆಗೆ ವಿದ್ಯಾರಣ್ಯ ಯತಿಗಳೇ ಕಾರಣರೆಂದು ಒಂದು ಧಾರೆ ನಂಬಿದರೆ, ಮತ್ತೊಂದು ಧಾರೆ ಶೈವಯತಿಯಾದ ಕ್ರಿಯಾಶಕ್ತಿ ಪಂಡಿತರು ಕಾರಣರೆಂದು ಭಾವಿಸಿದೆ. ಇವೆರಡರ ನಡುವೆ ವಿಜಯನಗರ ಸಾಮ್ರಾಜ್ಯ 1336ರಲ್ಲಿ ಆರಂಭವಾಗಲಿಲ್ಲವೆಂದೂ ಇದಕ್ಕೆ ಪ್ರೇರಣೆ ಕೊಟ್ಟವರು ವಿದ್ಯಾರಣ್ಯರಲ್ಲವೆಂದೂ ಹೇಳುವ ವಿದ್ವಾಂಸರೂ ಇದ್ದಾರೆ. ಮೊದಲನೇ ಧಾರೆಗೆ ವಿದ್ಯಾರಣ್ಯರು, ಅವರ ಸಂಸ್ಕೃತ ಗ್ರಂಥಗಳು, ರಾಮಾಯಣದ ಜತೆ ಸಂಪರ್ಕವುಳ್ಳ ಸ್ಥಳಗಳು, ಪಂಪಾಸರೋವರ, ವಿಠಲಗುಡಿ, ವಿಜಯನಗರ ಸಾಮ್ರಾಜ್ಯ, ಕೃಷ್ಣದೇವರಾಯ ಇತ್ಯಾದಿ ವೈದಿಕ/ವಿಷ್ಣು ಸಂಸ್ಕೃತಿಯ ಕುರುಹುಗಳು ಮುಖ್ಯ; ಇದನ್ನು ವಿದ್ಯಾರಣ್ಯ ಧಾರೆ ಎನ್ನಬಹುದು. ಎರಡನೆಯದಕ್ಕೆ ಹಂಪಿ, ವಿರೂಪಾಕ್ಷ ದೈವ, ಹರಿಹರ, ಅವನ ಶಿವಭಕ್ತರ ರಗಳೆಗಳು, ಕಾಳಾಮುಖ ಯತಿ ಕ್ರಿಯಾಶಕ್ತಿ, ಪ್ರೌಢದೇವರಾಯ ಇತ್ಯಾದಿ ಮುಖ್ಯ. ಇದನ್ನು ವಿರೂಪಾಕ್ಷ ಧಾರೆ ಎನ್ನಬಹುದು. ಒಂದು ಧಾರೆ ವಿಜಯನಗರದ ರಾಜಕೀಯ-ಧಾರ್ಮಿಕ ಚರಿತ್ರೆಯನ್ನು ಇಟ್ಟುಕೊಂಡು ಪ್ರವೇಶಿಸುತ್ತದೆ; ಇನ್ನೊಂದು ಹಂಪಿಯ ಶೈವಧಾರ್ಮಿಕ ಪರಂಪರೆಯನ್ನು ಇಟ್ಟುಕೊಂಡು ಪ್ರವೇಶಿಸುತ್ತದೆ. ಈ ಕಾರಣಕ್ಕೆ ಇವನ್ನು ವಿಜಯನಗರ ಧಾರೆ ಮತ್ತು ಹಂಪಿಧಾರೆ ಎಂದು ಕೂಡ ವಿಂಗಡಿಸಬಹುದು.

ವಿದ್ಯಾರಣ್ಯ ಮತ್ತು ವಿರೂಪಾಕ್ಷ ಧಾರೆಗಳೆರಡೂ ವಿಜಯನಗರದ ಸಾಮ್ರಾಜ್ಯದ ಕಾಲದಿಂದಲೂ ಪೈಪೋಟಿ ಮತ್ತು ಸಂಘರ್ಷ ಮಾಡಿಕೊಂಡು ಬಂದಿವೆ. ಇವು 20ನೇ ಶತಮಾನದ ಸಾಹಿತ್ಯ ಸಂಶೋಧನೆ, ಚರಿತ್ರಲೇಖನ ಮತ್ತು ಸಾಂಸ್ಕೃತಿಕ ರಾಜಕಾರಣದಲ್ಲಿ ಪರೋಕ್ಷವಾಗಿ ಮುಂದುವರೆದಿವೆ ಕೂಡ. 20ನೇ ಶತಮಾನದಲ್ಲಿ ಅನೇಕ ಕಾರಣಗಳಿಂದ ವಿಜಯನಗರ ಧಾರೆ ಮೇಲುಗೈ ಪಡೆಯಿತು. ಇದಕ್ಕೆ ಕಾರಣ, ಮೊದಲ ಘಟ್ಟದಲ್ಲಿ ಕೆಲವು ಬ್ರಾಹ್ಮಣ ಲೇಖಕರು ವಿದ್ಯಾರಣ್ಯ-ವಿಜಯನಗರಗಳ ನಡುವಣ ಸಂಬಂಧ ಸ್ಥಾಪಿಸುವ ದಿಸೆಯಲ್ಲಿ ದೊಡ್ಡ ಪ್ರಮಾಣದ ಸಾಹಿತ್ಯ ರಚಿಸಿ ಬುನಾದಿಯನ್ನು ಹಾಕಿದ್ದು; ಇದರ ಪ್ರಾರಂಭವನ್ನು ಮಾಡಿದವರು ಬಹುಶಃ (‘ಶ್ರೀವಿದ್ಯಾರಣ್ಯರ ಚರಿತ್ರೆ’ 1907) ಗಳಗನಾಥರು. ನಂತರ ಇದೇ ಗಳಗನಾಥರು ವಿದ್ಯಾರಣ್ಯರನ್ನು ನಾಯಕರಾಗಿಸಿಕೊಂಡು ‘ಮಾಧವ ಕರುಣಾ ವಿಲಾಸ’ (1923) ಕಾದಂಬರಿ ಪ್ರಕಟಿಸಿದರು. ‘ಪಂಪಾಯಾತ್ರೆ’ಯಲ್ಲಿ ಒಂದು ಪಾತ್ರವಾಗಿ ಬರುವ ರಾಯರು (ಡಿವಿಜಿ), ವಿದ್ಯಾರಣ್ಯರನ್ನು ವಿಜಯನಗರ ಸಾಮ್ರಾಜ್ಯ ಸ್ಥಾಪಕರೆಂದು ಸ್ಥಾಪಿಸುವ ಕೆಲಸವನ್ನು ದೊಡ್ಡ ಪ್ರಮಾಣದಲ್ಲಿ ಮಾಡಿದವರು. ಆಲೂರ ವೆಂಕಟರಾಯರು ಕರ್ನಾಟಕ ಏಕೀಕರಣ ಚಳವಳಿಯ ಜತೆ ವಿದ್ಯಾರಣ್ಯರನ್ನು ಬೆಸೆದರು. ‘ಪಂಪಾಯಾತ್ರೆ’ಯಲ್ಲೂ ವಿದ್ಯಾರಣ್ಯರ ಬಗ್ಗೆ ಬಹಳ ಭಕ್ತಿಯ ಮಾತುಗಳು ಬರುತ್ತವೆ:

“ಇಲ್ಲಿ ತಾನೇ ಆ ವೀರತಪಸ್ವಿಗಳು ಹಿಂದೂಧರ್ಮವನ್ನು ಉದ್ಧಾರ ಮಾಡುವ ಯೋಜನೆಗಳನ್ನು ಪಕ್ವಮಾಡಿಕೊಂಡುದು! ಹಿಂದೂ ಸಾಮ್ರಾಜ್ಯ ಸ್ಥಾಪನೆಯ ಉದ್ದೇಶಗಳನ್ನು ಗುರಿಮಾಡಿಕೊಂಡುದು! ...ಅವರಂಥ ತಪಸ್ವಿಗಳಿಗೂ ದೇಶ ಬಾಂಧವರಿಗೂ ಸ್ವಾರ್ತ ಸಾಮ್ರಾಜ್ಯ ಸಂಸ್ಥಾಪನೆಯ ಯೋಚನೆ ಬಂದುದು ಹೆಚ್ಚೇನು? ಬ್ರಾಹ್ಮಣನ ಸತ್ವತೇಜಸ್ಸಂಪಾದನೆಗೂ ಕ್ಷತ್ರಿಯನ ಕ್ಷಾತ್ರರಾಷ್ಟ್ರ ಪ್ರತಿಷ್ಠಾಪನೆಗೂ ಭೂಮಿಯ ಈ ಭಾಗ ಪಡೆದಿರುವಷ್ಟು ಅನುಕೂಲ್ಯ ಇನ್ನಾವ ಭಾಗವೂ ಪಡೆದಿಲ್ಲ”.

ಮೇಲ್ಕಾಣಿಸಿದ ಎಲ್ಲ ಯತ್ನಗಳು 1936ರಲ್ಲಿ ಹಂಪಿಯಲ್ಲಿ ನಡೆದ ವಿಜಯನಗರ ಸಾಮ್ರಾಜ್ಯ ಸ್ಥಾಪನೆಯ 600ನೇ ವರ್ಷದ ಉತ್ಸವಕ್ಕೆ ಒಂದು ನಮೂನೆಯ ಸೈದ್ಧಾಂತಿಕ ಭೂಮಿಕೆಯನ್ನು ಕಲ್ಪಿಸಿಕೊಟ್ಟವು. ಹೆಚ್ಚಾಗಿ ಬ್ರಾಹ್ಮಣ ಲೇಖಕರು-ಆಚಾರ್ಯರೇ ಸೇರಿದ್ದ ಈ ಸಭೆಯ ಅಧ್ಯಕ್ಷತೆಯನ್ನು ಶಂಕರಾಚಾರ್ಯರೆಂದು ಹೆಸರಾದ ಕುರ್ತಕೋಟಿ ಮಹಾಭಾಗವತರೆಂಬ ಯತಿ ವಹಿಸಿದ್ದರು ಎಂಬುದು ಗಮನಾರ್ಹ. ಈ ಹಿನ್ನೆಲೆಯಲ್ಲಿ ‘ಪಂಪಾಯಾತ್ರೆ’ಯಲ್ಲಿ ಬರುವ ವಿದ್ಯಾರಣ್ಯರ ಮತ್ತು ಪಂಪಾಸರೋವರದ ಪ್ರಾಮುಖ್ಯವನ್ನು ಗಮನಿಸಬೇಕು.

ಇದಕ್ಕೆ ತಕ್ಕಂತೆ ‘ಪಂಪಾಯಾತ್ರೆ’ಯ ಯಾತ್ರಿಕರ ಎರಡು ದಿನದ ಚಟುವಟಿಕೆಗಳು ಮುಖ್ಯವಾಗಿ ವೈದಿಕ ಆಚರಣೆಗಳಾಗಿವೆ. ಯಾತ್ರಿಕರ ತಂಡದ ಯಜಮಾನರು “ಪರಸ್ಥಳಗಳಲ್ಲಿ ಇತರರ ಕೈಯಲ್ಲಿ ಊಟ ಮಾಡುವವರಲ್ಲ, ಅಡುಗೆ ಬೇಕಾದ ಸಮಸ್ತ ಸಾಂಬಾರದ ಸಾಮಾನುಗಳನ್ನೂ ಉಪ್ಪು ಉಪ್ಪಿನಕಾಯಿ ಊಟದೆಲೆ ಚಕ್ಕೆ ಸೌದೆ ಮೊದಲುಗೊಂಡು ಎಲ್ಲವನ್ನೂ” ಜತೆಯಲ್ಲೇ ಹೊತ್ತುಕೊಂಡು ಹೋಗುವವರು; ತಂಡದ ಇತರ ಸದಸ್ಯರು ಇಷ್ಟು ಮಡಿವಂತರಲ್ಲ; “ನಮಗೆ ವ್ರತವಿಲ್ಲ, ನಿಷ್ಠೆಯಿಲ್ಲ, ಆಚಾರವಿಲ್ಲ; ಊಟ ಉಪಚಾರಗಳಲ್ಲಿ ಯಗ್ಗಿಲ್ಲ” ಎಂದು ಹೇಳುವಷ್ಟು ಮುಕ್ತತೆಯುಳ್ಳವರು; ಆದರೆ ಈ ಮುಕ್ತತೆ “ಮಾಡುವವರು ಬ್ರಾಹ್ಮಣರಾಗಿದ್ದರೆ ಸರಿ” ಎಲ್ಲಾದರೂ ಹೇಗಿದ್ದರೂ ತಿನ್ನಬಲ್ಲೆವು ಎಂಬಷ್ಟು ಸಡಿಲಗೊಳ್ಳುವುದು. ಯಾತ್ರೆಯಲ್ಲಿ ಸ್ನಾನದ, ಮಡಿಯ, ಪೂಜೆಯ, ಅಡುಗೆಯ, ಊಟದ ಮತ್ತು ಪಾತ್ರೆಗಳನ್ನು “ಹುಳಿಹುಚ್ಚ ದಿನಕ್ಕೆ ಎಂಟು ಸಲ ತೊಳೆಯುವ” ದಟ್ಟವಾದ ವಿವರಗಳು ಬರುತ್ತವೆ. ಇಲ್ಲಿನ ಅಡುಗೆ ಮತ್ತು ಊಟದ ವಿವರಗಳಿಗೆ ಯಾತ್ರಿಕರ ರಸಿಕತೆಯ ಮುಖವಿದೆ. ಜತೆಗೆ ಮೈಲಿಗೆಯ ಕಳವಳದ ಮುಖವೂ ಇದೆ.


* * * * * *

‘ಪಂಪಾಯಾತ್ರೆ’ಯ ಅನುಭವ ಮತ್ತು ಚಿಂತನೆಯನ್ನು ನಿರ್ಬಂಧಿಸಿರುವ ಇನ್ನೊಂದು ಸಂಗತಿಯೆಂದರೆ, ನಿರ್ದಿಷ್ಟ ಸಾಮಾಜಿಕ ಸಮುದಾಯದ ಪರವಾಗಿ ರಾಜಕೀಯ ಪ್ರಭುತ್ವವೊಂದನ್ನು ವೈಭವೀಕರಿಸುವ ಚರಿತ್ರೆಯ ದೃಷ್ಟಿಕೋನ. ಕೃತಿಯು ಮೊದಲ ಹಂತದಲ್ಲಿ ಧಾರ್ಮಿಕ ಶ್ರದ್ಧೆಯನ್ನೂ ರಾಜಕೀಯ ಚರಿತ್ರೆಯನ್ನೂ ಕೆಲಮಟ್ಟಿಗೆ ಹೊರಗಿಡುತ್ತದೆ. ಬದಲಿಗೆ ಹಂಪಿಯ ವರ್ತಮಾನದ ಜೀವಂತ ಬದುಕಿನ ವಿವರಗಳಿಗೆ ಕಂಗೆಡುತ್ತಾ ಹೋಗುತ್ತಾನೆ. ಆದರೆ ಯಾತ್ರೆ ಕೊನೆಯ ರಾತ್ರಿ ಅವನಿಗೆ ಬೀಳುವ ವಿಜಯನಗರದ ವೈಭವ ಮತ್ತು ಪತನಗಳ ಕನಸಿನ ಪ್ರಸಂಗವು, ಕಥನವನ್ನು ಚರಿತ್ರೆಯ ಚೌಕಟ್ಟಿಗೆ ಸಿಲುಕಿಸುತ್ತದೆ. ಇದು ‘ಪಂಪಾಯಾತ್ರೆ’ಯಷ್ಟೇ ಕಟ್ಟಿಕೊಂಡ ಚರಿತ್ರೆಯ ಚೌಕಟ್ಟಲ್ಲ, ಬಳ್ಳಾರಿಯ ಕಲೆಕ್ಟರನಾಗಿದ್ದ ರಾಬರ್ಟ್ ಸಿವೆಲ್ಲನ ‘ಮರೆಯಲಾಗದ ಸಾಮ್ರಾಜ್ಯ’ದಿಂದ ಹಿಡಿದು, ಮರಾಠಿ ಕಾದಂಬರಿಕಾರ ಹರಿನಾರಾಯಣ ಆಪ್ಟೆಯವರು ವಿಜಯನಗರ ಕುರಿತ ಬರೆದ ಕಾದಂಬರಿ ‘ವಜ್ರಾಘಾತ’, ಗಳಗನಾಥರು ಬರೆದ ‘ಕನ್ನಡಿಗರ ಕರ್ಮಕಥೆ’, ಜನರನ್ನು ಕೈಬಿಟ್ಟು ಹಂಪಿಯ ಶಿಲಾಸ್ಮಾರಕಗಳ ಪಾವಿತ್ರ್ಯ ರಕ್ಷಣೆಗೆ ಹುರುಡಿಸುವ ಸಂಶೋಧಕರು, ಹಂಪಿಯ ಭಗ್ನತೆಯಿಂದ ಮತೀಯ ದ್ವೇಷದ ಕಥನವನ್ನು ಆರಂಭಿಸುವ ಭೈರಪ್ಪನವರ ‘ಆವರ[...] ಹಂಪಿಯ ಪಾವಿತ್ರ್ಯ ಉಳಿಸುವ ನೆಪದಲ್ಲಿ ಅದನ್ನೊಂ[...] ರಾಜಕೀಯ ಉದ್ದೇಶಕ್ಕಾಗಿ ಕಬ್ಜಿಮಾಡುವ ಜಾಗವನ್ನಾ[...] ಮಾಡಲು ಯತ್ನಿಸುತ್ತಿರುವ ಮತೀಯ ಸಂಘಟನೆಗಳ[...] ತನಕ, ವ್ಯವಸ್ಥಿತವಾಗಿಯೂ ಅನುಸ್ಯೂತವಾಗಿಯ[...] ಕಟ್ಟಲ್ಪಟ್ಟಿರುವ ಚೌಕಟ್ಟಿದು. ಇದರ ಪ್ರಮು[...] ಗ್ರಹಿಕೆಯೆಂದರೆ-ವಿಜಯನಗರ ಸಾಮ್ರಾಜ್ಯವು ಉತ್ತರದಿಂ[...] ಬಂದ ಪರಕೀಯರಾದ ಮುಸ್ಲಿಮರಿಂದ ಹಿಂದೂಧರ್ಮ[...]ವನ್ನು ರಕ್ಷಿಸುವುದಕ್ಕೆ ಹುಟ್ಟಿಕೊಂಡಿತು; ಇದು ತನ್ನ ಕಾಲದ[...] ವೈಭವದ ತುತ್ತತುದಿ ಕಂಡಿತು. ಇಂತಹ ಸಾಮ್ರಾಜ್ಯ[...] ಪ್ರೇರಕರು ಒಬ್ಬ ಯತಿ. ಕೊನೆಗೆ ಇದನ್ನೆಲ್ಲ ಮುಸ್ಲಿಮರ[...] ನಾಶಮಾಡಿದರು ಎಂಬ ಸಂಕಥನವನ್ನು ಗಾಢವಾ[...] ನಂಬಿರುವುದು; ಈ ಗ್ರಹಿಕೆ ವಿಜಯನಗರಕ್ಕೆ ಕದನದ[...] ಉಂಟಾದ ಸೋಲು ಮತ್ತು ನಗರದ ಪತನದ ನೆನಪುಗಳಿಂ[...] ವರ್ತಮಾನದಲ್ಲಿ ನೋವುಣ್ಣುತ್ತದೆ. ಇದಕ್ಕೆ ಕಾರಣರಾದವ[...] ಮೇಲೆ ಆಕ್ರೋಶಗೊಳ್ಳುತ್ತದೆ.

ಗತವೈಭವದ ಸಂಭ್ರಮ ಮತ್ತು ಪತನದ ಗಾಢವಿ[...]ದವು ‘ಪಂಪಾಯಾತ್ರೆ’ಯಲ್ಲೂ ಪ್ರಕಟವಾಗುತ್ತದೆ. ಚರಿ[...]ಯಲ್ಲಿ ಸಂಭವಿಸಿದ ರಾಜಕೀಯ ಸಂಘರ್ಷಗಳನ್ನು ಧರ್ಮ[...]ಗಳ ನಡುವೆ ಆದ ಸಂಘರ್ಷವೆಂದು ವ್ಯಾಖ್ಯಾನಿಸುವ [...] ಮತೀಯ ಸಂಕಥನದ ಸಮಸ್ಯೆಯೆಂದರೆ, ಜಗತ್ತಿನ ಎ[...] ರಾಜಕೀಯ ಪ್ರಭುತ್ವಗಳ ವಿಷಯದಲ್ಲಿಯೂ ಸಂಭವಿಸಿರು[...] ಅಧಿಕಾರ, ಸಂಪತ್ತು ಸಂಗ್ರಹ, ಯುದ್ಧ, ಮಾನವೀಯ[...] ದುರಂತಗಳ ಮೇಲೆ ದಾರ್ಶನಿಕ ಚಿಂತನೆ ಮಾಡು[...] ಅವಕಾಶವನ್ನು ಬಿಟ್ಟುಕೊಡುವುದು;. ಬದಲಿಗೆ ನಿರ್ದಿ[...] ಪ್ರಭುತ್ವದ ಪರವಾಗಿ ನಿಂತು, ಅದರ ರಾಜಕೀಯ[...] ವಿರೋಧಿಗಳನ್ನು ತನ್ನ ವಿರೋಧಿಗಳೆಂದು ಭಾವಿಸುವುದ[...] ‘ಪಂಪಾಯಾತ್ರೆ’ ಇಂತಹ ಗ್ರಹಿಕೆಯ ಇಕ್ಕಟ್ಟಿಗೆ ಸಿಲುಕಿ[...] ಇಲ್ಲಿನ “ಹಿಂದೂಸವಾರರು” “ಮುಸಲ್ಮಾನ್ ಚಕ್ರವರ್ತಿಗಳು[...]” ಎಂಬ ಪದಪ್ರಯೋಗವನ್ನು ಗಮನಿಸಬೇಕು. ‘ಪಂಪಾ[...]ಯಾತ್ರೆ’ಯಲ್ಲಿ ಬರುವ ‘ಸಾಬಿ’ಯ ಚಿತ್ರವಾಗಲಿ, ಸುಲ್ತಾನ[...] ರಾಣಿಯರನ್ನು ‘ಪತ್ನಾ ಮಹಿಷಿಯರು’ ಎನ್ನುವಾಗಿನ ಸೂ[...] ವ್ಯಂಗ್ಯವಾಗಲಿ ಈ ನೆಲೆಯಿಂದ ಬಂದಿರಬಹುದ[...] ಅನಿಸುತ್ತದೆ. ಹಂಪಿಯ ಕೋದಂಡರಾಮನ ಗುಡಿಯ[...] ಭಗ್ನತೆಗೆ ಮರುಗುತ್ತ “ಅನ್ಯಮತೀಯತೆ ಮಾಡಿರಬೇಕೆನ್ನಲಾ[...] ನಾಶಕ್ರಿಯೆಯಲ್ಲಿ ನಮ್ಮವರ ವ್ಯಾಪಾರ ಸಣ್ಣದಲ್ಲ” ಎಂದ[...] ನಿರೂಪಕ ಹೇಳುತ್ತಾನೆ. ಆದರೆ ಇಲ್ಲಿರುವ ‘ನಮ್ಮವರು’ ಎಂದರೆ ಯಾರು? ವಿರೂಪಾಕ್ಷ ಧಾರೆಯವರೇ?

* * * * * *

ಆದರೆ ನಿರ್ದಿಷ್ಟ ಧಾರ್ಮಿಕ ಹಿತಾಸಕ್ತಿಯ ಮ[...]ಯಿಂದಲೂ ಮತ್ತು ಗತಕಾಲದ ರಾಜಕೀಯ ಚರಿ[...] ಕುರಿತ ಪೂರ್ವಗ್ರಹಿಕೆಯಿಂದಲೂ ‘ಪಂಪಾಯಾತ್ರೆ’ಯನ[...] ಬಿಡುಗಡೆ ಮಾಡುವ ಅನೇಕ ಸಂಗತಿಗಳು ಕಥನದಲ್ಲಿ[...] ಅವೆಂದರೆ, ನಿರೂಪಕನಲ್ಲಿರುವ ಲಿಬರಲ್ ಮನೋಭಾ[...] ಮತ್ತು ಅವನ ಜೀವನಪ್ರೀತಿಯ ಸಂಕೇತವಾಗಿರು[...] ವಿನೋದದ ದೃಷ್ಟಿಕೋನ; ಮುಖ್ಯವಾಗಿ ಕಥನ[...] ಒಳಗೊಳ್ಳುವ ಮಾನುಷವಾದ ಅನುಭವಗಳು ಮತ್ತು ಪ್ರಕೃತಿಯ ಚಿತ್ರಗಳು. ಇವು ಮತಶ್ರದ್ಧೆ ಮತ್ತು ಗತಚರಿತ್ರೆ[...] ಭಾರವನ್ನು ಕೆಳಗಿಳಿಸಿ, ಹಂಪಿಯ ವರ್ತಮಾನದಲ್ಲಿರು[...] ಬದುಕಿಗೆ ತೆರೆದುಕೊಳ್ಳಲು ಕಥನಕ್ಕೆ ಪ್ರೇರಿಸುತ್ತವೆ. ಧಾರ್ಮಿ[...] ಯಾತ್ರೆಯ ಈ ಕಥನವು ಶುರುವಾಗುವುದು ಆ ಕ್ಷೇತ್ರ[...] ಪಾವಿತ್ರ್ಯದ ವರ್ಣನೆಯಿಂದಲ್ಲ; “ಹಂಪೆ ಪುಣ್ಯಕ್ಷೇತ್ರ; ಇಂತ[...] ಪುಣ್ಯಸ್ಥಳದಲ್ಲಿ ಇಷ್ಟು ಚೇಳು, ಮೊಂಡರಕಪ್ಪೆಗಳು ಏಕಿವೆಯೆ[...] ಆ ಪಂಪಾಪತಿಗೇ ಗೊತ್ತು” ಎಂಬ ತಮಾಶೆಯಿಂದ[...] ಹಾವುಚೇಳುಗಳಿರುವ ಜಾಗದಲ್ಲಿ ಮಲಗುವುದು ಹೇ[...] ಎಂಬ ದೈನಿಕ ಮತ್ತು ವರ್ತಮಾನದ ಸಮಸ್ಯೆಯಿಂದ[...] “ಬೆಳಗಾಗುತ್ತಲೂ ಇಲ್ಲಿಂದ ಹೊರಟು ಊರಿಗೆ ಹೋ[...] ಸೇರಿಕೊಳ್ಳೋಣ” ಎಂಬ ನಿರ್ಗಮನ ತವಕದಿಂದ; ನಿರೂಪ[...] ಮೂರ್ತಿಶಿಲ್ಪಗಳನ್ನು ನೋಡುವುದಕ್ಕೆ (“ಆಗಿ[...] ಕಾಲದವರಿಗೆ ಮಾಡುವುದಕ್ಕೆ ಬೇರೆ ಏನೂ ಕೆಲಸವಿರಲಿ[...]ವೆಂದು ಕಾಣುತ್ತದೆ; ಎಲ್ಲಿ ದೊಡ್ಡಬಂಡೆಯೊಂದು ಸಿಕ್ಕಿದ[...] ಅಲ್ಲಿ ಬಸವ ಗಣೇಶ ಹನುಮಂತ ನರಸಿಂಹ ವಿಗ್ರಹಗಳನ[...] ಕೆತ್ತುತ್ತಿದ್ದರು”) ಅನಾಸಕ್ತಿ ಪ್ರಕಟಿಸುತ್ತಾನೆ. ಧಾರ್ಮಿ[...] ಸಂಪ್ರದಾಯಗಳನ್ನು (“ಅರ್ಚಕರ ಆರಾಧನೆ ಪೂಜೆಗಳ[...] ನಡೆಯುತ್ತಿರುವ ಕಡೆ ವಾಸಿಸಿಕೊಂಡಿರುವುದಕ್ಕೆ ದೇವನ[...] ಹಿಂಜರಿಯುತ್ತಾನಂತೆ”) ಕೊಂಕಾಡುತ್ತಾನೆ; ಯಾತ್ರಾಕಥನ[...] ನಿರೂಪಕನು ಧಾರ್ಮಿಕನಾದರೂ ಸಂಪ್ರದಾಯ ಜಡನ[...] ತಂಡದ ಯಜಮಾನರ ಮಡಿವಂತಿಕೆಯನ್ನು ಗೇ[...] ಮಾಡಬಲ್ಲವನು. ‘ಪಂಪಾಯಾತ್ರೆ’ಯಲ್ಲಿ ಪಂಪಾಸರೋ[...]ವರದ ತೀರ್ಥಸೇವನೆಗಿಂತ ಹೆಚ್ಚಿನ ಸಂಭ್ರಮವು ಬಟ್ಟಲ[...] ಗಟ್ಟಲೆ ಕಾಫಿ-ಟೀ ಸಮಾರಾಧನೆಯಲ್ಲಿ ಇದ್ದಂತಿದ[...] ಇವೆಲ್ಲವೂ ವಿದ್ಯಾರಣ್ಯ-ವಿಜಯನಗರ ಧಾರೆಯಿಂದಾ[...] ಯಾತ್ರೆಯಲ್ಲಾಗಿರುವ ಬಿಗುವನ್ನು ಸಡಿಲಿಸುತ್ತವೆ. ಇದ[...] ಯಾತ್ರೆಯು ಯಾತ್ರಿಕರು ಉಣ್ಣುವ ಕುಡಿಯುವ ತಿನ್ನು[...] ನಡೆಯುವ, ಮಳೆಯಲ್ಲಿ ನೆನೆಯುವ, ಚಳಿಯಲ್ಲಿ ನಡುಗುವ[...] ಸಿಡಿಲನ್ನು ನೋಡುವ, ಮಲಗುವ, ಬಂಡಿ ಮತ್ತು ರೈಲಿನ[...] ಪಯಣಿಸುವ ವಿವರಗಳಿಂದ ತುಂಬಿದೆ. ಇವು ‘ಯಾತ್ರೆ’ಯ ಧಾರ್ಮಿಕ ಕಥನವನ್ನು ಪ್ರವಾಸದ ಲೌಕಿಕ ಕಥನವನ್ನಾ[...] ಪರಿವರ್ತಿಸಲು ಯತ್ನಿಸುತ್ತವೆ.



ಮಿಶ್ವನೆಂದರೆ, ಅದ್ವೈತತತ್ವ ಪ್ರತಿಪಾದಕ ಯತಿಯ ಲ್ಲಿ ಆರಾಧನೆ ಮಾಡುವ ಯಾತ್ರಿಕರ ದೃಷ್ಟಿಕೋನವು ಪಿ ವಿಷಯ ಬಂದಾಗ ವ್ಯತಿರಿಕ್ತ ತೋರುವುದು. ವಾಗ ಆಲೆಮನೆಯಲ್ಲಿ ಸೇರುವ ಜನಸಂದಣಿಯಲ್ಲಿ "ವಿಶಿಷ್ಟ ಸ್ಪರ್ಶಿಸದ ಬ್ರಾಹ್ಮಣರು" ಎಂದು ಗಿಸಿಕೊಳ್ಳುವುದನ್ನು ಗಮನಿಸಬೇಕು.

ರ್ಮಿಕ ಶ್ರದ್ಧೆ ಮತ್ತು ನಿಸರ್ಗಾರಾಧನೆಯ ಒತ್ತಾಸೆ ಬೆರೆತುಕೊಂಡಿರುವ ಪಂಪಾಸರೋವರದ ವರ್ಣನೆಗೆ ಹೋಲಿಸಿದರೆ, ಇಲ್ಲಿ ಪ್ರಾಸಂಗಿಕವಾಗಿ ಮನುಷ್ಯ ಬದುಕಿನ ಚಿತ್ರಗಳು ಮತ್ತಷ್ಟು ಆಪ್ತವಾಗಿವೆ. ಚೆನ್ನಯ್ಯ, ಅಂಬಿಗರು, ಮುದುಕಮ್ಮ ಮುಂತಾ ಹಂಪಿಯ ಗುಡಿಯೊಳಗಣ ದೇವತಾ ವಿಗ್ರಹಗಳಿ ಹೆಚ್ಚು ಜೀವಂತವಾಗಿರುವರು. ಇದೀ ಕಥನದ ಂದರೆ, ಹರಿಹರನ ಮಾದಾರ ಚೆನ್ನಯ್ಯನ ರಗಳೆ ಎದ್ದುಬಂದಂತಿರುವ, ವಿರೂಪಾಕ್ಷ ಧಾರೆಗೆ ಸೇರಿದ ಚೆನ್ನಯ್ಯನು ಯಾತ್ರಿಕರಿಗೆ ಪಂಪಾದರ್ಶನಕ್ಕೆ ದರ್ಶಕ'ನಾಗುವುದು!

ಪಾಯಾತ್ರೆ'ಯ ಕಥನ ವಿನ್ಯಾಸದ ಮಹತ್ವ ಇರುವುದೇ ವಾಸ್ವಾಮಿಗಳಂತಿರುವ ನಾಗರಿಕ ಲೋಕದ ಯಾತ್ರಿಕರ ಲೋಕದ ಜತೆ, ಸ್ಥಳೀಕರ ಜೀವನಕ್ರಮವನ್ನು ತೆಯಲ್ಲೇ ಪರ್ಯಾಯವಾಗಿ ಮಂಡಿಸುತ್ತ ವುದರಲ್ಲಿ. "ಸುಡುಗಾಡು" ಎಂದು ಯಾತ್ರಿಕರು ಜಾಗದಲ್ಲಿಯೇ ಕಬ್ಬಿನರಸವು ಹಲ್ಲಿಗಿಳಿಯುವ ಹಾಡನ್ನು ಹಾಡುವ ಜನರು ಇಲ್ಲಿ ಬದುಕಿದ್ದಾರೆ ಸೂಚಿಸುತ್ತದೆ. ಯಾತ್ರಿಕರು ಹಾವುಚೇಳುಗಳಿಗೆ ದಿ ಚೆನ್ನಯ್ಯ "ಪಂಪಪ್ಪನನ್ನು ನಂಬಿ ನಿದ್ದೇಹೋಗಿ" ಅಭಯ ಕೊಡುತ್ತಾನೆ; ಯಾತ್ರಿಕರ ಹೆದರಿಕೆಗೆ ಬಡಿದುಕೊಂಡು" ನಗುತ್ತಾನೆ; ಅವನನ್ನು ಒಂದುಕಡೆ 'ಭಾಗ್ಯದೇವತೆ' ಎಂದು ಕರೆಯುವುದು ಕವಾಗಿದೆ. ತನಗೆ ದಣಿವಾಗಿದ್ದರೂ ಯಾತ್ರಿಕರಿಗೆ ರಲು ಬರುವ ಉದಾರತೆ ಪ್ರಕಟಿಸುತ್ತಾನೆ; ಅವರನ್ನು ಮಲ್ಲಿ ನಡೆಸಿಕೊಂಡು ಬರುವ ದಾರಿದೀಪವಾಗುತ್ತಾನೆ; ಳ ಜತೆ ಮಾವಿನಕಾಯಿ ಹಂಚಿಕೊಂಡು ತಿನ್ನುವ ಮಾದಿಯಾಗುತ್ತಾನೆ; ಬಡವನಾದರೂ ("ಅವನಿಗೇನು? ಅದೇ ಮನೆ-ಅದೇ ಆಯುಧ ಆ ದೊಣ್ಣೆ, ಆ ಜಂಖಾನವೇ ಸರ್ವಸ್ವ ಆಸ್ತಿ") ಯಾತ್ರಿಕರು ರುವ ಸಂಭಾವನೆ ಹಣವನ್ನು ನಿರಾಕರಿಸುವ ತನಾಗುತ್ತಾನೆ. ಯಾತ್ರಿಕರಿಗೂ ಅವರ ಆರಾಧ್ಯದೈವ ಗೂ ಸಾಧ್ಯವಾಗದೆ ಹೋದ ಅದ್ವೈತ ದರ್ಶನವನ್ನು ವೆ ನಿಜವಾದ ಯತಿಯಂತೆ ಕಾಣಿಸುತ್ತಾನೆ.

ಚೆನ್ನಯ್ಯನ ಪಾತ್ರವು ಯಾತ್ರಾಕಥನದ ಏಕಮುಖಿ ನೋಟವನ್ನು ಬದಲಿಸುತ್ತದೆ. ಈ ಮೂಲಕ ಆತಂಕ ಕೃತಕವೆಂದೂ ತೋರಿಸುತ್ತದೆ. ಅವರ ದ ಮೌಲ್ಯಮಾಪನ ಮಾಡುತ್ತ ಅವರ ಜೀವನ ಮಿತಿಯನ್ನು ಬಯಲುಗೊಳಿಸುತ್ತದೆ; ಇದು ವಾದ ವಿಜಯನಗರ ಮತ್ತು ವಿದ್ಯಾರಣ್ಯ ಕೇಂದ್ರಿತ ಹಂಪಿಯ ವರ್ತಮಾನದಲ್ಲಿರುವ ಜನರ ಬದುಕಿನ ಕ ಮಾಡಿರುವ ಪರೋಕ್ಷ ವಿಮರ್ಶೆಯೂ ಆಗಿದೆ.

ಗಲೂ ಹಂಪಿಗೆ ಬರುವ ನಾಗರಿಕ ಪ್ರವಾಸಿಗಳು ಭಗ್ನತೆಯನ್ನು ನೋಡಿ, ಅದರ ಹಿಂದಿನ ಗತಕಾಲದ ದುರಂತದ ಭಾರವನ್ನು ಹೊತ್ತುಕೊಂಡು ರುತ್ತಾರೆ; ಅವರು ಹಂಪಿಯ ಕಲ್ಲುಗುಡಿಗಳ ಸಿನಲ್ಲಿ ಇರುವ ನಿಸರ್ಗದ ಚೆಲುವನ್ನು ವುದು ಕಡಿಮೆ. ಅಲ್ಲಿನ ಪರಿಸರದಲ್ಲಿ ದುಡಿಮೆಗಾರ ಮಕಲು ಮಾಡುವ ಹೋರಾಟಕ್ಕೆ ಮಿಡಿಯುವುದು ಕಡಿಮೆ. ವಿದೇಶಿ ಪ್ರವಾಸಿಗರಿಗಾಗಿ ಹೆಮ್ಮೆಯಿಂದ ಳ್ಳಬಲ್ಲ ಈ ವಿಸ್ಟೆಟಿಕ್ಸ್ ಸ್ಥಳೀಯ ಪರಿಸರದಲ್ಲಿರುವ ಕೊಳಕರೆಂದೂ ದೇಶದ ಗೌರವ ಕಳೆಯುವ ವೆಂದೂ ಅಸಹಿಸುವುದೂ ಉಂಟು. ಈ ಪ್ರವಾಸಿಗ ಧರ್ಮಕ್ಕೆ ಮತೀಯವಾದಿ ಚರಿತ್ರೆಯ ದುಗುಡವೂ ದು ಅದೊಂದು ವಿಚಿತ್ರ ತತ್ವವಾಗಿದೆ.

ಪಾಯಾತ್ರೆ'ಯಲ್ಲಿ ಇಂತಹ ಪ್ರವಾಸಿ ದೃಷ್ಟಿಕೋನದ ಳಿಗಳಿವೆ. ಆದರೆ ಅದನ್ನು ದಾಟಬಲ್ಲ ಮತ್ತು ವಬಲ್ಲ ಜೀವನಚಿತ್ರಗಳನ್ನೂ ನಿಸರ್ಗದ ನೋಟಗಳೂ ದು ಸಾಧ್ಯವಾಗಿರುವುದು ಅದು ಸಾಹಿತ್ಯವಾಗಲೂ ವ ಕಾರಣದಿಂದ. ಇಂತಹ ಕಥನವಿನ್ಯಾಸವಿರುವ ದಲೇ, ವಿದ್ಯಾರಣ್ಯ ಕೇಂದ್ರಿತ ಕಥನವಾಗಲು 'ಪಂಪಾಯಾತ್ರೆ'ಯು ಚೆನ್ನಯ್ಯನನ್ನು ನಿಜವಾದ ನ್ನಾಗಿ ಹೊಮ್ಮಿಸಿಬಿಟ್ಟಿದೆ. ಹೀಗೆ ಹಲವು ಳನ್ನೂ ಬಹುಮುಖೀ ವಿನ್ಯಾಸವನ್ನೂ ಒಳಗೊಂಡಿ 'ಪಂಪಾಯಾತ್ರೆ'ಯು ಕೇವಲ ಪ್ರವಾಸಕಥನವೂ ಚರಿತ್ರೆಯ ವ್ಯಾಖ್ಯಾನವೂ ಅಲ್ಲದ ಸಾಂಸ್ಕೃತಿಕ ದೆ. ಇದರೊಳಗಿನ ಜೀವಂತ ಮನುಷ್ಯ ಬದುಕಿನ ಗತಕಾಲದ ಚರಿತ್ರೆಯ ಬಂಡೆಗಲ್ಲುಗಳ ರ್ಜೀವಗೊಳಿಸ ಬದುಕಿನ ತುಂಗಭದ್ರೆ ನಿರಂತರ ಪಂತ ಕಾಣುತ್ತದೆ. ಇದು ಸಾಹಿತ್ಯದ ಆಗಿದೆ. ■



ವಿಸ್ಮಯ ಕಲೆ

ಕತೆ


ಇಂಗ್ಲಿಷ್ ಮೂಲ- ವೆಂಡಿ ರಾಬರ್ಟ್‌ಸನ್

ಕನ್ನಡಕ್ಕೆ-ಪಾರ್ವತೀಶ

ಆ ಕಲಾವಿದನ ಬಗ್ಗೆ ಎಲ್ಲೆಲ್ಲೂ ಬಹಳ ಭರವಸೆಯ ಮಾತುಗಳು ಕೇಳಿಬರುತ್ತಿದ್ದವು. ಅವನು ಈ ಪೀಳಿಗೆಯ ವೆಲಾಸ್‌ಕ್ವೆಜ್ ಎಂದು ಹೆಸರು ಪಡೆದಿದ್ದ. (ವೆಲಾಸ್‌ಕ್ವೆಜ್ 16 ನೇ ಶತಮಾನದ ಪ್ರಖ್ಯಾತ ಸ್ಪಾನಿಷ್ ಪೈಂಟರ್) ಅವನ ಕಲಾಕೃತಿಗಳಲ್ಲಿ ಬೆಳಕು ಮತ್ತು ಸಂಕೇತಗಳ ನಿರ್ವಹಣೆ ಎಷ್ಟು ಸೊಗಸಾಗಿರುತ್ತಿದ್ದೆಂದರೆ, ಆ ಶತಮಾನದಲ್ಲೇ ಯಾವ ಕಲಾವಿದನೂ ಅವನ ಮಟ್ಟಕ್ಕೆ ಬರಲಾಗಿರಲಿಲ್ಲ. ಯುವಕನಾಗಿದ್ದಾಗಲೇ ಆತ ತನ್ನನ್ನು ಕಲಾವಿದನನ್ನಾಗಿ ರೂಪಿಸಿದವರನ್ನು ಜೊತೆಗೆ ಶಿಕ್ಷಕರನ್ನು ತನ್ನ ಪ್ರತಿಭೆಯಿಂದ ಬೆರಗುಪಡಿಸಿದ್ದ. ಅದರಿಂದಾಗಿಯೇ ಪರೀಕ್ಷೆಗಳೆಂಬ ಗೊಡವೆಗಳಿಗೆ ಸಿಲುಕಿಸದೆಯೇ ಅವನನ್ನು ಉತ್ತೀರ್ಣಗೊಳಿಸಿ ಕಲಾಶಾಲೆಯಿಂದ ಬೀಳ್ಕೊಡಲಾಗಿತ್ತು. ನಂತರ ಆ ಯುವ ಕಲಾವಿದ ಸಮುದ್ರ ತೀರವೊಂದರ ಬಳಿ ಮರದ ತೊಗಟೆಗಳ ಚಿಕ್ಕ ಗುಡಿಸಲೊಂದನ್ನು ಕಟ್ಟಿಕೊಂಡು ಚಿತ್ರ ಬಿಡಿಸಲು ಬೇಕಾದ ಪರಿಕರ ಹಾಗೂ ಮರದ ಚೌಕಾಕಾರದ ಫ್ರೇಮ್‌ಗಳನ್ನು ಸಿದ್ಧಪಡಿಸಿಕೊಂಡು ಅಲ್ಲೇ ನೆಲೆಸಿಬಿಟ್ಟ. ಅವನ ಚಮತ್ಕಾರ ಪೂರಿತ ಇಂದ್ರಿಯಗೋಚರ ಕೌಶಲ್ಯದಿಂದ ನಗರವೊಂದು ಶೋಕಿಸುತ್ತಿರುವಂತೆ ಕಾಣುವ ಅಥವಾ ಇನ್ನೊಂದು ರೀತಿಯಲ್ಲಿ ಹೇಳಬೇಕೆಂದರೆ ಸಮುದ್ರದ ಅಲೆಗಳಿಂದ ಮತ್ತು ಬೆಳಕಿನ ಕಿರಣಗಳಿಂದ ತೋಯ್ದಿರುವಂತೆ ಭಾಸವಾಗುವ ಚಿತ್ರಗಳನ್ನು ರಚಿಸಿದ.

ಇಷ್ಟಕ್ಕೂ ಅವನಿಗೆ ಬೇಕಿದ್ದದ್ದು ಊಟ, ಬಣ್ಣದ ಖರ್ಚಿಗಾಗುವಷ್ಟು ಸಣ್ಣ ಮೊತ್ತದ ಹಣ ಮಾತ್ರ. ಅದನ್ನು ನ್ಯಾಷನಲ್ ಮ್ಯೂಸಿಯಂ ಭರಿಸುತ್ತಿತ್ತು. ತನ್ನ ಕಲಾಕೃತಿಗಳನ್ನು ಮಾರಿಕೊಳ್ಳುವುದೆಂದರೆ ತನ್ನ ಆತ್ಮಚೈತನ್ಯವನ್ನೇ ಕತ್ತರಿಸಿ ಕೊಟ್ಟಂತಾಗಿ ಮುಂದೆ ತಾನು ಚಿತ್ರ ಬಿಡಿಸಲಾರೆನೇನೊ ಎಂಬ ಅಳುಕು ಅವನಿಗಿತ್ತು.

ಹೀಗೇ ಹತ್ತು ವರ್ಷ ಅವನ ಬದುಕು ಸಮುದ್ರ ತೀರದ ತೊಗಟೆಯ ಮನೆಯಲ್ಲೇ ಸಾಗಿತು. ಅವನ ಕಲಾಕೃತಿಗಳಂತೂ ಬರುಬರುತ್ತಾ ಶ್ರೇಷ್ಠ ಕಲ್ಪನೆಗಳನ್ನು ಸೋಸಿ ತೆಗೆದಂತೆಯೂ, ಜೊತೆಗೆ ಅಮೂರ್ತವಾಗುತ್ತಲೂ ಹೋದವು. ಆದರೇನು ಅವು ಎಷ್ಟೇ ಅಮೂರ್ತವಾಗಿದ್ದರೂ ಕೂಡ ಕಲಾವಿದನ ಗ್ರಹಿಕೆ ಹಾಗೂ ಅಭಿವ್ಯಕ್ತಿಗಳು ಸಾಮಾನ್ಯ ಜನರಿಗೆ ಕೊನೆಗೆ ವಿದ್ಯೆಯ ಗಂಧವೇ ಇರದವರಿಗೂ ಅರ್ಥವಾಗತೊಡಗಿದವು. ಅವು ತಮಗೇ ಸಂಬಂಧಿಸಿದ್ದು ಎನ್ನುವ ಅನುಭವ ಅವರಿಗಾಗತೊಡಗಿತು.



ಅವನ ಪೇಂಟಿಂಗ್‌ಗಳನ್ನು ನೋಡಲು ನ್ಯಾಷನಲ್ ಮ್ಯೂಸಿಯಂಗೆ ಬರುತ್ತಿದ್ದ ಜನ ಹಿಂತಿರುಗುವಷ್ಟರಲ್ಲಿ ಎಂತದ್ದೋ ಹೇಳಲಾಗದ ಪ್ರಭಾವಕ್ಕೆ ಸಿಕ್ಕಂತಾಗಿ ಬದಲಾಗುತ್ತಿದ್ದರು. ಮನೆಗಳಲ್ಲಿ ಪತ್ನಿಯೊಂದಿಗೆ ಮೃದು ಮಾತುಗಳನ್ನಾಡುತ್ತಾ ಮಕ್ಕಳೊಂದಿಗೆ ಉಲ್ಲಾಸದಿಂದಿರತೊಡಗುತ್ತಿದ್ದರು. ರಸ್ತೆ ಬದಿ ಹೂಗಿಡಗಳನ್ನು ನೆಟ್ಟು ಬೆಳೆಸುವ, ಜಗತ್ತನ್ನೇ ಸುಂದರಗೊಳಿಸುವ ಇರಾದೆ ಅವರಲ್ಲಿ ವ್ಯಕ್ತವಾಗತೊಡಗಿದವು.

ಈ ಕಲಾವಿದ ಇಡೀ ದೇಶದ ಅಮೂಲ್ಯ ಆಸ್ತಿ ಎಂಬಂತಾಗಿ ಹೋದ. ಹೀಗಿರುವಾಗ ಒಂದು ದಿನ ಕಲಾವಿದನಿಗೆ ಒಬ್ಬ ನಲ್ಲಿ ಕೆಲಸದವನ ಅಗತ್ಯ ಬಂತು. ಹಾಗೆ ಬಂದು ಕಲಾವಿದನ ಕುಟೀರದಲ್ಲೊಂದು ಸ್ನಾನಕ್ಕೆ ವ್ಯವಸ್ಥೆ ಮಾಡಿಕೊಟ್ಟ ನಲ್ಲಿ ಕೆಲಸದವ ಕಲಾವಿದನ ಬದುಕಿನಲ್ಲಿ ಅನಿರೀಕ್ಷಿತ ತಿರುವುಗಳಿಗೆ ಕಾರಣನಾಗಿ ಹೋದ. ಕಲೆಗೆ ಬೆಲೆ ಹೇಗೆ ಕಟ್ಟುವುದೆಂಬ ಜಿಜ್ಞಾಸೆ ಹುಟ್ಟುವ ಘಟನೆಗಳನ್ನು ಎಳೆತಂದ.

ಏನಾಯಿತೆಂದರೆ ತೆಳು ಭುಜ, ಆಳ ಕಣ್ಣುಗಳಿದ್ದ ಆ ಕೆಲಸಗಾರ ಕಲಾವಿದನಿಗೆ ಇಷ್ಟವಾಗಿ ಹೋದ. ಕೊನೆಗೆ ಅದು ಯಾವ ಮಟ್ಟಕ್ಕೆ ಹೋಯಿತೆಂದರೆ ನಲ್ಲಿ ಕೆಲಸದವ ತನ್ನ ಮೂವರು ಪುಟ್ಟ ಮಕ್ಕಳೊಂದಿಗೆ ಕಲಾವಿದನ ಕುಟೀರಕ್ಕೇ ಬಂದು ನೆಲೆಸಿಬಿಟ್ಟ. ಮಕ್ಕಳ ಒಟನಾಟ ಕಲಾವಿದನಲ್ಲಿ ಇನ್ನಷ್ಟು ಉಲ್ಲಾಸ ಮೂಡಿಸಿತು. ಅವನು ಪುಟ್ಟ ಜೀವಗಳ ಚಿತ್ರ ಬಿಡಿಸತೊಡಗಿದ. ಸಮುದ್ರದ ಅಲೆಗಳೊಂದಿಗೆ ಆಡುವ, ಕುಣಿಯುವ ಮಕ್ಕಳ ವರ್ಣರಂಜಿತ ಹೊಸ ಕಲಾಕೃತಿಗಳು ಜನರಲ್ಲಿ ಸಂಭ್ರಮ ಮೂಡಿಸಿದವು. ಮುಂಬರುವ ದಿನಗಳು ಹೊಸ ಭರವಸೆ, ಸಂತೋಷ ತರಲಿವೆ ಎಂದು ಅವರು ಭಾವಿಸಿದರು.

ಆಗೊಂದು ದುರಂತ ಘಟಿಸಿತು. ಚಂಡಮಾರುತವೊಂದು ಅಪ್ಪಳಿಸಿ ಕಲಾವಿದನ ಕುಟೀರ ಮುರಿದು ಬಿತ್ತು. ತನ್ನ ಮಕ್ಕಳು ಹಾಗೂ ಕಲಾವಿದನನ್ನು ಸಾವಿನ ದವಡೆಯಿಂದ ರಕ್ಷಿಸಿದ ನಲ್ಲಿ ಕೆಲಸದವ ಪ್ರಾಣ ಕಳೆದುಕೊಂಡ.

ತನ್ನ ಕಲೆ ಹಾಗೂ ಅದರ ಶುದ್ಧತೆಯ ಬಗ್ಗೆ ಮಾತ್ರ ಕಾಳಜಿಯಿಂದಿದ್ದ ಕಲಾವಿದನಿಗೆ ಜೀವನದಲ್ಲಿ ಮೊದಲ ಬಾರಿಗೆ ತನ್ನ ದತ್ತು ಮಕ್ಕಳ ಯೋಗಕ್ಷೇಮದ ಬಗ್ಗೆ ಯೋಚಿಸಬೇಕಾಗಿ ಬಂತು.

ಆಗ ಒಬ್ಬ ಶ್ರೀಮಂತ ರಷ್ಯನ್ ವ್ಯಕ್ತಿ ಕಾಣಿಸಿಕೊಂಡ. ತಾನು ಬಯಸಿದ ಒಂದು ಕೆಲಸ ಮಾಡಿಕೊಟ್ಟರೆ ಕಲಾವಿದನ ಮನೆ ಸರಿಪಡಿಸಿ ಮಕ್ಕಳ ಜೀವನಕ್ಕೂ ನೆರವು ಕೊಡುವುದಾಗಿ ಹೇಳಿದ.

ಕಲಾವಿದನಿಗೆ ಆಶ್ಚರ್ಯವಾಯಿತು.

"ನನ್ನಿಂದ ನಿಮಗೆ ಏನಾಗಬೇಕು?" ಅಂದ.

"ಏನಿಲ್ಲ, ನನ್ನ ಮಗಳು ಮದುವೆಯಾಗುವ ದಿನ ನೀನು ರಚಿಸಿರುವ ಅವಳ ಕಲಾಕೃತಿಯೊಂದು ಪ್ರದರ್ಶನವಾಗಬೇಕು, ಅದು ಅದ್ಭುತವಾಗಿರಬೇಕು" ಅಂದ ರಷ್ಯನ್ ಸಾಹುಕಾರ.

ಅಲ್ಲಿಯವರೆಗೂ ತನ್ನ ಹೃದಯಕ್ಕೆ ಹತ್ತಿರವಾದ ಚಿತ್ರಗಳನ್ನಷ್ಟೇ ಬಿಡಿಸುತ್ತಿದ್ದ ಕಲಾವಿದ ಕಮಿಷನ್ ಕೆಲಸ ಒಪ್ಪಿಕೊಂಡು ಎಂದೂ ಚಿತ್ರ ಬಿಡಿಸಿರಲಿಲ್ಲ.

ಆದರೆ ಮಕ್ಕಳಿಗೊಂದು ನೆಲೆ ಬೇಕಿತ್ತಲ್ಲ? ಹಾಗಾಗಿ 'ಆಗಲಿ' ಎಂದುಬಿಟ್ಟ. ಮಕ್ಕಳನ್ನು ಪರಿಚಿತ ಮೀನುಗಾರರ ಮನೆಯಲ್ಲಿ ಬಿಟ್ಟು ಮದುವೆಗೆ ಸಿದ್ಧಳಾಗುತ್ತಿದ್ದ ವಧುವಿನ ಶ್ರೀಮಂತ ಮನೆಗೆ ಹೋಗಿ ತಲುಪಿದ.

ಆ ಹುಡುಗಿ ಕಲಾವಿದನನ್ನು ಸಂಭ್ರಮದಿಂದ ಬರಮಾಡಿಕೊಂಡಳು. ತನ್ನ ಹೊಸ ಬಟ್ಟೆ, ಆಭರಣಗಳನ್ನೆಲ್ಲಾ ತೋರಿಸಿದಳು. ಅವಳ ಅತ್ಯಪೂರ್ವ ಸೌಂದರ್ಯ ಕಲೆಯಾಗಿ ಮೂಡಿಬರಬೇಕಲ್ಲ...

ಆ ಸುಂದರಿ ಈ ಪ್ರಖ್ಯಾತ ಕಲಾವಿದನಿಂದ ವಿಪರೀತ ನಿರೀಕ್ಷೆ ಇರಿಸಿಕೊಂಡಿದ್ದು ಖಚಿತವಾಗಿತ್ತು.

ಕಲಾವಿದ ತನ್ನ ಕೆಲಸ ಆರಂಭಿಸಿದ. ನವವಧು ಖುದ್ದಾಗಿ ಏಳು ಸಾರಿ ಬಂದು ವಿಭಿನ್ನ ಭಂಗಿಗಳಲ್ಲಿ ಕೆಲಕಾಲ ನಿಂತು ಹೋದಳು. ಅವಳ ಸೌಂದರ್ಯ ಅಸಾಮಾನ್ಯವಾಗಿತ್ತು. ಹಣಕ್ಕಾಗಿ ಕೇವಲ ಹಣಕ್ಕಾಗಿ ಆ ಕಲಾಕೃತಿಯನ್ನು ರೂಪಿಸುತ್ತಿರುವಾಗ ಕಲಾವಿದನ ಮನಸ್ಸು ಬಹಳ ಸಾರಿ ಚಂಚಲಗೊಳ್ಳುತ್ತಿತ್ತು. ಅವಳ ಸಾಮೀಪ್ಯ ಭಾವಭಂಗಿಗಳು ಅವನ ಏಕಾಗ್ರತೆಯನ್ನು ಚಿಂದಿಯೆಬ್ಬಿಸುತ್ತಿದ್ದವು. ಒಮ್ಮೆ ಆ ಹುಡುಗಿ "ನನ್ನ ಚಿತ್ರ ಅತ್ಯದ್ಭುತವಾಗಿ ಮೂಡಿಬರಬೇಕು. ಅದಕ್ಕಾಗಿ ನಾನೇನು ಬೇಕಾದರೂ ಕೊಡಬಲ್ಲೆ" ಎಂದಳು.

ಅವಳ ಮಾತಿನ ಅರ್ಥ ಸ್ಪಷ್ಟವಾಗಿತ್ತು.

ಅಲ್ಲಿಂದಾಚೆಗೆ ಆ ಸುಂದರಿ ಕಲಾವಿದನ ಕೋಣೆಯಲ್ಲಿ ಹೆಚ್ಚುಕಾಲ ಇರತೊಡಗಿದಳು. ಆ ಬೃಹತ್ ಬಂಗಲೆಯಲ್ಲಿದ್ದ ಚಕ್ರವರ್ತಿ ಲೂಯಿಸ್ ಕಾಲದ ಸುಂದರ ಕುರ್ಚಿಯೊಂದನ್ನು ಗಮನಿಸಿದ ಕಲಾವಿದ ಅದನ್ನು ತರಿಸಿ ಹುಡುಗಿಯನ್ನು ಸದಾ ಅಲ್ಲೇ ಕುಳಿತಿರುವಂತೆ ಬೇಡಿಕೊಂಡ.

ಹುಡುಗಿ ಕುರ್ಚಿಯಲ್ಲಿ ಕುಳಿತಿರುವ ಭಂಗಿಯ ಚಿತ್ರ ರಚನೆ ಮುಂದುವರೆಯಿತು. ಅತ್ತ ಸಮುದ್ರ ತೀರದ ಅವನ ಮನೆ ರಿಪೇರಿಯಾಗಿ ಸಿದ್ಧಗೊಳ್ಳುವ ಹೊತ್ತಿಗೆ ಇತ್ತ ಕಲಾಕೃತಿಯೂ ಪೂರ್ಣವಾಯಿತು.

ಆದರೆ ಮದುವೆಯ ದಿನದವರೆಗೂ ಚಿತ್ರವನ್ನು ಯಾರಿಗೂ ತೋರಿಸಲಾರೆ ಎಂದುಬಿಟ್ಟ ಕಲಾವಿದ.

ಕೊನೆಗೂ ಮದುವೆಯ ದಿನ ಬಂದೇ ಬಂತು. ರಷ್ಯನ್ ಶ್ರೀಮಂತನಿಗೆ ವಧು-ವರ, ಅಲ್ಲಿ ಸೇರಿದ್ದ ಎಲ್ಲಾ ಅತಿಥಿಗಳಿಗೂ ಒಂದೇ ಕುತೂಹಲ. ತಮ್ಮ ಕಾಲದ ಮಹಾನ್ ಕಲಾವಿದನೊಬ್ಬ ರಚಿಸಿರುವ ಆ ಚಿತ್ರ ಹೇಗಿದ್ದೀತು ಎಂಬ ತವಕ.

ಮದುವೆ ಸಮಾರಂಭಕ್ಕೆ ಕಲಾವಿದನ ದತ್ತು ಮಕ್ಕಳೂ ಬಂದಿದ್ದಾರೆ. ಆರೋಗ್ಯದಿಂದ ಪುಟಿಯುತ್ತಿದ್ದ ಆ ಮಕ್ಕಳನ್ನು ನೋಡಿದವರಿಗೆ ರಷ್ಯನ್ ಶ್ರೀಮಂತನ ಔದಾರ್ಯ ಜೊತೆಗೆ ಆ ಕಲಾಕೃತಿ ಬಗ್ಗೆ ಅವನೆಷ್ಟು ಆಕಾಂಕ್ಷೆ ಹೊಂದಿದ್ದನೆಂಬುದು ತಿಳಿಯುತ್ತಿತ್ತು. ಎಲ್ಲರ ನಗು, ಹರಟೆ, ಉಲ್ಲಾಸಮಯ ಘಳಿಗೆಯಲ್ಲಿ ರಷ್ಯನ್ ಶ್ರೀಮಂತ ತೆರೆ ಮುಚ್ಚಿದ್ದ ಆ ಬಹು ನಿರೀಕ್ಷಿತ ಕಲಾಕೃತಿಯ ಬಳಿಗೆ ಬಂದ. ನವ ವಧು-ವರನೂ ಸಮೀಪ ಬಂದರು. ಆ ಕಲಾಕೃತಿ ಇರಿಸಿದ್ದ ಸ್ಟ್ಯಾಂಡಿನ ಸುತ್ತಲೂ ಜನ ನೆರೆದರು.

ಒಬ್ಬ ಆ ಕಲಾವಿದ ಮಾತ್ರ ತಣ್ಣಗಿದ್ದ. ಅವನ ಮುಖ-ಕಣ್ಣುಗಳಲ್ಲಿ ಯಾವ ಭಾವನೆಗಳೂ ಕಾಣುತ್ತಿರಲಿಲ್ಲ.

ಕೊನೆಗೂ ಆ ಸುವರ್ಣ ಗಳಿಗೆ ಬಂತು. ಹೆಮ್ಮೆ ಮತ್ತು ದರ್ಪದಿಂದ ತುಂಬಿದ್ದ ರಷ್ಯನ್ ಶ್ರೀಮಂತ ಕಲಾಕೃತಿಯ ತೆರೆ ಸರಿಸಿದ.

ಅಷ್ಟೆ....

ಮರುಕ್ಷಣ ಚೂರಿಯೇಟಿಗೆ ತುತ್ತಾದವನಂತೆ ಶ್ರೀಮಂತ ರಷ್ಯನ್ ಸಣ್ಣಗೆ ನರಳಿದ. ವರ ಬರಿದೇ ಲೊಚಗುಟ್ಟಿದರೆ ಚಿತ್ರ ನೋಡಿದ ಕೂಡಲೇ ಆ ಲೋಕಸುಂದರಿ ಮೂರ್ಛೆ ಹೋದಳು.

ತಬ್ಬಿಬ್ಬಾದ ಜನ ಏನಾಯಿತೆಂದು ಅರ್ಥವಾಗದೆ ಒಮ್ಮೆಗೆ ಮುಗಿಬಿದ್ದು ಆ ಬಹುಚರ್ಚಿತ ಕಲಾಕೃತಿಯತ್ತ ನೋಡಿದರು.

ಅಲ್ಲೊಂದು ಕುರ್ಚಿ... ಖಾಲಿ ಕುರ್ಚಿ ಮಾತ್ರ ಇತ್ತು. ■

ಅವ್ರುನ ಮನೆ ಪಾರ್ಟಿಗೆ ಅವ್ರುನ ಮಗನೇ ಅಧ್ಯಕ್ಷನಂತೆ

ಕನ್ನಡಕ್ಕೆ ಶಾಸ್ತ್ರೀಯ ಭಾಷೆಯ ಸ್ಥಾನಮಾನ ಸಂದ ಬಗ್ಗೆ ಉಗ್ರಿಯಷ್ಟೇ ಉತ್ಸಾಹದಿಂದ ಅವನ ಜೊತೆಯಿದ್ದವರು ಇರಲಿಲ್ಲ, ಆದ್ದರಿಂದ ಅವರಿಗೆ ಯಾವ ರೀತಿ ವಿವರಿಸಿ ಹೇಳುವುದೆಂದು ಅವನಿಗೂ ಗೊತ್ತಿರಲಿಲ್ಲ, ಆ ಬಗ್ಗೆ ಅವನೂ ಕೂಡ ಎಡೂರಪ್ಪನಷ್ಟೇ ತಿಳಿದುಕೊಂಡಿದ್ದರಿಂದ ಅದನ್ನ ವಿವರಿಸಿ ಹೇಳಲು ಯತ್ನಿಸುತ್ತಾ

ಹಳ್ಳಿ ಸೀಮೆಯ ಕಟ್ಟೆಪುರಾಣ

ಬಿ. ಚಂದ್ರೇಗೌಡ

"ಅಂತೂ ಕನ್ನಡ ಭಾಷೆಯ ಶಾಸ್ತ್ರೀಯ ಭಾಷೆ ಅಂತ ಮಾಡಿದ್ರು ಕಣಮಾವ" ಎಂದ.

"ಶಾಸ್ತ್ರಿ ಭಾಷೆ ಅಂದ್ರೇನ್ಲ?"

"ಶಾಸ್ತ್ರಿ ಭಾಷೆ ಅಂದ್ರೆ ಪುರಾತನ ಕಾಲದ ಭಾಷೆ. ಹಳೆದಕ್ಕೆಲ್ಲ ಗೌರವ ಕೊಡಬೇಕು ಅನ್ನೊ ಲೆಕ್ಕದಲ್ಲಿ ಕನ್ನಡಕ್ಕೂ ಗೌರವ ಕೊಟ್ರು."

"ಅದಕು ಮದ್ಲು ಗೌರವ ಇರಲಿಲ್ವೆ?"

"ಇರೋ ಗೌರವ ಇತ್ತು ಕಣಮಾವ. ಕೇಂದ್ರದಲ್ಲಿ ಆಗ ಇದ್ದ ಬಿಜೆಪಿ ಸರ್ಕಾರ ತಮಿಳಿಗೆ ಅಂತ ಗೌರವ ಕೊಟ್ಟಿತ್ತು, ಆಗಿನಿಂದ ಕರ್ನಾಟಕದೋರು ನಮಿಗೂ ಕೊಡಿ ಅಂತ ರಚ್ಚೆ ಹಿಡದಿದ್ರು."

"ರಚ್ಚೆ ಹಿಡಿದಿದ್ದೋರ್ಯಾರ್ಲ?" ಎಂದಳು ಜುಮ್ಮಿ.

"ಜವರೇಗೌಡ್ರು ಕಣೇ. ನೀನೇನಾರ ಶಾಸ್ತ್ರಿ ಭಾಷೆ ಮಾಡಲಿಲ್ಲ ಅಂದ್ರೆ ಉಪಾಸಯಿದ್ದು ಸತ್ತೋಯ್ತಿನಿ ಅಂತ ಕುಂತಿದ್ರು. ಆಗ ಯಾರ್‍ಯಾರೊ ಹೋಗಿ 'ಅಕಸ್ಮಾತ್ ಶಾಸ್ತ್ರಿ ಭಾಷೆ ಮಾಡಲಿಲ್ಲ ಅಂದ್ರೆ ಸಾಯೋರು ನೀವೆಯ ಸಾರ್. ಅಂಗ್ಯಲ್ಲ ಮಾಡಿಬಾಡಿ' ಅಂತ ಇಡ್ಲಿ ತಿನ್ನಿಸಿ, ಯಾಳ್ನೀರು ಕೊಟ್ಟು ಉಳಿಸಿಗಂಡಿದ್ರು" ಎಂದ ಉಗ್ರಿ.

"ಎಡೂರಪ್ಪ ಡೆಲ್ಲಿಗೇ ವಂಟಬುಟ್ಟಿದ್ನ" ಎಂದ ಸೀರ.

"ಅವುನು ವಂಟಿದ್ದು ಯಾಕೆ ಗೊತ್ತೇನೊ ಮಾವ? ಕನ್ನಡ ರಾಜ್ಯೋತ್ಸವದ ಟೈಮಿಗೆ ಯಂಗಿದ್ರು ಶಾಸ್ತ್ರಿ ಭಾಷೆ ಮಾಡ್ತರೆ ಅಂತ ಅವುನಿಗೆ ಯಾರೊ ಹೇಳಿದ್ರಂತೆ. ಅದ್ಕೆ ಇವುನು ಅದಕಿಂತ ಮದ್ಲೆ ಹೋಗಿ ಗಲಾಟೆ ಮಾಡಿದ್ರೆ ಅದರ ಲಾಭ ನನಿಗೇ ಬತ್ತದೆ ಅಂತ ವಂಟಿದ್ದ. ಇವುನು ರಡಿಯಾಯ್ತಿದ್ದಂಗೆ ಕಾಂಗ್ರೆಸ್ಸಿನೋರು ಕೊಟ್ಟೇಬುಟ್ರು ಅತ್ತಗೆ."


"ಈಗೇನಂತನೆ ಎಡೂರಪ್ಪ?"

"ಏನಾರ ಅನ್ನಕ್ಕೋದ್ರೆ ತೆಲುಗು ಭಾಷೆಗೂ ಕೊಟ್ರಲ್ಲ ಅದಕೇನೇಳ್ತಿ ಅಂತರೆ. ಅದ್ಕೆ ಅತ್ಲಗೆ ಸುಮ್ಮನವುನೆ."

"ಶಾಸ್ತ್ರಿ ಭಾಷೆ ಮಾಡಿಸಿದ್ದೋನು ಅಂಬುರೀಸಂತಲ್ಲಾ?" ಎಂದಳು ಜುಮ್ಮಿ.

"ಯಾರೇ ಅಂಗಂದೋರು?"

"ಪಂಚಾತಿಲೇ ಅಂಗಂತಿದ್ರು. ನೀವು ಸಾಸ್ತ್ರಿ ಭಾಸೆ ಮಾಡಲಿಲ್ಲ ಅಂದ್ರೆ ರಾಜೀನಾಮೆ ಬರಿತಿನಿ ಅಂತ ಹೇಳಿದ್ನಂತೆ. ಅವುರು ಮಾಡಲಿಲ್ಲವಂತೆ. ಅದ್ಕೆ ರಾಜೀನಾಮೆ



ಬರದು ಬಂದಿದ್ನಂತೆ" ಎಂದು ಜುಮ್ಮಿ ಬೀಗಿದಳು.

"ಅವ್ರುನ ರಾಜಕಾರಣದಲ್ಲಿ ಅದೂ ಸೇರಿತ್ತೇನೊ, ಅದ್ಕೆ ರಾಜೀನಾಮೆ ಬರಿಲಿಲ್ಲ ತಗೊ."

"ಇನ್ಯಾತಕ್ಕೆ ರಾಜೀನಾಮೆ ಬರದು ಕೊತಿದ್ನಲ್ಲ ಅವ್ರುನು?"

"ಈ ಕಾವೇರಿ ಗಲಾಟೆ ಅವ್ರುನ್ನ ಯಾವತ್ತೂ ಆಡುಸ್ತ ಅದೆ ಕಣೊ. ಹಾಳಾದೋನು ... ಬೆಂಗಳೂರಿಗಾರ ಹೋಗಿ ರಾಜಕೀಯ ಮಾಡಿದ್ರೆ ಕೇಂದ್ರದ ಮಂತ್ರಿಯಾಗಿ ಮ್ಯರಿಯೋನು. ಹೇಳಿದ ... ಮಾಡೋನು. ಇವತ್ತು ಕೇಂದ್ರದಲ್ಲಿ ಒಬ್ಬನೇ ವಬ್ಬ ... ಮಂತ್ರಿಯಿಲ್ಲ."

"ಯಾಕೆ ಮುನಿಯಪ್ಪವುನಲ್ಲ..." ಎಂದುಕೊಂಡು ವಾಟಿಸ್ಸೆ ಹಾಜ...

"ಆಹ, ಏನು ಮುನಿಯೆಪ್ಪ... ಬೂಕನ ಬ್ಯಟ್ಟದ ಜಾತ್ರೆಲಿ ದನಿನ ... ಯಾಪಾರದ ದಳ್ಳಾಳಿಯಂಗವುನೆ. ... ಕಾಂಗ್ರೆಸ್ಸಿನವು ಅಂಥೋರನು ಮ... ಮಾಡಿ ಕರ್ನಾಟಕದಲ್ಲಿ ಕಾಂಗ್ರೆಸ್... ಕಳಕುತ್ತಾ ಅವೆ."

"ಹೋಗ್ಲಿ ಬುಡೊ, ಐದೊ... ಆಳಿ ಸುಸ್ತಾಗ್ಯವುರೆ, ರೆಸ್ಟು ತಗಳ್ಲಿ..."

"ಕೇಂದ್ರದಲ್ಲಿ ರೆಸ್ಟು ತಗಳ್ಲಿ ... ಕಣೊ ಉಗ್ರಿ, ಇಲ್ಲೇಳು? ಇಲ್ಲೇ... ಯಲಕ್ಸನ್ ಆದ್ರೆ ಯಂಬತ್ತು ಸಿ... ಬದ್ಲು ಅರವತ್ತು ಸೀಟಿಗೆ ಭತ್ತವೆ..."


"ಅದ್ಯಂಗ್ಲ?"

"ಅದ್ಯಂಗೆ ಅಂದ್ರೆ, ಅವುರು ಗೆಲ್ಲೊ ಸೀಟು ಜೆಡಿ... ಪಾಲಾಯ್ತವೆ. ಆಗ ಜೆಡಿಎಸ್ಸೇ ಜಾಸ್ತಿ ಸೀಟು ತ... ಕಾಂಗ್ರೆಸ್ ಮುಗುಸ್ತವೆ."

ಆಹಾ! ನೋಡಿರಿ ಮಂಡ್ಯದ ಸಾಮೂಹಿಕ ವೃತ್ತಾಂತವ

ಮಂಡ್ಯದ ಜನ ಅದ್ದೂರಿ ಮದುವೆ, ಭರ್ಜರಿ ತಿಥಿ ಮಾಡಿ ನೆಲಹತ್ತುತ್ತಿದ್ದಾರೆ ಎಂದು ಬಲ್ಲವರು ಹೇಳುತ್ತಾರೆ. ಛೇ ಇದನ್ನ ತಡೆಯಬೇಕೂಂತ ತಿಳಿದವರು ಸರಳ ವಿವಾಹಕ್ಕೆ ಗಂಟುಬಿದ್ದರು. ಇದು ಒಂದು ಚಳವಳಿ ರೂಪಾನೆ ಪಡಕಂತು. ಕ್ರಮೇಣ ಚಾಣಾಕ್ಷ ಗಂಡುಗ್ಗಳು ತಲೆ ಎತ್ತಿದ್ರೊ. 'ನಾವೇನೋ ಆಗೋದು ಸರಳ ವಿವಾಹನೇ. ಆದರೆ ಮಾಮೂಲಿ ಮದುವೆಗೆ ಖರ್ಚು ಮಾಡುತ್ತಿದ್ದರಲ್ಲ ಅದ ನಮಗೆ ಕೊಟ್ಟುಬಿಡ್ಲಿ' ಅನ್ನೋ ವರಸೆ ಒಡ್ಡಿದರು. ಎಂತಹ ಮದುವೆ ಮಾಡಿದರೂ ಹೆಣ್ಣೆತ್ತವರ ತಲೆ ಬೋಳಾಗೋದು ಖಾತರಿ ಆಯ್ತು. ಇದನ್ನೆಲ್ಲ ವಾರೆಗಣ್ಣಿನಲ್ಲೇ ನೋಡ್ತಿದ್ದ ದಂಡಿಯಾಗಿ ಹಣ ಮಾಡಿದ್ದ ರಾಜಕಾರಣಿಗಳು ಜನಪ್ರಿಯತೆ ಗಳಿಸಿಕೊಳ್ಳೋಕ್ಕೆ ಇದೇ ಸರಿಯಾದ ಸಮಯ ಅಂತಾವ 'ಸಾಮೂಹಿಕ ವಿವಾಹ' ಮಾಡಾಕೆ ಶುರು ಹಚ್ಚಿಕೊಂಡರು. ಪ್ರಸಿದ್ಧ ಮಠದ ಮುಖ್ಯಸ್ಥರು, ಮಂತ್ರಿವರ್ಯರ ಸಾಮೀಪ್ಯದಲ್ಲಿ ಮದುವೆಯಾಗ್ತೀವಲ್ಲ, ಹಣದ ಹಂಗಿಲ್ಲವಲ್ಲ ಅಂತಾವ ನೂರಾರು ಜೋಡಿಗಳೂ ಇದಕ್ಕೆ ಸಿದ್ಧವಾಗಿರುತ್ತಿದ್ದ. ಒಂದೊಂದು ಸಲ ಯಡವಟ್ಟಾಗಿ ಬಿಡೋದು. ಇಷ್ಟು ಸಾವಿರ ಜೊತೆ ವಿವಾಹ ನೆರವೇರುಸ್ತೀವಿ ಅಂತ ಮೊದಲೇ ಸಾರಿ ಬಿಟ್ಟಿದ್ದರು. ಹೇಳಿದ ಮೇಲೆ ಹಂಗೆ ಮಾಡಲೇಬೇಕು. ಯಾಕೆಂದರೆ ಇದು ಮರ್ಯಾದೆ ಪ್ರಶ್ನೆ. ಆದರೆ ಅಷ್ಟು ಜೋಡಿಗಳು ದೊರೆಯುತ್ತಲೇ ಇರಲಿಲ್ಲ 'ತೊಟ್ಟಿಲ ಮದುವೆ' ಮಾಡಿದ ಪರಂಪರೆ ಅಲ್ವ ನಮ್ದು. ಎಳೆವಯಸ್ಸಿನ ಹುಡುಗ-ಹುಡುಗಿಯರನ್ನ ಎಳ್ಕಂಬಂದು 'ಗಂಡಹೆಂಡತಿ ಅನ್ನಿಸಿಬಿಟ್ಟಿದ್ದರು. ಅಂತೂ ಇಂತೂ ಘೋಷಿಸಿದ ಸಂಖ್ಯೆ ತಪ್ಪಿಸುತ್ತಿರಲಿಲ್ಲ, ಮಠಾಧೀಶರೂ, ಮಂತ್ರಿವರ್ಯರೂ ಹಸನ್ಮುಖರಿಂದ ಆಶೀರ್ವಚನ ನೀಡಿ ಇಂತಹ ಸಾಮೂಹಿಕ ವಿವಾಹಗಳು ಹೆಚ್ಚುಹೆಚ್ಚು ನಡೆಯಲಿ ಎಂದು ಆಶಿಸುತ್ತಿದ್ದರು!

ಸಾಂಕ್ರಾಮಿಕ ರೋಗದಂತೆ ಸಾಮೂಹಿಕ ವಿವಾಹಗಳು ಎಲ್ಲ ಕಡೆಗೆ ಹಬ್ಬರುವಾಗ ಮಂಡ್ಯದಲ್ಲೂ ಮಾಡಿದರೆ ಆದರಲ್ಲಿ ಮಂಡ್ಯದ ಹೆಚ್ಚುಗಾರಿಕೆ ಏನು ಬಂತು. ವಿಭಿನ್ನ ರೀತಿಯ ಕಾರ್ಯಕ್ರಮ ರೂಪಿಸಲು ರಾಜಕಾರಣಿಗಳು ಚಿಂತಿಸಿದರು. ಮದುವೆ, ತಿಥಿ ಮಾಡೇ ಅಲ್ವ ಜನ ತಿಥಿಯಾಗ್ತಿರೋದು 'ಸಾಮೂಹಿಕ ತಿಥಿ' ಮಾಡಿದರೆ ಹೇಗೆ ಎಂಬ ಆಲೋಚನೆಯೂ ಬಂತು. ಒಮ್ಮೆಗೇ ಹತ್ತಾರು ಸಂಖ್ಯೆಯಲ್ಲಿ ಜನರು ಸಾಯಬೇಕಾದರೆ ಯಾವುದಾದರೂ ತುಂಬಿದ ಬಸ್ಸಿನ ಭೀಕರ ಅಪಘಾತ ಆಗಬೇಕು. ಒಂದು ವೇಳೆ ಅದು ಸಂಭವಿಸಿದರೂ ಎಲ್ಲ ಪಕ್ಷಗಳ ರಾಜಕಾರಣಿಗಳೂ ಚುರುಕಾಗಿ ಸತ್ತವರಿಗೆ ಪರಿಹಾರಧನ ನೀಡಲು ನಾಮುಂದು ತಾಮುಂದು ಅಂತ ನಾಯಿನರಿಗಳ ಹಾಗೆ ಕಚ್ಚಾಡುತ್ತಾರೆ. ಇತ್ತೀಚೆಗೆ ನಡೆದ ಇಂತಹ ಅಪಘಾತದಲ್ಲಿ ಜಿಲ್ಲಾ ಸಚಿವರು ಓಡೋಡಿ ಬಂದರು. ಪಾಪ ನೊಂದವರಿಗೆ ಏನಾದರೂ ಸರಕಾರದ ಸಹಾಯ ದೊರಕಿಸಿಕೊಡಬೇಕು ಎಂಬ ಸದಾಶಯದಿಂದ ಅವರು ಸರ್ಕಾರದ ಕಡತವನ್ನೆಲ್ಲವನ್ನೂ ತಡಕಿದರಂತೆ. ಆದರೆ ಪರಿಹಾರ ನೀಡಲು ಅಲ್ಲಿ ಯಾವ ಮಾರ್ಗೋಪಾಯವೂ ದೊರೆಯಲಿಲ್ಲವಂತೆ. ಕೊನೆಗೆ ಅಳೆದು, ಸುರಿದು ಭಾರತೀಯ ಜನತಾಪಕ್ಷದಿಂದಲೇ ಪರಿಹಾರ ನೀಡಲು ನಿರ್ಧರಿಸಿದರಂತೆ. ಆದರೇನು ಮಾಡೋದು ಹಾಳಾದ ಜನ 'ಎಲ್ಲರಿಗೂ ಪರಿಹಾರ ಸಿಗಲಿಲ್ಲ, ಆಯ್ದ ಕೆಲವರಿಗೆ ಮಾತ್ರ ಕೊಟ್ಟರು' ಅಂತಾ ಕುಂತವರೆ. ಪರಿಹಾರ ಕೊಟ್ಟರೂ ಅಪವಾದ ತಪ್ಪಲಿಲ್ಲ, ಇದೆಲ್ಲವನ್ನೂ ಚಿಂತಿಸಿ 'ಸಾಮೂಹಿಕ ತಿಥಿ' ಕಾರ್ಯ ಬದಿಗಿಟ್ಟರು.



ಮಂಡ್ಯದ ಜನ ಮದುವೆ, ತಿಥಿಗೆ ಮಾತ್ರ ಹಣ ದುಂದು ಮಾಡಲ್ಲ, ಹುಡುಗಿ ಹೆಣ್ಣಾದಾಗಲೂ 'ಧಾಂಧೂಂ' ಅಂತ ಆಚರಿಸುತ್ತಾರೆ. ಸಾಮೂಹಿಕ ಹೆಣ್ಣಾಗುವಿಕೆಯನ್ನು ಇನ್ನೂ ಯಾಕೋ ಆಚರಿಸುತ್ತಿಲ್ಲ, ಪ್ರಾಯಶಃ ಒಟ್ಟಿಗೆ ಇಂತಹ ನೂರಾರು ಹೆಣ್ಣುಮಕ್ಕಳು ದೊರಕಲಾರರು ಎಂಬ ಸಂಶಯ ಇರಬೇಕು. ಸಾಮೂಹಿಕವಾಗಿ ಯಾವ ಜನಪ್ರಿಯ ಕಾರ್ಯಕ್ರಮವನ್ನು ಹಮ್ಮಿಕೊಳ್ಳಬಹುದು. ಅಂತ ತಲೆ ಕೆಡಿಸಿಕೊಂಡಾಗ ಒಬ್ಬ ಪ್ರಚಂಡ ಶಾಸಕರಿಗೆ ಏನೋ ಹೊಳೆಯಿತಂತೆ: ಅವರ ಮುಖ ಮೊರದಗಲ ಆಯಿತಂತೆ. ಆನಂದದಿಂದ ಕುಣಿದಾಡುವಂಗಾಯ್ತಂತೆ. ಮಳೆ ಬೆಳೆ ಆಗದಿದ್ದರೂ ಗರ್ಭಿಣಿ ಆಗುವುದೇನೂ ನಿಲ್ಲಲ್ವಲ್ಲಾ ನಡೆಯಲಿ 'ಸಾಮೂಹಿಕ ಸೀಮಂತ' ಅಂದರಂತೆ. ಹಾಗಂದದ್ದೇ ತಡ. ಗರ್ಭಿಣಿ ಹೆಂಗಸರನ್ನೆಲ್ಲ ಒಂದು ಕಡೆ ಸೇರಿಸಿದರು. ವಿಶಿಷ್ಟ ರೀತಿಯಲ್ಲಿ 'ಸಾಮೂಹಿಕ ಸೀಮಂತ' ನಡೆಸಿದರು. ಸರ್ಕಾರದ ಅಧಿಕಾರಿಗಳೂ ಇದರಲ್ಲಿ ಭಾಗಿ ಆಗಿದ್ದರಂತೆ! ಕೆಲವರು ಈ ಕ್ರಿಯೆ ಮಹಿಳಾಕುಲಕ್ಕೇ ಮಾಡಿದ ಅವಮಾನ, ಸಂಪ್ರದಾಯದ ಕತ್ತಲ ಕೋಣೆಗೇ ಮಹಿಳೆಯರನ್ನು ದೂಡುವ ಹುನ್ನಾರ ಎಂದೆಲ್ಲ ಕೂಗಾಡ್ತಿದಾರಂತೆ. ಅಂತಹ ಮಾತಿಗೆ ಯಾರು ಮಣೆ ಹಾಕ್ತಾರೆ ಬಿಡಿ. ಒಂದು ಅನುಮಾನ ಅಂದರೆ... 'ಸಾಮೂಹಿಕ ವಿವಾಹ' ಆಯ್ತು, 'ಸಾಮೂಹಿಕ ಸೀಮಂತ' ಅದೂ ನಡೀತು. ಇದರ ನಡುವೆ ಒಂದು ಇರುತ್ತಲ್ಲ ಅದನ್ನು ಸಾಮೂಹಿಕವಾಗಿ ಆಚರಿಸುವ ದಿನ ಬರಬಹುದಾ ಅಂತ... ಯಾಕೆಂದರೆ ಮಂಡ್ಯದ ಕಾರ್ಯಕ್ರಮ ಅಂದರೆ ವಿಶಿಷ್ಟವಾಗಿರಬೇಕಲ್ಲ ಅದಕ್ಕೆ!

******

ನಗರಸಭೆ ಸದಸ್ಯೆಯ ಮನೆ. ಹೊಸ ಕಾರು ಬಂದು ನಿಲ್ಲುತ್ತದೆ. ಕಾರಿನಿಂದ ಸಹಸದಸ್ಯ ಇಳಿಯುತ್ತಿರುವುದನ್ನು ನೋಡುತ್ತಾಳೆ. ಮನಸ್ಸಿನಲ್ಲಿಯೇ 'ಇದೇನು ಹೊತ್ತಿಗೆ ಮುಂಚೇನೆ ಬತ್ತಾ ಇದಲ್ಲ ಈ ಮೂದೇವಿ. ಈ ಕರಕಾಷ್ಟಗ ನಡೆದ ತಾವು ಹುಲ್ಲೆಸೆಳೂ ಬೆಳೆ ಯಾಕಿಲ್ಲ, ಅದೂ ಕಾರ್‍ನಲ್ಲಿ ಬೇರೆ ಬಂದವ್ನೆ. ಪಾಪರಾಗವ್ನೆ ಅಂತ ಜನ ಆಡ್ಕಂತಿದ್ರಲ್ಲ ಇದೆಲ್ಲಿಂದ ಬಂತು. ಅದೇನು ಯಾಸ ಕಟ್ಟಿ ಯಾರ ತಲೆ ಮೇಲೆ ಕೈ ಇಟ್ಟು ಅದೇನು ಮಾಡಿದ್ನೋ ಕಾಣೆ' ಎಂದೆಲ್ಲ ಚಿಂತಿಸುವಳು. 'ಹೂಂ ಬಾರಣ್ಣ' ಅಂತ ಇಲ್ಲದ ಸಂತಸ ತೋರುವಳು. 'ಕುಂತ್ಕಳಣ್ಣ' ಮನೆಯಲ್ಲಿದ್ದ ಕುರ್ಚಿ ತೋರಿಸುವಳು. ಕುಳಿತು ಮನೆಯ ಸುತ್ತ ಕಣ್ಣು ಆಡಿಸಿ-

'ಇದೇನಕ್ಕ ಇದು ಮನೆ ಇಂಗದೆ. ಯಾರಾದ್ರೂ ಇದ ನಗರಸಭೆ ಸದಸ್ಯೆ ಮನೆ ಅಂದಾರ?'

'ಏನು ಮಾಡದಣ್ಣ ಇದ್ದುದ್ರಲ್ಲೇ ಹೆಂಗೋ ತೂಗಿಸಬೇಕಲ್ಲ.'

'ಹಂಗಂದ್ರಾತ್ತವ್ವ, ಸದಸ್ಯೆ ಆಗಿದ್ದೀಯೆ. ಹೋಗೋರು ಬರೋರು ಇರ್ತಾರೆ. ಮನೆ ಅಂದ್ರೆ ಅದ್ಯೊಂದು ಇದು ಬ್ಯಾಡವಾ'

'ಎಲ್ಲ ನಾವು ನಾವು ಪಡ್ಕಂಬಂದಿದ್ದು ಬುಡು.'

'ಹಂಗಂತ ಕುಂತ್ರಾಯ್ತದೇನಕ್ಕ, ಈಗ ನೀನು ಮೆಂಬ್ರಾದೆ. ಆಯ್ತೀನಿ ಅಂತಕಂಡಿದ್ದೆ. ಏನೋ ಅದೃಷ್ಟ ಇತ್ತು ಆದೆ. ಅದಕ್ಕೆ ತಕ್ಕನಾಗಿ ಬದುಕಬೇಕು. ಆಗಲೇ ಆ ಶಿವನಿಗೆ ಇಷ್ಟ.'

ಅವಳಿಗೂ ಆ ಆಸೆ ಇತ್ತು, ದೊಡ್ಡ ಮನೆ ಕಟ್ಟಿಸ... ಮೈತುಂಬ ಒಡವೆ ಹಾಕ್ಕಬೇಕು, ಜುಂ ಅಂತ ... ಓಡಾಡಬೇಕು ಎಂದೆಲ್ಲ ಕನಸು ಕಂಡಿದ್ದಳು. ಆಗದಹೋಗದ ಮಾತು ಅಂತ ನಿರಾಸೆಯಿಂದ ಕೈಚೆಲ್ಲಿ...

'ನೀನು ಹಿಂಗಿರೋದ ನನ್ ಕಣ್ಣಿಂದ ನೋಡಾಕೆ... ಕಣಕ್ಕ.'

'ಅದ್ಕೂ ಅದೃಷ್ಟ ಅಂತ ಒಂದು ಬೇಕಲ್ಲಣ್ಣ.'

'ಬೇಕು ಅಂತ ಕುಂತ್ಕಂಡ್ರೆ ಹಿಂಗೇ ಸಾಯ್ತಿರಬೇಕಾ... ಅಧಿಕಾರ ಕೈಲಿಟ್ಟುಕೊಂಡೂ ಹಿಂಗಾದಾದ? ನೀನು ... ಅನ್ನು, ಲಕ್ಷಲಕ್ಷಗಟ್ಟಲೆ ಹಣ ನಿನ್ ಮನೆ ಬಾ... ಬಂದು ಬೀಳೋ ಹಂಗೆ ಮಾಡ್ತೀನಿ.'

ಅಣಕ

ಎಚ್.ಎಲ್. ಕೇಶವಮೂ...

ಜೀವಮಾನದಲ್ಲಿ ಅಷ್ಟು ಹಣ ಕಂಡವಳಲ್ಲ... ಹಣ ಎಲ್ಲಿಂದ ಕೊಡಿಸುತ್ತಾನೆ ಇವನು?

'ನಿನಗ್ಯಾಕವಲ್ಲ ನೀನು ಹೂಂ ಅನ್ನು.'

ಹೂಂ ಅನ್ನಲು ರೆಡಿಯಾಗಿದ್ದಳು. ಆದರೆ ... ಮನೆಹಾಳ ಏನಾದರೂ ಹಳ್ಳಕ್ಕೆ ಬೀಳಿಸಿಯಾನು ... ದಿಗಿಲು.

'ಮಾನಮರ್ಯಾದೆ ಹೋಗೋದಿಲ್ಲ ತಾನೆಯ...'

'ಥೂ ಅಂತ ಲುಚ್ಚ ಕೆಲ್ಸಕ್ಕೆ ಕೈ ಹಾಕೇನ ... ಅಂತದ್ದೇನೂ ಇಲ್ಲ ಕಣಕ್ಕ.'

ಮನಸ್ಸು ನಿರಾಳ ಆಯಿತು. ಕಿವಿಗೊಟ್ಟಳು.

'ಏನಿಲ್ಲ ಕಣಕ್ಕ, ನನ್ನಂಗೇ ನೀನೂ ದಳದಲ್ಲಿದ್ದಿ... ಅದೋ ಹೋಗಿ ಮೂಲೇಲಿ ಕುಂತದೆ. ಈಗ ನನ್ನೊ... ಕಮಲದ ಪಕ್ಷಕ್ಕೆ ಸೇರ್ತೀನಿ ಅಂದೆ. ಆ ಕಾರು ನೋ... ಅದು ಅವ್ರೇ ಕೊಟ್ಟಿರೋದು. ಮೇಲೆ ಕೇಳಿದಷ್ಟು ... ಕೊಟ್ರು. ಇಂತಹ ಅವಕಾಶ ಮತ್ತೆ ಸಿಗಲ್ಲ, ... ಅದು ಬುಟ್ಟು ಬಂದು ಸೇರು.'

ಸೇರಿದರೆ ಲಕ್ಷಲಕ್ಷ ರೂಪಾಯಿ! ಸೇರಬೇಕು ಅ... ತವಕ. ಜನ ಏನನ್ನುವರೋ ಎಂಬ ಆತಂಕ.

'ಎಲ್ರೂ ಒಪ್ಕಂಡವ್ರಾ?'

'ಎಲ್ಲಾ ರೆಡಿಯಾಗವ್ರೆ. ನೀನೊಬ್ಬಳು ಹೂಂ ... ಆಯ್ತು.'

ಂಗದೆ ಕಾಂಗ್ರೆಸ್ಸು ಜೆಡಿಎಸ್ಸು ಒಂದಾದವ?"

ೋ ಕಣ್ಕ, ಅದ್ಕೆ ದ್ಯಾವೇಗೌಡ್ರು ಆಗ್ಲೆ ಕುಮಾರಸ್ವಾಮಿಯ ಜೆಡಿಎಸ್ ಮಾಡಿಬುಟ್ಟವುನೆ."

ವ್ವುನೆಲ್ಲಿ ಮಾಡಕ್ಕೋಗಿದ್ದುನ್ನ, ಜನಗಳು ಮಾಡಿದ್ರೆ ಅವ್ನೇನು ಮಾಡ್ತನೆ?"

ನ್ನಂಥೋರು ಇನ್ನೇನು ಹೇಳಕ್ಕಾಯ್ತದೆ ದ್ವಡಪ್ಪ? ದ್ಯಾವೇಗೌಡ್ರು ೀಪುರದಲ್ಲಿ ಆ ಪುಡಸಾಮಿ ಎದ್ರಿಗೆ ರೇವಣ್ಣನ್ನ ಎತ್ತಿ ಕಟ್ಟುವಾಗ್ಲು ಮಾಡಿದ್ರು. ಈಗ್ಲು ನೋಡು ಜೆಡಿಎಸ್ ಪಾರ್ಟಿ ಕಟ್ಟೋರಿದ್ರು ಅಧ್ಯಕ್ಷನ್ನ ಮಾಡ್ಯವುನೆ. ನೋ ದವ್ಲತ್."

ವುನ ಮನೆ ಪಾರ್ಟಿಗೆ ಇನ್ಯಾರುನ್ನ ಅಧ್ಯಕ್ಷನ್ನ ಮಾಡ್ತನೊ?"

ದೂ ಸರಿ ಕಣೊ ಉಗ್ರಿ. ಕಾಂಗ್ರೆಸ್ ಜೊತೆ ಸರಸ ಆಡಕ್ಕೆ ಮಗನ್ನ ತಾನು ತಲೆ ಮರಿಸಿಗಂಡಂಗಿರತನೆ. ಆಮ್ಯಾಲ ತಾನೆ ಅವುನು ರಂಗಕ್ಕೆ

ವುನು ಮಗನ್ನ ಅಧ್ಯಕ್ಷನ್ನ ಮಾಡಿದ್ದ ನೋಡಿದ್ರೆ ಮೀರಾಜುದ್ದೀನ್ ಸಾವು ನನಿಗೇನೊ ದವ್ಲುಟಾಯ್ತಾ ಅದೆ."

ಂದ್ರೆ ದ್ಯಾವೇಗೌಡ್ರು ಮಾಟ ಮಾಡಿಸ್ಯವುರೆ ಅಂತಿಯಾ? ಥೂ ನಿನ್ನ, ಗಳ ಮಾಟ ಸಾಬರ್‍ಗೆ ಕೆಂದಕುಲ್ಲ ಕಣೊ" ಎಂದು ವಾಟಿಸ್ದೆ ನಕ್ಕ.

ಾಕ್ಲಾಸುಕ್ಯಂಗಂದೆ ಕಣೊ. ಆದ್ರು ಜೆಡಿಎಸ್ ಪಾರ್ಟಿಲಿರೋರಿಗೆ ಗ್ಗದಂತೆ. ದೇವೇಗೌಡ್ರು ಮಲಯಾಳಿ ಮಾಟಗಾರ್ರತ್ರ ಹೋಗಿದ್ರಂತೆ. ಮಕ್ಕಳು ಯಾರಿಗೇನು ಮಾಡಿಕೊಟ್ರೊ, ಅದವ್ರುರ ಪಾರ್ಟಿ ಪ್ರೆಸಿಡೆಂಟನೇ ಡವೆ ಅಂತ ಮಾತಾಡ್ತ ಅವ್ರುರೆ" ಎಂದು ಉಗ್ರಿ ನಕ್ಕ.

ದೇನಾರ ಆಗ್ಲಿ, ಅಪ್ಪ ಕಾಂಗ್ರೆಸ್ ಜ್ವತೆ ಆಟ ಆಡಿ ಆಗದೋರನ್ಯಲ್ಲ ಮುಕ್ಕಿಸ್ತ. ಮಗ ಬಜೆಪಿ ಜೊತೆ ಆಟ ಆಡಿ ಈಗ ಕಾಂಗ್ರೆಸ್ ಜೊತೆ ವುನಿಗಾಗದೋರಿಗೆ ಬುದ್ಧಿ ಕಲುಸಕ್ಕೆ ಬತ್ತನೆ ಅಂದ್ರೆ ಕಾಂಗ್ರೆಸ್ಸಿಗೇನೊ ಲ ಕಣೊ."

ಂಗ್ರೆಸ್ಸಿಗಲ್ಲ ಕಣೊ, ಜೆಡಿಎಸ್ಸಿನಿಂದ ಹೋಗಿ ಕಾಂಗ್ರೆಸ್ ಸೇರ್‍ಯವುರಲ್ಲ ಂತೂ ಕೇಡುಗಾಲವೆಯ."

■

ಷ್ಟೆಷ್ಟು ಕೊಟ್ಟಾರಂತೆ?'

ೈದು ಅಂದವ್ರೆ. ಅದ ಆರೋ ಏಳೋ ಮಾಡ್ತಾನ.'

ುಗೂ ಅಷ್ಟಷ್ಟು ಕೊಟ್ಟಾರ.'

ರ ಚಿಂತೆ ನಿನಗ್ಯಾಕೆ. ತಗೊ. ಇದ ಟೋಕನ್ ಅಂತ ಮಡಿಕ್ಕೊ' ನೋಟಿನ ಕಂತೆಯನ್ನು ಅವಳ ಕೈಗೆ ಇಡುವನು:

ಲ್ಲ ಪದ್ಮಕ್ಕನ ಒಂದು ಮಾತ ಕೇಳ್ತೀನಿ.'

ಯ್ಯೋ ಸಿವನೆ ಅವಳೇ ಮೊದಲು ಸೇರ್‍ತೀನಿ ಅಂತ ಬಂದವ್ಳೆ. ಅವಳ ್ರೋನು ಮಾಡುಸ್ತೀನಿ ಆಯ್ತಲ್ಲ.'

ಂದ ಕಾರಿನ ಸವಾರಿ ಪದ್ಮಕ್ಕನ ಮನೆಗೆ ಬಂತು. ಅಲ್ಲಿ ಕೊಂಚ ದ ವರಸೆ.

ೃಷ್ಣ ಅಂದರೆ ಹಿಂಗಿರಬೇಕು ಕಣಕ್ಕ. ಅಧ್ಯಕ್ಷರ ಪದವಿ ಹುಡುಕಿಕೊಂಡು ಲ್ಲ ನಿನ್ತಾವ್ಕೆ.'

ೇನಣ್ಣ ಹೊಸ ಸುದ್ದಿ?'

ು ಕಮಲದ ಕೈಹಿಡಿದರೆ, ಕಮಲ ನಿನ್ನ ಕೈಹಿಡೀತದೆ.'

ದೆಲ್ಲ ದುಡ್ಡಿನ ಆಮಿಷ ತೋರಿಸಿದ್ದರು. ಆಗ ದಳದವರು 'ಅವರಷ್ಟು ಕ್ಯಾಗಿದ್ದರೂ ನಾವೂ ನಮ್ಮ ಕೈಲಾದ್ದ ಮಾಡ್ತೀವಿ' ಅಂದಿದ್ದರು. ಆ ಲ್ಲೇ ಬೆಂಗಳೂರಿಗೆ ಹೋಗಿ 'ಭಾರತೀಯ ಜನತಾ ಪಕ್ಷದವರು ರೂಪಾಯಿ ಕೊಡ್ತೀವಿ ಅಂತ ಪಕ್ಷಾಂತರಕ್ಕೆ ಒತ್ತಾಯಿಸುತ್ತಿದ್ದಾರೆ. ದರೂ ಅದಕ್ಕೆ ಹೋಗಲ್ಲ. ಪಕ್ಷ ಬಿಡಲ್ಲ' ಅಂತ ಪ್ರಮುಖರ ಮುಂದೆ . ಅವರು ಕಾಸು ಬಿಚ್ಚಲಿಲ್ಲ. ನಿಜ. ಹಂಗಂತ ಅವರು ದುಡ್ಡು ್ಲು ಇವರು ಕೊಟ್ರು ಅದಕ್ಕೇ ಹೋದೆ ಅನ್ನುವುದಕ್ಕಾಗುತ್ತಾ.

ಅಂತಾರೆ ಅಂತ ಹೆದರಿಕಂಡ್ರಾಯ್ತದ. ಅವರೇನು ನಮ್ಮ ಕಷ್ಟಸುಖಕ್ಕೆ ಸುಮ್ನೆ ಒಪ್ಪಳಕ್ಕ.'

ನ್ರೊ....'

ಕೆ ಹಿಂಜರಿತಿದೀಯಲ್ಲ. ಬೇಕಾದ್ರೆ ದೇವರ ಮೇಲೆ ಆಣೆ ಇಟ್ಟು ಾಯಿತು. ನಾವು ಭಾರತೀಯ ಜನತಾ ಪಕ್ಷದ ತತ್ವಸಿದ್ಧಾಂತ ಒಪ್ಪಿ ಅಂತಾವ.'

ವರ ಮೇಲೆ ಆಣೆ ಇಡೋದ!'


ಸ್ಸಿನಲ್ಲಿ ಹಣ ಅಧಿಕಾರ ಸಿಕ್ತದೆ ಅಂತ ಹೋಯ್ತಿದೀನಿ ದೇವರೆ, ಸಂಗೊತ್ತಿಲ್ಲ, ನನ್ನ ತಪ್ಪ ಹೊಟ್ಟೆಗಾಕೋ ಅಂದರೆ ದೇವರು ಏನೂ ಲ್ಲ, ಹಂಗನ್ರೊ, ಆದರೆ ಆರ್ದಿನವರೂ ಸೇರ್‍ತೀನಿ ಅಂದವ್ರೆ. ಬೇಕಾರೆ ೋನ್ ಹಚ್ಚು'

ಗೆ ಎರಡು ದಿನಗಳು ಬಲೆಗೆ ಬಿದ್ದಂತಾಯ್ತಲ್ಲ, ಬೇರೆ ಕಡೆಯೂ ಂತ್ರ ಪ್ರಯೋಗಿಸಿದ ಹೊಸಕಾರಿನವ. ಗಂಡು ಸದಸ್ಯರ ಬಳಿ ಪ್ರಯಿಂಣ ಬೇರೆ ಆಯಿತು. ಮಂತ್ರಿವರ್ಯರು ನೀಡಿದ ಹಾರ್ದಿಕ ಾರಾಮಿ ಹೋಟಲಿನಲ್ಲಿ ಅನುಭವಿಸಿದ ಆನಂದ ಇಂತಹವುಗಳನ್ನೆಲ್ಲ ನೀರು ಬರುವಂತೆ ವರ್ಣಿಸಿದ. 'ಎಷ್ಟು ದಿನ ಅಂತ ಈ ಹಳೇ ಓಡ್ತಾದೀಯ. ಈಗ್ಲಾದರೂ ದುಡ್ಡು ಕಾಸು ಮಾಡ್ಕೊಳೋದು ಸೇನು ಸಾಯುಗಂಟ ಸದಸ್ಯನಾಗಿರ್‍ತೀನಿ ಅಂದ್ಕೊಂಡಿದೀಯ' ಎಂದು ಮುಂದೆ ಸಾಗಬಹುದಾದ ವರ್ಣಮಯ ಜೀವನವನ್ನು ತೆರೆದಿಟ್ಟರು. ತೋಯಿಂತೂ ತತ್ವ ಸಿದ್ಧಾಂತದ ಆಧಾರದ ಮೇಲೆ ನಗರಸಭೆಯ 'ಸಾಮೂಹಿಕ ಪಕ್ಷಾಂತರ' ಮಾಡಿದರು!

ು ಪ್ರಜ್ಞಾವಂತ ಮುಂಡ್ಯದ ನಗರಸಭೆಯ ವೃತ್ತಾಂತವು. ■

ಕುಸುಮ ಬಾಲೆ

ಮರೆಯುವ ಮುನ್ನ



■ಪಿ. ಲಂಕೇಶ್ ಫೆಬ್ರವರಿ 17,1991

ಮೊನ್ನೆ ತುಮಕೂರಿನಿಂದ ಇಬ್ಬರು ಕವಿಗಳು ಬಂದರು. ದೇವನೂರ ಮಹಾದೇವರ 'ಕುಸುಮ ಬಾಲೆ'ಯನ್ನು ಕುರಿತು ವಿಚಾರಸಂಕಿರಣವಿದೆ, ಬರಬೇಕು ಅಂದರು. ನಾನು 'ಈಗ ಸಾಧ್ಯವಾಗುವುದಿಲ್ಲ' ಅಂದರೂ 'ಹ್ಞಾ, ಹ್ಞೂ' ಅನ್ನುವಷ್ಟರಲ್ಲಿ ಹೊರಟು ಹೋಗಿ ಆಹ್ವಾನಪತ್ರ ಅಚ್ಚುಮಾಡಿಸಿ ನನಗೆ ಕಳಿಸಿಯೇ ಬಿಟ್ಟರು. ತುಮಕೂರಿನ ಜಿಲ್ಲಾಧಿಕಾರಿ ಮತ್ತು ಆ ಜಿಲ್ಲೆಯ ಕಂದಾಯ ಇಲಾಖೆಯ ನೌಕರರು ಏರ್ಪಡಿಸಿದ ವಿಚಾರ ಸಂಕಿರಣ. ಅಲ್ಲ, ವಿಚಾರಸಂಕಿರಣವಲ್ಲ, 'ಅಭಿನಂದನಾ ಸಭೆ'. ನಾವೆಲ್ಲ ಸನ್ಮಾನ ಸಭೆಗಳನ್ನು ತಿರಸ್ಕರಿಸುವುದರಿಂದ ಆ ಮಾತಿಗೆ ಅವಕುಂಠನ ಹಾಕಿ 'ಅಭಿನಂದನಾ ಸಭೆ' ಎಂದು ಅಚ್ಚು ಮಾಡಿದ್ದರು. ನನಗೆ ಇದೆಲ್ಲ ಅತಿಯಾಗುತ್ತಿದೆ ಅನ್ನಿಸಿತು; ಈ ರೀತಿಯ ಮಾತಿನಲ್ಲಿ ಮಾತಿಲ್ಲದ ಜನರ ಕೃತ್ಯಗಳಿಂದ ವಿಮರ್ಶೆ ಸಾಧ್ಯವಾಗದಂಥ ಪರಿಸ್ಥಿತಿ ಉಂಟಾಗುತ್ತಿದೆ ಅನ್ನಿಸಿತು. ಅಲ್ಲದೆ ಕಳೆದ ಎರಡು ವರ್ಷದಿಂದ ಆದದ್ದು ನನ್ನ ಮನಸ್ಸಿನಲ್ಲಿ ಹಚ್ಚಹಸಿರಾಗಿತ್ತು, ಅದ್ದರಿಂದ ಈ 'ಅಭಿನಂದನಾ ಸಭೆ'ಗೆ ನಾಲ್ಕು ದಿನ ಮುಂಚೆ ಗೆಳೆಯರೊಂದಿಗೆ ಚರ್ಚಿಸಿ ಒಂದು ಕಾಗದ ಕಳಿಸಿದೆ. ಈ ಕಾಗದವನ್ನು ಓದುವುದಕ್ಕೆ ಮುಂಚೆ ನೀವು ದೇವನೂರ ಮಹಾದೇವರ ಬಗ್ಗೆ, ಅವರ 'ಕುಸುಮ ಬಾಲೆ'ಗೆ ಹೊರತಾದ ಕೃತಿಗಳ ಬಗ್ಗೆ ನಾನು ಒಳ್ಳೆಯ ಅಭಿಪ್ರಾಯ ಇಟ್ಟುಕೊಂಡಿದ್ದವನು ಮತ್ತು ಅವರ 'ಒಡಲಾಳ'ದ ಬಗ್ಗೆ ವಿಮರ್ಶೆಯ ದೀರ್ಘಪತ್ರವನ್ನು ಅವರಿಗೆ ಬರೆದಿದ್ದವನು ಎಂಬುದನ್ನು ನೆನಪಿಟ್ಟುಕೊಳ್ಳಬೇಕು. ನನ್ನ ಕಾಗದ (ಕತ್ತರಿ ಆಡಿಸಿದ ಮೇಲೆ ಕೂಡ) ಹೀಗಿದೆ:


ಮಾನ್ಯರೇ,

ನೀವು ತಾ. 26ರ ಸಭೆಯ ಬಗ್ಗೆ ಹೇಳುವಾಗ 'ಸಂಕಿರಣ' ಎಂದು ಹೇಳಿದ್ದಿರಿ, 'ಅಭಿನಂದನಾ ಸಭೆ' ಎಂದು ಹೇಳಿರಲಿಲ್ಲ, ನನಗೆ ವೇಳೆ ಇಲ್ಲವೆಂದರೂ ಒತ್ತಾಯಿಸಿದಿರಿ. ನಿಮ್ಮೊಂದಿಗೆ ವಾದಿಸಲು, ಚೌಕಾಸಿ ಮಾಡಲು ಸಮಯ ಇಲ್ಲದಿದ್ದರಿಂದ ಆಗಲೆಂದೆ. ಇಡೀ ಸಂದರ್ಭದ ಬಗ್ಗೆ ಚಿಂತಿಸಿದಾಗ ಕೆಲವು ಸಂಗತಿಗಳು ಕೈಮೀರಿ ಹೋಗುವ ಮುನ್ನ ಸರಿಯಾದ ರೀತಿಯಲ್ಲಿ ಪ್ರತಿಕ್ರಿಯೆ ನೀಡುವುದು ಒಳ್ಳೆಯದೆನಿಸಿ ಈ ಪತ್ರವನ್ನು ಬರೆದಿದ್ದೇನೆ.

ನಾನು ಈ ಸಭೆಗೆ ಬರುವುದು ಸಾಧ್ಯವಾಗುತ್ತಿಲ್ಲ ಕಾರಣವನ್ನು ಸಂಕ್ಷಿಪ್ತವಾಗಿ ನೀಡುತ್ತಿದ್ದೇನೆ:

1. ದೇವನೂರ ಮಹಾದೇವ ಹೋದ ವರ್ಷ 'ಜಾಗೃತ ಸಾಹಿತ್ಯ ವೇದಿಕೆ'ಗೆ ಬರಲು ನೀಡಿದ ಆಹ್ವಾನಕ್ಕೆ ಉತ್ತರ ಕೊಡಲಿಲ್ಲ; ಸಭೆಗೆ ಗುಟ್ಟಾಗಿ ಬಂದು ಹೋದರು; ಇದು ನನ್ನನ್ನು, ನನ್ನ ಗೆಳೆಯರನ್ನು ಬೇಸರಪಡಿಸಿದೆ.
2. 'ಜಾಗೃತ ಸಾಹಿತ್ಯ ವೇದಿಕೆ'ಗೆ ತೆಗೆದಕೊಂಡಂತಹ ನಿಲುವನ್ನೇ 'ಕರ್ನಾಟಕ ಪ್ರಗತಿ ರಂಗ'ಕ್ಕೂ ತೆಗೆದುಕೊಂಡು 'ದಲಿತ ಸಂಘರ್ಷ ಸಮಿತಿ' ಗೊಂದಲಗೊಳ್ಳಲು ದೇವನೂರ ಮಹಾದೇವ ಮತ್ತು ಅವರ ಗೆಳೆಯರು ಕಾರಣ.
3. ದೇವನೂರ ಮಹಾದೇವ ಅವರ ಪುಸ್ತಕಗಳನ್ನು ಪ್ರಕಟಿಸಿದ 'ಸಂಗಾತಿ ಪ್ರಕಾಶನ' ಮತ್ತು ದೇವನೂರರ ನೇರ ಬೆಂಬಲ ಪಡೆದ 'ಸುದ್ದಿ ಸಂಗಾತಿ' ಪತ್ರಿಕೆ ಕಳೆದ ಎರಡು ವರ್ಷದಿಂದ ನನ್ನ, ನನ್ನ ಗೆಳೆಯರ ಮತ್ತು 'ಪತ್ರಿಕೆ'ಯ ಚಾರಿತ್ರ್ಯವಧೆ ಮಾಡಲು ಯತ್ನಿಸಿದೆ; ಅಲ್ಲಿ ನನ್ನ 'ಕಲ್ಲು ಕರಗುವ ಸಮಯ' ಪುಸ್ತಕದ ಬಗ್ಗೆ ಬರೆದಿದ್ದನ್ನು ಮಹಾದೇವ ಮತ್ತು ನೀವು ಗಮನಿಸಿರಬಹುದು.
4. ಈ 'ಅಭಿನಂದನಾ ಸಭೆ'ಗೆ ಕಾರಣವಾಗಿರುವ 'ಕುಸುಮ ಬಾಲೆ' ನನಗೆ ಅರ್ಥವಾಗಿಲ್ಲ; ಮತ್ತು ಆಗಿರುವಷ್ಟು ಅರ್ಥದ ಆಧಾರದ ಮೇಲೆ ಹೇಳುವುದಾದರೆ ಅದು ಅರ್ಥಪೂರ್ಣ ಕೃತಿ ಅಲ್ಲ.
5. ಜಿಲ್ಲಾಧಿಕಾರಿಗಳು, ಕಂದಾಯ ಇಲಾಖೆಯ ನೌಕರರು ಮತ್ತು ಪೊಲೀಸರ ನೆರವಿನಿಂದ ರೂಪುಗೊಂಡ ಸಮಾರಂಭಗಳು ನನಗೆ ಹಿಡಿಸುವುದಿಲ್ಲ.

ನಾನು ದೇವನೂರ ಮಹಾದೇವರನ್ನು ಎರಡು ದಶಕದಿಂದ ಬಲ್ಲೆ, ಅವರ ಬಗ್ಗೆ ನನಗೆ ಅಪಾರ ಪ್ರೀತಿ ಇದೆ. ಮೇಲಿನ ಯಾವುದೂ ಈ ಪ್ರೀತಿಯನ್ನು ಕಡಿಮೆ ಮಾಡಿಲ್ಲ, ಆದರೆ ಈ ಪ್ರೀತಿಯ ಕಾರಣಕ್ಕೆ ಇಂಥ ಸಭೆಯಲ್ಲಿ ಭಾಗವಹಿಸುವುದು ಅಪ್ರಾಮಾಣಿಕ ಮತ್ತು ಆತ್ಮಘಾತಕ ಎಂದು ನಾನು ತಿಳಿಯುವುದರಿಂದ ಬರಲಾಗುತ್ತಿಲ್ಲ, ತೊಂದರೆಗೆ ಕ್ಷಮಿಸಿ.



ದೇವನೂರು ಮಹಾದೇವ



ಜೇನ್‌ಪಾಲ್‌ಸಾರ್ತರ್

ತಕ್ಷಣ ಅನ್ನಿಸಿದ್ದು

ಮೇಲಿನ ಟಿಪ್ಪಣಿಯಲ್ಲಿ ಹೇಳಿದಂತೆ ನಾನು ಯಾವುದೇ ಮುಲಾಜಿಲ್ಲದೆ ಸ್ಪಂದಿಸಿದಾಗ ಬಹುಕಾಲ ಆ ಮಾತು ನಿಜವಾಗಿದೆ. ನಾನು ಚಿಕ್ಕವನಾಗಿದ್ದಾಗ ಬೇಂದ್ರೆ, ಕುವೆಂಪು ಓದಿದ್ದರಿಂದ ಅಡಿಗರ ಬಹುಪಾಲು ಕವನಗಳನ್ನು ಇಷ್ಟಪಡುತ್ತಿರಲಿಲ್ಲ, ಅಡಿಗರ ಆ ಕವನಗಳು ಗದ್ದಲವಾಗಿ, ಒರಟಾಗಿ ಕಾಣುತ್ತಿದ್ದವು. ಅಲ್ಲದೆ ಅವರ ಕನ್ನಡ ಭಾಷಾಪ್ರಜ್ಞೆ, ಪ್ರಾಸಪ್ರಜ್ಞೆ, ಛಂದಸ್ಸಿನ ಪ್ರಜ್ಞೆ ದುರ್ಬಲ ಅನ್ನಿಸಿತ್ತು. ನಾನು ಅಡಿಗರನ್ನು ಮೆಚ್ಚತೊಡಗಿದ್ದು ಅವರ 'ಪುಷ್ಪಕವಿಯ ಪರಾಕು' ತರುವಾಯ; ಗೆಳೆಯರೆಲ್ಲ 'ಭೂತ'ದಲ್ಲಿರಬಹುದಾದ ಅರ್ಥ ಹುಡುಕತೊಡಗಿದಾಗ.

ಹೀಗೆಯೇ 'ಒಂದು ಊರಿನ ಕತೆ' ಎಂಬ ಸಿನಿಮಾವನ್ನು ನಾನು ಇಷ್ಟಪಡಲಿಲ್ಲ; ಇದನ್ನು ಮಾಡಿದವನು ಹಿಂದುಳಿದ ವರ್ಗಕ್ಕೆ ಸೇರಿದವನು ಎಂಬ ಕಾರಣಕ್ಕೆ ಆ ಚಿತ್ರದ ಮೇಲೆ ಸಂಕಿರಣ ಏರ್ಪಡಿಸಿ ನಾನು ಮಾತನಾಡಬೇಕು ಎಂದು ಒತ್ತಾಯಿಸಿದರು. ನಾನು ಒಪ್ಪಲಿಲ್ಲ, ಇಷ್ಟಕ್ಕೆ (ಈಗ ನನ್ನ ಹತ್ತಿರದ ಗೆಳೆಯರಾಗಿರುವ) ಅನೇಕರು ಪತ್ರಿಕೆಗಳಿಗೆಲ್ಲ ಕಾಗದ ಬರೆದು ನನ್ನನ್ನು ಉಗ್ರವಾಗಿ ಖಂಡಿಸಿದರು. ಇದೇ ರೀತಿಯಲ್ಲಿ 'ಮಾಡಿ ಮಡಿದವರು' ಚಿತ್ರ ಬಂದಾಗಲೂ ಆಯಿತು. ಕೆಲವರು ಆ ಚಿತ್ರದ ಬಗ್ಗೆ ತಮ್ಮ ಪುಟ್ಟ ಪತ್ರಿಕೆಗಳ ವಿಶೇಷ ಸಂಚಿಕೆ ಹೊರಡಿಸಿ ವಿಟ್ಟೋರಿಯಾ ಡಿ ಸಿಕಾಗೆ ಅರ್ಪಿಸಿ 'ಮಾಡಿ ಮಡಿದವರು' ಚಿತ್ರವನ್ನು ಹೊಗಳಿದರು. ನಾನು ತಮಾಷೆ ನೋಡುತ್ತಾ ಸುಮ್ಮನಿದ್ದೆ. ಇದು ಯಾವ ಮಟ್ಟದ ಚಿತ್ರ ಎಂಬುದು ಈ ಉಗ್ರ ಅಭಿಮಾನಿಗಳಿಗೆ ಈಗ ಗೊತ್ತಾಗಿದೆ.

ಇದಕ್ಕಿಂತ ದೊಡ್ಡ ರಿಸ್ಕ್... ಜೇನ್ ಪಾಲ್ ಸಾರ್ತರ್ ಸತ್ತಾಗ ತೆಗೆದುಕೊಂಡೆ. ಆತನ ಮರಣದ ವಾರ್ತೆ ಕೇಳಿದ ಶೂದ್ರ ಶ್ರೀನಿವಾಸ್ ಜಗತ್ತು ಮುಳುಗಿಹೋದಂತೆ ಬಂದು 'ಸಾರ್ತರ್ ತೀರಿಕೊಂಡರು ಸಾರ್!' ಅಂದ. ನಾನು ದುಃಖಪಟ್ಟೆ. ಆಮೇಲೆ ಹೇಳಿದೆ, "ಇದು ದೊಡ್ಡ ನಷ್ಟ... ಆದರೆ ನನಗೆ ವೈಯಕ್ತಿಕವಾಗಿ ಈ ಸಾರ್ತರ್ ಇಷ್ಟವಿಲ್ಲ. ನಮ್ಮ ಜಿ. ವೆಂಕಟಸುಬ್ಬಯ್ಯ, ಶೇಷಗಿರಿರಾವ್ ತರಹದವರಿಗಿಂತ ಸಾವಿರಪಾಲು ವಾಸಿ ಅಷ್ಟೆ."

ಮೊನ್ನೆ ಈತನ 'ಸೇಂಟ್ ಜೇನೆ' ಎಂಬ ಪುಸ್ತಕ ತೆಗೆದುಕೊಂಡು ನಾಲ್ಕೈದು ಪುಟ ಓದಿ ಸಾಹಿತ್ಯದಲ್ಲಿ ಗ್ಯಾಸ್ ಇಷ್ಟಪಡುವ ಗೆಳೆಯನಿಗೆ ಕೊಟ್ಟುಬಿಟ್ಟೆ.

ಬರ್ನ್ಸ್..... ಉರಿದಾಗ



ಜಾರ್ಜ್ ಬರ್ನ್ಸ್

ಮೇಲಿನದೆಲ್ಲ ತೀರಾ ಸೀರಿಯಸ್ ಆಗಿಹೋಯಿತು ಮತ್ತು ಅನಗತ್ಯವಾಗಿ ಕಹಿ ಕೂಡ. ಆದ್ದರಿಂದ ಈಚೆಗೆ ಆದದ್ದು ಹೇಳುತ್ತೇನೆ, ಜಾರ್ಜ್ ಬರ್ನ್ಸ್ ಎಂಬ ಪ್ರಖ್ಯಾತ ಹಾಸ್ಯನಟನಿಗೆ ಮೊನ್ನೆ ನೂರು ವರ್ಷ ತುಂಬಿತು. ಎಲ್ಲ ಸುಖ, ದುಃಖ ಕಂಡ ನಗುತುಂಬಿದ ಆಸಾಮಿ ಈತ. ನೂರು ವರ್ಷ ತುಂಬಿದ ಸಂದರ್ಭದಲ್ಲಿ ಆತ ಒಂದಾದ ಮೇಲೊಂದರಂತೆ ಸಿಗರೇಟು ಸೇದುವುದನ್ನು ನೋಡಿದ ವರದಿಗಾರರು ಕೇಳಿದರು, "ಇಷ್ಟೊಂದು ಸಿಗರೇಟ್ ಸೇದ್ತೀರಲ್ಲ, ನಿಮ್ಮ ಡಾಕ್ಟರ್ ಆಕ್ಷೇಪಿಸುವುದಿಲ್ಲವೆ?"

"ಇಲ್ಲ... ಅವರು ತೀರಿಕೊಂಡು ಬಹಳ ವರ್ಷ ಆಯಿತು."

ನಗುತ್ತ ವರದಿಗಾರ ಕೇಳಿದ, "ನೀವು ನಿಮಗಿಂತ ವಯಸ್ಸಿನಲ್ಲಿ ತೀರಾ ಚಿಕ್ಕವರಾದ ಹೆಂಗಸರನ್ನು ಪ್ರೀತಿಸುವ ಅಪಾದನೆಗಳಿವೆ?"

"ಯಾಕೆಂದರೆ... ನನ್ನ ಜೊತೆಗಾತಿಯರೆಲ್ಲ ಮುದುಕಿಯರಾಗಿದ್ದಾರೆ ಅಥವಾ ದಿವಂಗತರಾಗಿದ್ದಾರೆ.'

ಹುತಾತ್ಮ ದಿನದಂದು ಮಹಾತ್ಮ ಹ.ಗೌಡರ ನೆನೆಯದಿದ್ದರೆ....!

ಬಿಡಿ ಚಿತ್ರಗಳು

• ಈಶ

ಆಕ್ಟೋಬರ್ 31.

ಅದು ಹುತಾತ್ಮರ ಸ್ಮರಣ ದಿನ. 1984 ರಲ್ಲಿ ಇಂದಿರಾಗಾಂಧಿ ತನ್ನ ಬಾಡಿಗಾರ್ಡುಗಳ ಕೈಲೇ ಕೊಲೆಗೀಡಾದ ಮೇಲೆ ಆವಾಗಿನಿಂದ ಅಕ್ಟೋಬರ್ ಮೂವತ್ತೊಂದನ್ನು ಹುತಾತ್ಮರ ದಿನ ಅಂತ ಮಾಡಿಕೊಂಡಿದ್ದೇವೆ. ಅವತ್ತಿನ ದಿನ ಇಂದಿರಾಳ ನಾಯಕತ್ವ, ತ್ಯಾಗ, ಬಲಿದಾನಗಳನ್ನು ಕಾಂಗ್ರೆಸ್‌ನವರು ನಮಗೆಲ್ಲಾ ನೆನಪು ಮಾಡಿಕೊಡುತ್ತಾ ಭಾಷಣ, ಪ್ರಚಾರ ನಡೆಸುತ್ತಿರುತ್ತಾರೆ. ಅದು ನಡೆದುಕೊಂಡು ಹೋಗಲಿ ಬಿಡಿ, ಆದರೆ ಒಬ್ಬ ವ್ಯಕ್ತಿ... ಅವನು ಕರ್ನಾಟಕದ ಮಲೇಸೀಮೆಯವ,

"ಆವತ್ತು ನನ್ಮಾತು ಕೇಳಿದಿದ್ದರೆ ಇಂದ್ರಾಗಾಂಧಿ ಬದುಕಿಕೊಂಡಿರುತ್ತಿದ್ದಳು" ಅಂತ ಹೇಳಿಕೊಂಡು ತಿರುಗುತ್ತಾ ಸೆಕ್ಯುರಿಟಿ ಏಜನ್ಸಿಗಳಿಗೆ ಯಾವ್ಯಾವ ತರದ ಕಷ್ಟ ರೇಜಿಗೆ ಉಂಟು ಮಾಡಿದನೆಂದು ಕಲ್ಕುಳಿ ವಿಠಲ್ ಹೆಗ್ಡೆ ಒಂದು ಸಾರಿ ಹೇಳಿದರು.

ಅವತ್ತು ಶೃಂಗೇರಿಯಿಂದ ಯಾವುದೋ ಕೆಲಸದ ಮೇಲೆ ಬೆಂಗಳೂರಿಗೆ ಬಂದಿದ್ದ ವಿಠಲ್ ಆಮೇಲೆ ಆಫೀಸಿಗೆ ಬಂದವರೆ ನಮ್ಮನ್ನೆಲ್ಲಾ ಅದ್ಯಾವ ಪರಿ ನಗಿಸಿ ನಗಿಸಿ ಅಳಿಸಿದರೆಂದರೆ ನಮಗೆ ಈಗಲೂ ಇಂದಿರಾಗಾಂಧಿ ಅಂದರೆ ಆ ಹುತಾತ್ಮಳ ಜೊತೆಗೆ ಈ ಮಲೆನಾಡಿನ ಮಹಾತ್ಮನ ನೆನಪೂ ಬರುತ್ತದೆ.

ಸದ್ಯಕ್ಕೆ ಈ ಮಹಾತ್ಮನ ಹೆಸರನ್ನು ಹ.... ಗೌಡ ಅಂತಿಟ್ಟುಕೊಳ್ಳಿ. ತೀರ್ಥಹಳ್ಳಿ ಬೆಂಗಳೂರುಗಳಲ್ಲಿ ಕಾಂಗ್ರೆಸ್ ರಾಜಕಾರಣಿಯಾಗಿ ಓಡಾಡಿಕೊಂಡಿರುವ ಹಗೌಡ ಮಹಾ ಕಿತಾಪತಿ ಮನುಷ್ಯ. ಎಲ್ಲಾದರೂ ಎಂತಾದರೂ ಹೇಗಾದರೂ ಸರಿ ತಾನು ಪ್ರಸಿದ್ಧನಾಗಬೇಕು, ತನ್ನ ಹೆಸರು ಫೋಟೋ ಪೇಪರು, ಟೀವಿಗಳಲ್ಲಿ ಬರಬೇಕು ಎಂಬ ತೆವಲುಗಳು ವಿಪರೀತ ಅನ್ನಿಸುವಷ್ಟಿದ್ದವು. ಆದರೆ ಪೇಪರ್‌ನವರು ಏನಾ ಕಾರಣ ಯಾರ್‍ಯಾರದ್ದೋ ಫೋಟೋ ಯಾಕೆ ಹಾಕುತ್ತಾರೆ ಹೇಳಿ? ಇಷ್ಟಾದರೂ ಹಗೌಡ ನಿರಾಶನಾಗಲಿಲ್ಲ. ಒಂದೊಳ್ಳೆ ಅವಕಾಶಕ್ಕಾಗಿ ಕಾಯುತ್ತಿದ್ದ.

ಆಗಲೇ ದೆಹಲಿಯಲ್ಲಿ ಇಂದಿರಾ ಹತ್ಯೆಯಾಯಿತು. ಬಿಯಾಂತ್ ಸಿಂಗ್, ಸತ್ವಂತ್‌ಸಿಂಗ್‌ರೆ ಹತ್ಯೆಗೆ ಕಾರಣ ಎಂಬುದು ಸ್ಥಳದಲ್ಲೇ ಗೊತ್ತಾಯಿತಾದರೂ ಈ ಪಿತೂರಿಯ ಹಿಂದೆ ಇನ್ನೂ ಯಾರ್‍ಯಾರಿದ್ದಾರೆಂಬ ತನಿಖೆ ಶುರುವಾಯಿತು. ಆಗೊಮ್ಮೆ ಶಿವಮೊಗ್ಗ ಎಸ್‌ಪಿ ಆಫೀಸಿಗೆ ಒಂದು ತನಿಖಾ ತಂಡ ಬಂದಿಳಿಯಿತು. ಎಸ್‌ಪಿಗೋ ದಿಗ್ಭ್ರಮೆ, ಬಂದಿರುವವರು ದೇಶದ ಅತ್ಯುನ್ನತ ತನಿಖಾ ತಂಡ, ಇಂದಿರಾ ಕೊಲೆಗೂ ಶಿವಮೊಗ್ಗಾಗೂ ಯಾವ ಲಿಂಕಿದೆ ಎಂದು ಯಾರಿಗೂ ಅರ್ಥವಾಗಲಿಲ್ಲ. ದೆಹಲಿಯ ಪತ್ತೇದಾರರೂ ಏನೊಂದನ್ನು ಸ್ಪಷ್ಟವಾಗಿ ಹೇಳುತ್ತಿಲ್ಲ, ಹಾಗೆ ಬಂದಿದ್ದ ಜನ ಒಂದಿಬ್ಬರು ಸ್ಥಳೀಯ ಪೊಲೀಸ್ ಆಫೀಸರ್‌ಗಳನ್ನು ಜೊತೇಲಿ ಕರೆದುಕೊಂಡು ಸೀದಾ ತೀರ್ಥಹಳ್ಳಿಯ ಎಸ್ಟೇಟ್ ಒಂದಕ್ಕೆ ನುಗ್ಗಿದರು.

ಮಹಾತ್ಮ ಹಗೌಡನ ಮನೆ ಅದು!

ತನಿಖಾ ತಂಡದವರು ಹಗೌಡನನ್ನು ಹಿಡಿದು ಕೂರಿಸಿ "ಇಂದಿರಾ ಹತ್ಯೆ ಬಗ್ಗೆ ನಿನಗೇನು ಗೊತ್ತು ಎಲ್ಲಾ ಹೇಳು ಈಗ" ಅಂತ ಕೆಂಗಣ್ಣು ಬಿಟ್ಟರು. ಆದರೆ ಈ ಭೂಪ "ನಂಗೇನ್ ಗೊತ್ತಿಲ್ಲ" ಅಂದ.

"ಹಾಗಾದ್ರೆ ಈ ಲೆಟರ್ ಯಾಕೆ ಬರೆದೆ?"

"ಸುಮ್ನೆ...?"

"ಭಡವಾ ರಾಸ್ಕಲ್. ನಿಜ ಏನೂಂತ ಬೊಗಳಿದರೆ ಸರಿ, ಇಲ್ಲಾಂದ್ರೆ...."

"ಸಾರ್ ಸುಮ್ನೆ ಪ್ರಚಾರ ಸಿಗಲಿ ಅಂತ ಬರೆದೆ ಸಾರ್... ನನ್ ಬಿಟ್ಬುಬಿಡಿ.'

ಆಗ ಬಿತ್ತು ಹಗೌಡನ ಕುಂಡೆ ಮೇಲೆರಡು ಒದೆ ನೋಡಿ... ಅವನು ಎಲ್ಲಾ ಸರಸರ ಒದರಿಬಿಟ್ಟ.

ಏನಾಗಿತ್ತೆಂದರೆ ಇಂದಿರಾ ಹತ್ಯೆಯಾದ ಮೂರ್‍ನಾಲ್ಕು ದಿನಗಳ ನಂತರ ಪ್ರಧಾನಿ ಕಚೇರಿಗೆ ಒಂದು ಪತ್ರ ಬಂದಿತ್ತು, ಅದರಲ್ಲಿ "ಅಕ್ಟೋಬರ್ 31 ನೇ ತಾರೀಖು ಇಂದಿರಾ ಗಾಂಧಿಯ ಅಂಗರಕ್ಷಕರೇ ಅವರ ಕೊಲೆ ಮಾಡುವ ಸಾಧ್ಯತೆ ಇದೆ. ದಯವಿಟ್ಟು ಈ ಬಗ್ಗೆ ಎಚ್ಚರವಹಿಸಿ" ಎಂಬ ಸಂದೇಶವಿತ್ತು, ಕೊನೆಯಲ್ಲಿ ಹಗೌಡ, ತೀರ್ಥಹಳ್ಳಿ, ಕರ್ನಾಟಕವೆಂಬ ವಿಳಾಸವೂ ಸ್ಪಷ್ಟವಾಗಿ ಕಾಣುವಂತಿತ್ತು, ಪ್ರಚಾರದ ತೆವಲಿಗೆ ಬಿದ್ದಿದ್ದ ಹಗೌಡ ಏನು ಮಾಡಿದ್ದನೆಂದರೆ ಇಂದಿರಾ ಹತ್ಯೆಯಾದ ಸುದ್ದಿ ಕೇಳಿದ ತಕ್ಷಣ "ಇಂದೆನಗೆ ಆಹಾರ ಸಿಕ್ಕಿತು" ಎಂದು ಅರ್ಜೆಂಟಾಗಿ ನಾಲ್ಕು ದಿನ ಹಿಂದಿನ ಡೇಟ್ ಹಾಕಿ ಹತ್ಯೆ ಪ್ರಯತ್ನ ನಡೆಯಬಹುದೆಂದು ತನಗೆ ಮಾಹಿತಿ ಸಿಕ್ಕಿದೆ, ಯಾವುದಕ್ಕೂ ಹುಷಾರಾಗಿರಿ' ಎಂಬರ್ಥದ ಪತ್ರ ಬರೆದು ಪೋಸ್ಟಿಗೆ ಹಾಕಿಬಿಟ್ಟಿದ್ದ. ಅದು ನಂತರ ತನಿಖಾ ತಂಡಕ್ಕೆ ಸಿಕ್ಕು ಅವರು ಏನೋ ಮಹತ್ವದ ಸುಳಿವು ಸಿಕ್ಕಿತೆಂದು ತೀರ್ಥಹಳ್ಳಿಗೆ ಓಡಿಬಂದಿದ್ದರು. ಇಲ್ಲಿ ನೋಡಿದರೆ ಆಸಾಮಿ ಸಿಕ್ಕನಾದರೂ ಎಡಬಿಡಂಗಿ ಥರ ಇದ್ದಾನೆ. ರೇಗಿ ಹೋದ ಅವರು ಹಗೌಡ ತಲೆ ಮೇಲೆ ಇನ್ನೆರಡು ಬಿಟ್ಟು "ಇನ್ನೊಂದ್ಸಾರಿ ಈ ಥರ ಮಾಡಿದ್ರೆ ಹುಷಾರ್" ಎಂದು ಗದರಿಸಿ ಹೊರಟುಹೋದರು. ಶಿವಮೊಗ್ಗೆ ಪೊಲೀಸರೂ "ಇವನದ್ದೊಳ್ಳೇ ತರಲೆ ಆಯಿತಲ್ಲ" ಅಂದುಕೊಂಡು ಸುಮ್ಮನಾಗಿಬಿಟ್ಟರು.

ಆದರೆ ಹಗೌಡ ಬುದ್ಧಿಕಲಿತ ಅಂದುಕೊಳ್ಳುತ್ತೀರಾ? ಊಹುಂ-ಖಂಡಿತಾ ಇಲ್ಲ.

ಆಮೇಲೆ ರಾಜೀವ್ ಗಾಂಧಿ ಹತ್ಯೆ ಆಯಿತಲ್ಲ, ಈ ಸುದ್ದಿ ಕೇಳಿ ಮತ್ತೆ ಎದ್ದು ಕುಳಿತ ಹಗೌಡ ಹತ್ಯೆಗೆ ನಾಲ್ಕು ದಿನ ಹಿಂದಿನ ದಿನಾಂಕ ನಮೂದಿಸಿ ಪ್ರಧಾನಿ ಕಚೇರಿಗೆ ಇನ್ನೊಂದು ಸಂದೇಶ ರವಾನಿಸಿಯೇ ಬಿಟ್ಟ.

ಅದರಲ್ಲಿ

"ಚುನಾವಣಾ ಪ್ರಚಾರಕ್ಕೆ ರಾಜೀವ್ ಗಾಂಧಿ ತಮಿಳುನಾಡಿಗೆ ಹೋದರೆ ಅಪಾಯ ಕಾದಿದೆ. ನನಗೆ ಸಿಕ್ಕಿರುವ ಇನ್‌ಫರ್‌ಮೇಷನ್ ಪ್ರಕಾರ ಎಲ್‌ಟಿಟಿಇ ಉಗ್ರರು ರಾಜೀವ್‌ರ ಕೊಲೆಗೆ ಎಲ್ಲಾ ಪ್ಲಾನ್ ಮಾಡಿಕೊಂಡಿದ್ದಾರೆ" ಎಂದೆಲ್ಲಾ ಬರೆದಿದ್ದ.

ಆಗ ಕಾರ್ತಿಕೇಯನ್‌ರ ಟೀಂ ರಾಜೀವ್ ಹತ್ಯೆಯ ತನಿಖೆ ನಡೆಸುತ್ತಿತ್ತು, ಯಾವಾಗ ಹಗೌಡನ ಪತ್ರ ಅವರ ಕೈಗೂ ತಲುಪಿತೊ ಅವರೊಂದು ಕಮ್ಯಾಂಡೋ ಆಪರೇಷನ್ ನಡೆಸಲು ಹೊರಟರು. ಅದು ಯಾಕೆಂದರೆ ಎಲ್‌ಟಿಟಿಇ ಉಗ್ರರೆಂದರೆ ಕೈಯಲ್ಲಿ ಬಾಂಬು, ಬಂದೂಕು, ಬಾಯಲ್ಲಿ ಸೈನೆಡ್ ಇರುವ ಮಂದಿ. ಹಗೌಡನೂ ಅದೇ ಗ್ಯಾಂಗ್ ಇರಬೇಕೆಂದು ಯೋಚಿಸಿ ಅವರು ಎಲ್ಲಾ ಮುಂಜಾಗ್ರತೆ ವಹಿಸಿ ಯಾರಿಗೂ ಸುಳಿವು ಕೊಡದೆ ನೇರ ತೀರ್ಥಹಳ್ಳಿಗೆ ಕಮ್ಯಾಂಡೋಗಳನ್ನು ರವಾನಿಸಿಬಿಟ್ಟರು. ಅವರು ಸ್ಥಳೀಯ ಪೊಲೀಸ್ ಸ್ಟೇಷನ್ನಿನಲ್ಲಿ ಹಗೌಡನ ಮನೆ ವಿಳಾಸ, ರೂಟ್ ಮ್ಯಾಪ್ ಎಲ್ಲಾ ತಿಳಿದುಕೊಂಡು ಹೊರಟರು. ಆಗ ಒಬ್ಬ ಸ್ಥಳೀಯ ಪೇದೆ ಕಿವಿಗೆ "ರಾಜೀವ್ ಗಾಂಧಿ, ಹಗೌಡ ಮೆಸೇಜು" ಎಂಬಿತ್ಯಾದಿ ಒಂದೆರಡು ಪದ ಕೇಳಿಸಿ ಅವನು "ಓ ನೀವು ಅದಕ್ಕಾ ಬಂದಿರೋದು" ಎನ್ನುತ್ತಾ ಹಗೌಡನ ಕೀರ್ತಿಯನ್ನು ಒಂದಿಬ್ಬರಿಗೆ ಹೇಳಿದನಾದರೂ ಅವರು ಕಿವಿಗೊಡದೆ ಹಗೌಡನ ಎಸ್ಟೇಟ್‌ಗೆ ಮುತ್ತಿಗೆ ಹಾಕೇಬಿಟ್ಟರು. ಮನೆ ಒಳಗೆ ಒಬ್ಬ ಭಯೋತ್ಪಾದಕ ಇದ್ದಾನೆಂತಲೇ ಅವರ ಲೆಕ್ಕಾಚಾರವಾಗಿತ್ತು, ಹಾಗಾಗಿ ಬುಲೆಟ್ ಪ್ರೂಫ್ ಜಾಕೆಟ್-ಟಿಯರ್ ಗ್ಯಾಸ್, ಗನ್, ಬೈನಾಕುಲರ್ ಎಲ್ಲಾ ಇಟ್ಟುಕೊಂಡಿದ್ದರು.

ಹಗೌಡನಿಗೆ ಇನ್ನು ಇದರ ವಾಸನೆಯೂ ಸಿಕ್ಕಿರಲಿಲ್ಲ, ಅವತ್ತು ಯಾವ ನಾಯಕನೂ ಹತ್ಯೆಯಾಗಿರಲಿಲ್ಲ ಹಾಗಾಗಿ ಎಚ್ಚರಿಕೆ ಪತ್ರ ಬರೆಯುವ ಗೋಜಿಲ್ಲದೆ ಅವನು ಮನೆಯೊಳಗೇ ಇದ್ದ.

ಇತ್ತ ಕಮ್ಯಾಂಡೋಗಳು ಮನೆಯೊಳಕ್ಕೆ ನಾಲ್ಕು ಟಿಯರ್ ಗ್ಯಾಸ್ ಶೆಲ್ ಸಿಡಿಸಿ ಕಿಟಕಿ, ಬಾಗಿಲು, ಹಿತ್ತಲು ಎಲ್ಲಾ ಕಡೆಗಳಿಂದಲೂ ಒಂದೇ ಸಾರಿ ಮನೆಯೊಳಕ್ಕೆ ನುಗ್ಗಿ ಬಂದರು.

ಒಳಗಡೆ ಶ್ರೀರಂಗನಾಥನಂತೆ ಕಾಲು ಚಾಚಿ ಸೋಫಾ ಮೇಲೆ ಮಲಗಿದ್ದ ಹಗೌಡನಿಗೆ ಮನೆ ತುಂಬಾ ಕವಿದಿದ್ದ ಹೊಗೆ ಟಿಯರ್ ಗ್ಯಾಸಿನದ್ದು ಅಂತ ಗೊತ್ತಾಗಲಿಲ್ಲ, ಮನೆ ಕೆಲಸದವಳನ್ನು ಬಯ್ಯುತ್ತಾ "ಲೇಯ್, ಯಾವಳೇ ಅದು ಅಡಿಗೆ ಮನೇಲಿ ಸೌದೆ ಹೊಗೆ ಬರ್‍ತಾ ಇದೆ, ಆರಿಸ್ರೇ ಅದನ್ನ" ಅನ್ನುತ್ತಾ ಕಣ್ಣುಜ್ಜಿಕೊಂಡು ನೋಡುತ್ತಾನೆ.

ಎದುರಿಗೆ ಗನ್‌ಧಾರಿ ಕಮ್ಯಾಂಡೋಗಳು ನಿಂತಿದ್ದಾರೆ.

ಪೊಲೀಸರು "ರಾಜೀವ್ ಗಾಂಧಿ ಕೊಲೆ ಆಗಬಹುದೂಂತ ನಿನಗ್ಯಾರು ಹೇಳಿದ್ರು, ನಿಂಗೇನ್ ಗೊತ್ತು, ಎಲ್ಲಾ ಹೇಳು" ಅಂದರು. ಹಗೌಡ ದೇಶಾವರಿ ನಗುತ್ತಾ "ನಂಗೇನೂ ಗೊತ್ತಿಲ್ಲ ಸುಮ್ಮನೆ ಹಾಗೆ ಬರೆದೆ" ಅಂದುಬಿಟ್ಟ. ಈ ಬಾರಿ ಅವನಿಗೆ ಬೇಜಾನ್ ಒದೆ ಬಿತ್ತು.

Next ಹಗೌಡ ಏನು ಮಾಡಿದನೆಂದರೆ ಎಸ್.ಎಂ. ಕೃಷ್ಣ ಮುಖ್ಯಮಂತ್ರಿಯಾಗಿದ್ದಾಗ ಒಂದು ಸಾರಿ ತೀರ್ಥಹಳ್ಳಿಗೆ ಹೋಗಿದ್ದರಂತೆ. ಪತ್ನಿ ಪ್ರೇಮಾರ ತವರೂರಲ್ಲವೇ ಅದು. ಆಗ ಸ್ಥಳೀಯ ಕಾಂಗ್ರೆಸ್ ಲೀಡರ್ ಆದ ಹಗೌಡ ಏಕಾಏಕಿ ಬಂದವನೇ "ನೀವು ತಿರುಪತಿನ ಕರ್ನಾಟಕಕ್ಕೆ Shift ಮಾಡಿಸಬೇಕು" ಅಂತ ಮನವಿ ಮಾಡಿದ್ದಾನೆ.

ಇವನ್ಯಾರೊ ತಲೆಕೆಟ್ಟ ಗಿರಾಕಿ ಅಂದುಕೊಂಡ ಕೃಷ್ಣ ಹಗೌಡನನ್ನು ನಿರ್ಲಕ್ಷಿಸಿಬಿಟ್ಟರು. ಇದರಿಂದ ಸಿಟ್ಟಾಗಿ ಮುಂದೆ ಇದೇ ಹಗೌಡ ಕೃಷ್ಣರಿಗೆ ಎಂತ tension ತಂದಿಟ್ಟುಬಿಟ್ಟ ಗೊತ್ತೆ?

ಅವನಿಗೆ ಹೇಗೂ ಬೆಂಗಳೂರಿನಲ್ಲಿ ಕಾಂಗ್ರೆಸ್ ಎಂಎಲ್‌ಎಗಳೊಂದಿಗೂ ಒಡನಾಟವಿತ್ತಲ್ಲ ಅವರ ಬಳಿ ಹೋಗಿ ಯಾವುದೋ ಬಡ ವಿದ್ಯಾರ್ಥಿಗೆ ಹಾಸ್ಟೆಲ್ ಸೀಟು, ಸ್ಕಾಲರ್ ಶಿಪ್‌ಗೆ ಶಿಫಾರಸ್ಸು ಪತ್ರ ಅಂತ ನೆಪಹೇಳಿ ಖಾಲಿ ಹಾಳೆ ಮೇಲೆ ಸಹಿ ಮಾಡಿಸಿಕೊಳ್ಳುತ್ತಾ ಹೋದ. ಎಲ್ಲೋ ಹೋಗುತ್ತಿರುವಾಗ, ದಾರೀಲಿ ಅಡ್ಡ ಸಿಕ್ಕಾಗ ತಕ್ಷಣ ಬೇಕೆಂದರೆ ಶಾಸಕರ ಲೆಟರ್ ಹೆಡ್ ಸಿಗಲ್ಲವಲ್ಲ, ಹಾಗಾಗಿ ಶಾಸಕರು ಖಾಲಿ ಹಾಳೆ ಮೇಲೆ ಸೈನ್ ಮಾಡಿ ಹಗೌಡನನ್ನು ಸಾಗಹಾಕುತ್ತಿದ್ದರು. ಹೇಗಿದ್ದರೂ ಗೊತ್ತಿರೋ ಮನುಷ್ಯ. ಇಷ್ಟಕ್ಕೂ ಕಾಂಗ್ರೆಸ್‌ನವನೇ. ಮೇಲಾಗಿ ವಿದ್ಯಾರ್ಥಿಗಳ ಕೆಲಸ ಅಂತ ಅವರು ನಂಬಿದ್ದರು.

ಹೀಗಿರುವಾಗ ಒಂದು ದಿನ ರಾಜ್ಯಪಾಲರಿಂದ ಮುಖ್ಯಮಂತ್ರಿ ಕೃಷ್ಣಾಗೆ ಒಂದು ಫೋನ್ ಕರೆ ಬಂತು.

"ಮಿ. ಕೃಷ್ಣ ಹತ್ತು ಜನ ಕಾಂಗ್ರೆಸ್ ಶಾಸಕರು ನಿಮ್ಮ ಸರ್ಕಾರಕ್ಕೆ ಬೆಂಬಲ ವಾಪಸ್ ತೆಗೆದುಕೊಂಡಿರುವುದಾಗಿ ತಿಳಿಸಿ ರಾಜೀನಾಮೆ ಪತ್ರ ಕಳಿಸಿದ್ದಾರೆ. ಏನಿದೆಲ್ಲಾ!? ವಿಚಾರಿಸಿ ಸ್ಪಷ್ಟಪಡಿಸಿ" ಅಂದಿದ್ದಾರೆ.

ಕಂಗಾಲಾದ ಕೃಷ್ಣ ಸಂಬಂಧಿಸಿದ ಶಾಸಕರನ್ನು ಕರೆಸಿ ಕೇಳಿದರೆ "ತಾಯಾಣೆಗೂ ಗೊತ್ತಿಲ್ಲ ಸಾರ್, ನಾವು ಲೆಟರ್ ಬರೆದಿಲ್ಲ" ಎನ್ನಬೇಕೆ?

ಸರಿ ಹಾಗಾದರೆ ಏನೀ ಲೆಟರ್ ಮರ್ಮ ಅಂತ ಗವರ್ನರ್ ಆಫೀಸಿಂದ ಜೆರಾಕ್ಸ್ ಪ್ರತಿ ತರಿಸಿ ನೋಡುತ್ತಿದ್ದಾಗ ಒಂದಿಬ್ಬರು ಶಾಸಕರಿಗೆ ತಾವು ಖಾಲಿ ಹಾಳೆಗೆ ಸಹಿ ಮಾಡಿ ಹಗೌಡನಿಗೆ ಕೊಟ್ಟಿದ್ದ ವಿಚಾರ ನೆನಪಾಗಿದೆ. ಇದನ್ನು ಕೇಳಿದ ಕೃಷ್ಣ ಹಗೌಡನನ್ನು ಕರೆಸಿ ಚೆನ್ನಾಗಿ ಬಯ್ದು ಕೊನೆಗೆ "ಯಾಕೆ ಹೀಗೆ ಮಾಡಿದೆ?" ಅಂದರಂತೆ.

"ಮಾಡದೆ ಏನು. ತಿರುಪತಿನಾ ಕರ್ನಾಟಕಕ್ಕೆ ತರಿಸಿ ಅಂತ ನಾನು ಕೇಳಿದರೆ ಕೇರ್ ಮಾಡಲಿಲ್ಲ, ಅದಕ್ಕೇ ಹಿಂಗ್ ಮಾಡಿದೆ" ಅಂದನಂತೆ ಭೂಪ.

ಅಯ್ಯೋ ವೆಂಕಟರಮಣ ಎಂದುಕೊಳ್ಳುತ್ತಾ ಕೃಷ್ಣ "ಅದೆಲ್ಲಿ ಸಾಧ್ಯರಿ" ಅಂದರೆ ಈ ಶನಿ ಮಹಾತ್ಮ "ನೀವು ಪ್ರಯತ್ನ ಮಾಡೋಣ ಅನ್ನಿ ಸಾಕು. ನಾನು ನಿಮ್ ತಂಟೆಗೇ ಬರಲ್ಲ" ಅಂದನಂತೆ ತಣ್ಣಗೆ.

ಅದಕ್ಕೆ ಕೃಷ್ಣ ತಕ್ಷಣ ಒಪ್ಪಿಕೊಂಡರೂಂತ ಸಪರೇಟಾಗಿ ಹೇಳಬೇಕಿಲ್ಲ ಅಲ್ಲವೆ.

ಇಂಥ ಪುಣ್ಯಾತ್ಮ ಹಗೌಡರು ಈಗಲೂ ಶಿವಮೊಗ್ಗ-ತೀರ್ಥಹಳ್ಳಿ-ಬೆಂಗಳೂರಿನಲ್ಲಿ ಸತ್ಯ 'ಹರಿಶ್ಚಂದ್ರ'ನಂತೆ ಓಡಾಡಿಕೊಂಡಿದ್ದಾರೆ.

ಒಂದು ಸಾರಿ ಇವನ ಉಪಟಳ ತಾಳಲಾರದೆ ಜಿಲ್ಲಾ ಪೊಲೀಸ್ ಅಧಿಕಾರಿ ಆಫೀಸಿಗೆ ಕರೆಸಿ ಛೀಮಾರಿ ಹಾಕಿ ಆಚೆಗೆ ದಬ್ಬಿಸಿದರಂತೆ. ಹೊರಗೆ ಗುರುತಿನವನೊಬ್ಬ "ಏನ್ ಹಗೌಡ್ರೆ ಇಲ್ಲಿ" ಅಂತ ಕೇಳಿದರೆ "ಏನಿಲ್ಲ ಎಸ್‌ಪಿ ಸಾಹೇಬ್ರು ನನ್ ಫ್ರೆಂಡು, ಮಾತಾಡ್ಸಕ್ಕೆ ಬಂದಿದ್ದೆ, ನಿಂದೇನಾದ್ರೂ ಕೆಲಸ ಇದ್ರೆ ಹೇಳು ಮಾಡಿಸಿಕೊಡ್ತೀನಿ" ಅನ್ನಬೇಕೆ!

ಮಲೆನಾಡಿನ ಹರಟೆಮಲ್ಲರಿಗೆ ಯಾವಾಗಲಾದರೂ ಖಾಯಿಶ್ ಬಂದಾಗ ಹಗೌಡನ ವಿಚಾರ ಎತ್ತಿಕೊಂಡರೆ ಮುಗಿದೇ ಹೋಯಿತು. ಒಂದಕ್ಕಿಂತ ಒಂದು ರಸವತ್ತಾದ ಪ್ರಸಂಗಗಳು ಹಾರಾಡಲು ಶುರು.

ಹುತಾತ್ಮರ ದಿನದ ನೆನಪಿನಲ್ಲಿ ಹರಿಶ್ಚಂದ್ರನ ತುಂಡಾದ ಮಹಾತ್ಮ ಹಗೌಡರಿಗೆ ದೂರದಿಂದಲೇ ನಮೋನಮಃ!! ■

ನಾಟಕಕಾರನಿಗೆ ನಮನ....

ಕಳೆದ ವಾರ 'ಲಂಕೇಶ್' ಇಬ್ಬರು ಹೋರಾಟಗಾರರಿ
ಶ್ರದ್ಧಾಂಜಲಿ ಸಮರ್ಪಿಸಿತು. ಪತ್ರಿಕೆಯನ್ನು ಈ ಕಾರ್ಯಕ್ಕಾ
ಶ್ಲಾಘಿಸುತ್ತಾ ನಾನೂ ಪತ್ರಿಕೆಯ ಮೂಲಕ ಶ್ರದ್ಧಾಂಜಲಿ ಸಮರ್ಪಿ
ಬಯಸುತ್ತೇನೆ. ಅಕ್ಟೋಬರ್ 26 ರಂದು ಕುಂದಾಪುರ ಸಮು
ದಾಯ 'ಗಾಂಧಿ' ಒಂದು ಅಧ್ಯಯನ ಗೋಷ್ಠಿಯನ್ನು ಏರ್ಪ
ಸಿತ್ತು, ಇದರಲ್ಲಿ ಖ್ಯಾತ ಚಿಂತಕ ಡಾ. ಭಾಸ್ಕರಮಯ್ಯ ಉಪನ್ಯಾ
ನೀಡುವುದಿತ್ತು ಮತ್ತು ಹಲವಾರು ಗಣ್ಯರು ಸಂವಾದದ
ಪಾಲ್ಗೊಳ್ಳುವುದಿತ್ತು. ಈ ಕಾರ್ಯಕ್ರಮವು ಆರ್.ವಿ
ಭಂಡಾರಿಯವರು ರಚಿಸಿದ 'ನಾನೂ ಗಾಂಧಿ ಆಗ್ತೇನೆ' ಎಂಬ
ಮಕ್ಕಳ ನಾಟಕದಿಂದ ಆರಂಭವಾಗುವುದಿತ್ತು. ಕೋಟೇಶ್ವ
ಪದವಿಪೂರ್ವ ಕಾಲೇಜಿನ ಎಂಟನೇ ತರಗತಿಯ ವಿದ್ಯಾರ್ಥಿ
ಗಳಿಗೆ ಆ ನಾಟಕವನ್ನು ನಾನು ನಿರ್ದೇಶಿಸಿದ್ದೆ. ಹಿಂದಿನ ರಾ
ಅಂದರೆ ದಿ.25 ರಂದು ಕಾರ್ಯಕ್ರಮದ ವೇದಿಕೆಗಾಗಿ ಗಾಂಧಿಯ
ಚಿತ್ರ ಬಿಡಿಸುತ್ತಾ ಕುಳಿತಿದ್ದಾಗ ಸುದ್ದಿ ಬಂತು ಆರ್.ವಿ
ಭಂಡಾರಿಯವರು ಇನ್ನಿಲ್ಲವೆಂದು. ನಾಟಕದ ಮೊದಲ ಪ್ರ
ರ್ಶನವೇ ನಾಟಕಕಾರನಿಗೆ ಶ್ರದ್ಧಾಂಜಲಿಯಾಗಿ ಬಿಟ್ಟದ್ದು ನಿಜಕ್ಕೂ
ನಮ್ಮ ದುರಂತ. ನಮ್ಮ ಮಕ್ಕಳು ನಾಟಕದ ಕೊನೆಯ
"ಓ... ಅನಂತವಾಗಿರು" ಎಂದು ಹಾಡುತ್ತಾರೆ.

ನಾನು, ನಮ್ಮ ತಂಡದ ಮಕ್ಕಳು ಮತ್ತೊಮ್ಮೆ ಪತ್ರಿಕೆಯ
ಮೂಲಕ ಆ ಹಿರಿಯ ಚೇತನಕ್ಕೆ ಭಾವಪೂರ್ಣ ಶ್ರದ್ಧಾಂಜ
ಸಮರ್ಪಿಸುತ್ತೇವೆ.

-ಸಂತೋಷ ಗುಡ್ಡಿಯಂಗಡಿ, ಕುಂದಾಪು

ಭಜರಂಗಿಗಳಿಗೆ ಕ್ರಿಶ್ಚಿಯನ್ನರ ಮೇಲೆ ತಮ್ಮ ಅಸಹನೆಯನ್ನು
ಕಾರಲು 'ಸತ್ಯದರ್ಶಿನಿ' ಪುಸ್ತಕ ಕೇವಲ ನೆಪಕ್ಕಷ್ಟೆ. (ಸತ್ಯದರ್ಶಿನಿ
ನ್ಯೂಲೈಫ್‌ಗೆ ಸಂಬಂಧಿಸಿರದ ಕ್ರಿಶ್ಚಿಯನ್ನರ ಮೇಲೂ ಈ
ಕಿಡಿಗೇಡಿಗಳು ಹಲ್ಲೆ ನಡೆಸಿದ ಉದಾಹರಣೆಗಳು ದೇಶದ
ಸಾಕಷ್ಟಿವೆ).

ಈ ಸತ್ಯದರ್ಶಿನಿಗಿಂತ ಸುಂದರವಾಗಿ ಹಿಂದೂಗಳ ದೇವ
ರನ್ನು ಕೊಂಡಾಡಿದಂತಹ ಮೂರ್ತಿರಾಯರ 'ದೇವರು' ಪುಸ್ತಕ
ವಿಚಾರಗಳನ್ನ (ಅ.22) ಪ್ರಕಟಿಸಿದ್ದೀರಿ. ಇದ್ದದ್ದನ್ನು ಇದ್ದಂತೆ
ಹೇಳುವ ಸಜ್ಜನ ಶತಾಯುಷಿ ಬರಹಗಾರರಾಗಿದ್ದ ಶ್ರೀಯುತ
ಎ.ಎನ್.ಮೂರ್ತಿರಾಯರ ಇನ್ನೊಂದು ಕೃತಿ 'ಪೂರ್ವ ಸೂರಿ
ಗಳೊಡನೆ' (ಓದಲೇಬೇಕಾದ ಒಂದು ವೈಚಾರಿಕ ಕೃತಿ)ಯಲ್ಲಿ
ಉಲ್ಲೇಖಿತವಾದ ರಾಯರ ಅನುಭವವೊಂದು ಹೀಗಿದೆ
1930-32ರ ಸುಮಾರಿಗೆ ಆಂಗ್ಲವಿದ್ಯೆಯ ಸಂಪರ್ಕವೇ ಇರದ
ಹಳೆಯ ಕಾಲದ
ಸಂಪ್ರದಾಯಸ್ಥ
ವೈದಿಕರಾದ ನನ್ನ
ದೂರದ ಸಂಬಂಧಿ
ಹರಿಭಟ್ಟರನ್ನು
ಸಂತೋಷಗೊಳಿಸಲು
ಲೋಕಾಭಿರಾಮವಾಗಿ
ಮಾತಾಡುತ್ತ
ರಾಮನನ್ನು

ತೆಗಳಿಕೆ
ಹೊಗಳಿಕೆ

ಹೊಗಳಿದೆ. (ಭಟ್ಟರು ಪ್ರತಿದಿವಸ ರಾಮಾಯಣ ಪಾರಾಯಣ
ಮಾಡುತ್ತಿದ್ದರು. ನಾನು ಅವರೊಂದಿಗೆ ರಾಮಾಯಣದ ಬಗ್ಗೆ
ಮಾತಾಡುತ್ತಿದ್ದೆ). ನನ್ನ ಮಾತಿಗುತ್ತರವಾಗಿ ಭಟ್ಟರು ಖಾರವಾಗಿ-
"ಏನು ರಾಮನಯ್ಯಾ? ಆ ನಿನ್ನ ರಾಮ ಶುದ್ಧ ಬೇಕೂಫ
ಕಣಯ್ಯ" ಎಂದು ಅದಕ್ಕೆ ಪೂರಕವಾಗಿ ಯುದ್ಧಕಾಂಡದ- ನ
ಹಿ ತ್ವಾಂ ಶ್ಲೋಕವನ್ನು ಹೇಳಿ ಅದರ ಅರ್ಥವನ್ನು ವಿವರಿಸಿದರು
ರಾಮನಲ್ಲಿ ಭಕ್ತಿ ಇರುವ ಇವರೇ ಹೀಗಂದದ್ದನ್ನು ನೋಡಿ
ಭಕ್ತಿಬಾಹಿರನಾದ ನನಗೇ ಅಚ್ಚರಿಯಾಯಿತು. ನನ್ನಂತವನಿಗೆ
ಇಂದಿಗೂ ಇಂತಹ ಮಾತಾಡಲು ಹಿಂಜರಿಕೆಯಿದೆ. (ಪೂರ್ವ
ಸೂರಿಗಳೊಡನೆ- ಪುಟ 24-25) ಎಂದು ವಿವರಿಸಿದ್ದಾರೆ.


ರಾಮಭಕ್ತ ಹರಿಭಕ್ತರನ್ನೇ ಕೆರಳಿಸಿದ ಶ್ಲೋಕ ಈ ರೀತಿ
ಇದೆ-

ನ ಹಿ ತ್ವಾಂ ರಾವಣೋ ದೃಷ್ಟ್ವಾ ದಿವ್ಯರೂಪಾಂ
ಮನೋರಮಾಂ

ಮರ್ಷಯೇತ ಚಿರಂ ಸೀತೇ ಸ್ವಗೃಹೇ ಪರಿವರ್ತಿನೀಂ
(ಯು.ಕಾಂ. 118-24)

ಯುದ್ಧ ಮುಗಿದು ಸೀತೆಯನ್ನು ಕರೆದು ಸಂತೈಸುವ
ಬದಲು ಅವಳನ್ನು ಎಲ್ಲರ ಸಮ್ಮುಖದಲ್ಲಿ ರಾಮ "ತನ್ನ
ಮನೆಯಲ್ಲೇ ಇರುವ ಈ ನಿನ್ನ ದಿವ್ಯ ಮನೋಹರ ರೂಪವನ್ನು
ಕಂಡು ರಾವಣ ಖಂಡಿತ ಬಹಳ ಕಾಲ ಸಹಿಸಿಕೊಂಡಿರಲು
ಸಾಧ್ಯವೇ ಇಲ್ಲ."ಎಂದನೆಂದು ಈ ಶ್ಲೋಕ ಹೇಳುತ್ತದೆ. ಅಂದರೆ
ಇಷ್ಟೆಲ್ಲ ಮಾಡಿ ಕೊನೆಗೆ ಆಕೆಯ 'ಪರಿಶುದ್ಧತೆ'ಯ ಬಗ್ಗೆ
ಅದೂ ಎಲ್ಲರ ಸಮ್ಮುಖದಲ್ಲಿ ಸಮಯಾಸಮಯಗಳ ಪರಿಗಣನೆ
ಇಲ್ಲದೇ ಅಪನಂಬಿಕೆ ತೋರುತ್ತಾನೆಂದರೆ ಆ ಹರಿಭಟ್ಟರು
ರಾಮನಿಗೆ ನೀಡಿದ ಕರ್ಣಕಠೋರ ಬಿರುದಾವಳಿಯಲ್ಲಿ
ಯಾವುದೇ ತಪ್ಪಿಲ್ಲ ಎನ್ನಿಸುತ್ತದಲ್ಲವೇ?

-ರವಿ ಪುತ್ತೂರ, ದಕ್ಷಿಣ ಕನ್ನಡ





ಬರಲಿರುವ ಬಾಲ-ಗ್ರಹ!

ಮುಂದಿನ ವಾರ ಒಂದು ಸಣ್ಣ ತಾರಾ ಸಮರ ನಡೆಯಲಿದೆ. ಸಿಕ್ಸ್ ಪ್ಯಾಕ್ ಖ್ಯಾತಿಯ ವಿಜಯ್ ನಟಿಸಿರುವ 'ಸ್ಲಂ ಬಾಲ' ಮತ್ತು ಛಾಲೆಂಜಿಂಗ್ ಸ್ಟಾರ್ ದರ್ಶನ್ ಅತಿಥಿ ನಟನಾಗಿ ಕಾಣಿಸಿರುವ 'ನವಗ್ರಹ' ಒಂದೇ ದಿನ ತೆರೆ ಕಾಣಲಿದೆ.

'ದುನಿಯಾ' ಚಿತ್ರದ ನಂತರ ಮಾರುಕಟ್ಟೆ ಕಳೆದುಕೊಂಡಿರುವ ವಿಜಯ್ ಈ ಚಿತ್ರದ ಮುಖಾಂತರ ಮತ್ತೆ ಲೈಮ್ ಲೈಟಿಗೆ ಬರುತ್ತಾರೆ ಎನ್ನುತ್ತಾರೆ ಗಾಂಧಿನಗರದ ಪಂಡಿತರು. ಹಾಗೆಯೇ ದರ್ಶನ್ ಮತ್ತು ದಿನಕರ್ ಕಾಂಬಿನೇಷನ್‌ನ 'ನವಗ್ರಹದ' ಬಗ್ಗೆಯೂ ಬಾಜಿದಾರರು ಕುತೂಹಲ ಹೊಂದಿದ್ದಾರೆ. 'ನವಗ್ರಹ' ಗೆದ್ದರೆ ದರ್ಶನ್ ಮಾತ್ರವಲ್ಲ, ದಿನಕರ್ ಮಾರುಕಟ್ಟೆಯೂ ಏಕ್‌ದಂ ಏರುವುದು ಗ್ಯಾರಂಟಿ.

ಹೀಗಾಗಿ ಎರಡೂ ಚಿತ್ರದ ಬಗ್ಗೆ ವಿಚಿತ್ರವಾದ ನಿರೀಕ್ಷೆ ಮತ್ತು ಪರೋಕ್ಷವಾದ ಪೈಪೋಟಿ ಇದೆ. ಏನಾಗುತ್ತೋ ನೋಡೋಣ!





ರಘುದೀಕ್ಷಿತ್

'ಕರುನಾಡು' ಕಟ್ ಆಗಿದ್ದೇಕೆ?

ದೇವದತ್ತ ನಿರ್ದೇಶನದ ಮತ್ತು ರಘು ದೀಕ್ಷಿತ್ ಸಂಗೀತ ನಿರ್ದೇಶನದ 'ಸೈಕೋ' ಚಿತ್ರ ಬಿಡುಗಡೆಯಾಗಿದೆ. ಈ ಚಿತ್ರವನ್ನು ನೋಡಬೇಕು ಎಂದು ಅನಿಸಿದ್ದೇ ರಘು ದೀಕ್ಷಿತ್ ಅವರ ಏರುಸ್ತಾಯಿ ಸಂಗೀತದ ಮೋಡಿಯಿಂದ. ಅದರಲ್ಲೂ 'ನಿನ್ನಾ ಪೂಜೆಗೆ ಬಂದೇ ಮಾದೇಶ್ವರಾ....' ಹಾಡಂತೂ ಸಖತ್ ಪಾಪ್ಯುಲರ್ ಆಗಿದೆ. ಈ ಹಾಡಿಗಿಂತ ಮೊದಲು 'ನಮ್ಮ ನಾಡು... ಕರುನಾಡು...' ಹಾಡು ರೇಡಿಯೋ ಕೇಳುಗರ ಮನಸ್ಸನ್ನು ಗೆದ್ದಿತ್ತು, ಕನಿಷ್ಠವೆಂದರೂ ದಿನಕ್ಕೆ ಹತ್ತಿಪ್ಪತ್ತು ಬಾರಿ ಈ ಹಾಡು ಪ್ರಸಾರವಾಗುತ್ತಿತ್ತು.

ಆದರೆ ಈಗ ರಾಜ್ಯೋತ್ಸವದ ಮುನ್ನಾ ದಿನ ಬಿಡುಗಡೆಯಾದ ಈ ಚಿತ್ರದಲ್ಲಿ ಕನ್ನಡದ ಆ ಹಾಡೇ ಇಲ್ಲ. ರಾಜ್ಯೋತ್ಸವದ ಈ ಮಾಸದಲ್ಲಿ ಆ ಹಾಡು ಚಿತ್ರದಲ್ಲಿ ಉಳಿಸಿಕೊಂಡಿದ್ದರೆ ಅದು ಅವರಿಗೆ ಖಂಡಿತವಾಗಿಯೂ ಪ್ಲಸ್ ಪಾಯಿಂಟ್ ಆಗುತ್ತಿತ್ತು. ಯಾವ್ಯಾವುದೋ ಸಂದರ್ಭದಲ್ಲಿ ಬಿಡುಗಡೆಯಾಗುವ ಚಿತ್ರಗಳಲ್ಲಿ ಕನ್ನಡ ಹಾಡಿರುತ್ತದೆ. ಆದರೆ ಇಲ್ಲಿ ಚಿತ್ರದ ನಿರ್ಮಾಪಕ ಗುರುದತ್ ಮತ್ತು ದೇವದತ್ತ ಈ ಹಾಡನ್ನು ಯಾಕೆ ಕತ್ತರಿಸಿದ್ದಾರೋ ಗೊತ್ತಿಲ್ಲ. ಇಷ್ಟಾಗಿಯೂ ಆ ಹಾಡು ಇರಬೇಕೋ ಇರಬಾರದೋ ಎಂಬುದು ನಿರ್ದೇಶಕನಿಗೇ ಬಿಟ್ಟಿದ್ದು. ಆದರೆ ಪಾಪ್ಯುಲರ್ ಹಾಡು ಚಿತ್ರದಲ್ಲಿಲ್ಲದಾಗ ಚಿತ್ರ ನೋಡುವವರಿಗೆ ನಿರಾಸೆಯಾಗುವುದು ಸಹಜ. ಇದು ಕನ್ನಡದ ಅಭಿಮಾನಿಗಳಿಗೆ ಮಾತ್ರವಲ್ಲ, ರಘು ದೀಕ್ಷಿತ್ ಅಭಿಮಾನಿಗಳಿಗೂ ಬೇಸರ ಹುಟ್ಟಿಸಿದೆ.


ಮೈಸೂರ್ ಪಾಕ್!


ಸೈಕೋ ತಂಡ

ಮೈಸೂರು ಇತ್ತೀಚಿಗೆ ಸೃಜನಶೀಲತೆಯ ಕೇಂದ್ರಬಿಂದು ಆಗಿ ಬೆಳೆಯುತ್ತಿದೆ. ಹಿಂದೆ ಶಂಕರ್‌ಸಿಂಗ್, ಆನಂತರ ಎಂ.ಪಿ. ಶಂಕರ್ ಮೈಸೂರಲ್ಲಿ ತಮ್ಮ ಚಿತ್ರ ಸಂಸ್ಥೆಯನ್ನು ಕಟ್ಟಿದ್ದರು. ಇತ್ತೀಚಿಗೆ ಮೈಸೂರಿನ ಸ್ನೇಹಿತರಾದ ನಿರ್ದೇಶಕ ರತ್ನಜಾ ಮತ್ತು ನಿರ್ಮಾಪಕ ಅಜಯ್ ಗೌಡ ಜೊತೆ ಸೇರಿ 'ನೆನಪಿರಲಿ' ಮತ್ತು 'ಹೊಂಗನಸು' ಚಿತ್ರಗಳನ್ನು ಮಾಡಿದ್ದರು. ಮೊದಲ ಚಿತ್ರ ಅವರಿಗೆ ಒಳ್ಳೆಯ ಹೆಸರನ್ನು ತಂದು ಕೊಟ್ಟಿತ್ತು.

ಇದೀಗ ಅವರ ಹಾದಿಯಲ್ಲೇ 'ಸೈಕೋ' ತಂಡವಿದೆ. ಇದರ ನಿರ್ದೇಶಕ ದೇವದತ್ತ, ನಿರ್ಮಾಪಕ ಗುರುದತ್ತ, ಸಂಗೀತ ನಿರ್ದೇಶಕ ರಘು ದೀಕ್ಷಿತ್ ಮತ್ತು ನಾಯಕನಟ ಧನುಷ್ ಇವರೆಲ್ಲರೂ ಸ್ನೇಹಿತರು ಮಾತ್ರವಲ್ಲ, ಎಲ್ಲರೂ ಮೈಸೂರಿನವರೆ. ಈ ಮೈಸೂರಿನ ಗ್ಯಾಂಗ್ ಇನ್ನೊಂದು ಚಿತ್ರವನ್ನು ಸದ್ಯದಲ್ಲೇ ಅರಂಭಿಸಲಿದೆಯಂತೆ.

ಮಿನುಗಲಿದೆ ನಕ್ಷತ್ರ!



ರಾಜೇಂದ್ರಬಾಬು

ನಕ್ಷತ್ರ ಎಂಬ ಹೊಸ ನಾಯಕಿ ಸದ್ಯದಲ್ಲೇ ಕನ್ನಡ ಚಿತ್ರರಂಗದ ದಿಗಂತದಲ್ಲಿ ಮಿನುಗಲಿದ್ದಾಳೆ. ಆಕೆ ಜನಪ್ರಿಯ ನಿರ್ದೇಶಕ ರಾಜೇಂದ್ರ ಬಾಬು ಅವರ ಮಗಳು. ಬಾಬು ಅವರ ಹಿರಿ ಮಗಳು ಉಮಾ ಈಗಾಗಲೇ ಉಪೇಂದ್ರ ಜೊತೆ 'ಉಪ್ಪಿದಾದಾ ಎಂಬಿಬಿಎಸ್' ಚಿತ್ರ ಸೇರಿದಂತೆ ಅನೇಕ ತಮಿಳು ಚಿತ್ರಗಳಲ್ಲಿ ನಟಿಸಿದ್ದಾಕೆ. ಬಾಬು ಪತ್ನಿ ಸುಮಿತ್ರಾ ಕೂಡಾ ದಕ್ಷಿಣ ಭಾರತದ ಚಿತ್ರ ಪ್ರೇಕ್ಷಕರಿಗೆಲ್ಲಾ ಪರಿಚಿತವಾದ ಮುಖ. ಈಗ ಅವರ ಮನೆಯ ಮತ್ತೊಂದು ಕುಡಿ ಕಲಾವಿದೆಯಾಗುತ್ತಿರುವುದು ಸಂತೋಷದ ವಿಷಯ.

ಅಂದಹಾಗೆ ನಕ್ಷತ್ರಳನ್ನು ಅತ್ಯಂತ ದೊಡ್ಡ ಮಟ್ಟದಲ್ಲಿ ಉದ್ಯಮಕ್ಕೆ ಮುಂದಿನ ವಾರ ಪರಿಚಯಿಸಲಾಗುತ್ತಿದೆ ಆಕೆ ನಟಿಸುವ ಚಿತ್ರ, ನಿರ್ದೇಶಕರ ಹೆಸರು ಎಲ್ಲವನ್ನೂ ಗೌಪ್ಯವಾಗಿಡಲಾಗಿದೆ. ಏನೇ ಇರಲಿ ನಕ್ಷತ್ರ ಮಿನುಗಲಿ ಎಂಬುದಷ್ಟೇ ನಮ್ಮ ಹಾರೈಕೆ.


ನಕ್ಷತ್ರ

ಚಂದ್ರುಗೆ ಎಲ್ಲೆಲ್ಲೂ ಶೋಕವೆ!


ಮುಖ್ಯಮಂತ್ರಿ ಚಂದ್ರು


ಮುಖ್ಯಮಂತ್ರಿ ಚಂದ್ರು ಬಗ್ಗೆ ಅಯ್ಯೋ ಪಾಪ ಅನಿಸುತ್ತಿದೆ. ಒಂದೆಡೆ ನಟನೆ ಇನ್ನೊಂದೆಡೆ ರಾಜಕೀಯ ಆಕಾಂಕ್ಷೆ ಎರಡನ್ನೂ ನಿರ್ವಹಿಸುತ್ತಾ ಬಂದಿರುವ ಚಂದ್ರು ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾದ ಮೇಲಾದರೂ ನಗುನಗುತ್ತಾ ಇರುತ್ತಾರೆ ಎಂಬ ನಿರೀಕ್ಷೆ ಸುಳ್ಳಾಗಿದೆ.

ಕುಮಾರಸ್ವಾಮಿ-ಯಡಿಯೂರಪ್ಪ ನೇತೃತ್ವದ ಸಮ್ಮಿಶ್ರ ಸರ್ಕಾರದ ಅಧಿಕಾರದಲ್ಲಿದ್ದಾಗ ತನಗೆ ಯಾವ ಹುದ್ದೆಯನ್ನೂ ನೀಡಿರಲಿಲ್ಲ ಎಂದು ಈ ಚಂದ್ರು ತುಂಬಾ ಕೊರಗಿದ್ದರು. ಆ ಕೊರಗು ಇವತ್ತಿಗೂ ನಿಂತಿಲ್ಲ. ಇತ್ತೀಚಿಗೆ ಬ್ರಿಟನ್‌ನಲ್ಲಿ ನಡೆದ ವಿಶ್ವ ಕನ್ನಡ ಸಮ್ಮೇಳನಕ್ಕೆ ಇವರನ್ನು ಅತಿಥಿಯಾಗಿ ಕರೆದಿದ್ದರು. ಆದರೆ ಆ ಸಮಾರಂಭದ ವೇದಿಕೆಗೆ ಇವರನ್ನು ಕರೆಯದೇ ಸಭಿಕರ ನಡುವೆಯೇ ಕೂರಿಸಿದ್ದಕ್ಕೆ ಚಂದ್ರು ಗೋಳೋ ಎಂದು ಅತ್ತಿದ್ದರು. ಆನಂತರ ಅಮೆರಿಕದಲ್ಲಿ ನಡೆದ ವಿಶ್ವ ಕನ್ನಡ ಸಮ್ಮೇಳನದಲ್ಲೂ ಇದೇ ಅವಸ್ಥೆ ರಿಪೀಟ್ ಆಗುವುದು ಸ್ವಲ್ಪದರಲ್ಲೇ ತಪ್ಪಿಹೋಯಿತು.

ಇದೀಗ ಹಂಪಿ ಉತ್ಸವ ಮತ್ತು ರಾಜ್ಯೋತ್ಸವ ಸಮಾರಂಭದ ಆಹ್ವಾನ ಪತ್ರಿಕೆಯಲ್ಲಿ ತನ್ನ ಹೆಸರಿಲ್ಲ ಎಂದು ಚಂದ್ರು ಪತ್ರಿಕಾಗೋಷ್ಠಿ ಕರೆದು ಪತ್ರಕರ್ತರ ಮುಂದೆ ತನ್ನ ಗೋಳನ್ನು ತೋಡಿಕೊಂಡಿದ್ದಾರೆ.

ಬ್ರಿಟನ್, ಅಮೆರಿಕ ಮತ್ತು ಇದೀಗ ಹಂಪಿ ಮತ್ತು ಬೆಂಗಳೂರು... ಎಲ್ಲೆಲ್ಲೂ ಚಂದ್ರುಗೆ ಬರೀ ಶೋಕವೆ!

ದೇಸಾಯಿಯ ಸರಿಗಮ


ಸುನೀಲ್‌ಕುಮಾರ್ ದೇಸಾಯಿ

ಹಲವಾರು ವರ್ಷಗಳ ಬಲವಂತದ ವಿರಾಮ ಮತ್ತು ಅಜ್ಞಾತವಾಸದ ನಂತರ ಸುನಿಲ್ ಕುಮಾರ್ ದೇಸಾಯಿ ಮತ್ತೆ ಚಿತ್ರ ನಿರ್ದೇಶಿಸಲು ಬಂದಿದ್ದಾರೆ. ಈ ಚಿತ್ರಕ್ಕೆ ಪ್ರಜ್ವಲ್ ನಾಯಕ. ಚಿತ್ರದ ಹೆಸರು 'ಸರಿಗಮ'. ದೇಸಾಯಿಯಂತಹ ಸೃಜನಶೀಲ ನಿರ್ದೇಶಕರು ಮತ್ತೆ ಬರುತ್ತಿರುವುದು ಸ್ವಾಗತಾರ್ಹ. ಹಿಂದೊಮ್ಮೆ "ನನ್ನ ಚಿತ್ರ ಯಶಸ್ಸು ಕಾಣದಿದ್ದರೆ ಕ್ಲಾಸ್ ಬಾಯ್ ಆಗುತ್ತೀನಿ" ಎಂದು ದೇಸಾಯಿ ಭಾವನಾತ್ಮಕವಾಗಿ ನುಡಿದಿದ್ದರು. ಅವರ ಬ್ಯಾಡ್‌ಲಕ್ ಚಿತ್ರ ಗಲ್ಲಾಪೆಟ್ಟಿಗೆಯಲ್ಲಿ ಸೋತಿತ್ತು. ಅದೆಲ್ಲ ಏನೇ ಇರಲಿ, ದೇಸಾಯಿ ಪುನರಾಗಮನ ಎಲ್ಲರಿಗೂ ಸಂತೋಷ ನೀಡಿದೆ.


ಛಾಲೆಂಜಿಂಗ್ ಸ್ಟಾರ್‌ಗೆ ಛಾಲೆಂಜ್!

ದರ್ಶನ್ ಪಾಲಿಗೆ ಇದು ಸಂತಸದ ಸಮಯ. ಮೊನ್ನೆ ರಾಜ್ಯೋತ್ಸವದ ಮುನ್ನಾದಿನ ಅವರ ಸಂಸಾರಕ್ಕೆ ಹೊಸ ಸೇರ್ಪಡೆಯಾಗಿದೆ. ಅರ್ಥಾತ್ ದರ್ಶನ್ ಈಗ ಪುಟ್ಟ ಮಗನ ತಂದೆಯಾಗಿದ್ದಾರೆ. ಮರಿ ದರ್ಶನನ ಆಗಮನದಿಂದ ದರ್ಶನ್ ಕುಣಿದು ಕುಪ್ಪಳಿಸುತ್ತಿದ್ದಾರೆ. 'ನವಗ್ರಹ' ಬಿಡುಗಡೆಯಾಗುವ ಮೊದಲೇ ದರ್ಶನ್ ಶುಕ್ರದೆಸೆ ಆರಂಭವಾಗಿದೆ. ಮರಿ ದರ್ಶನನನ್ನು ಚೆನ್ನಾಗಿ ಬೆಳೆಸುವ ಛಾಲೆಂಜ್ ಈ ಛಾಲೆಂಜಿಂಗ್ ಸ್ಟಾರ್ ಮುಂದಿದೆ.


ರಕ್ಷಿತಾ

ಅಂದಹಾಗೆ ರಾಜ್ಯೋತ್ಸವದ ದಿನದಂದೇ ತನ್ನ ಮಗುವನ್ನು ಹೆರಬೇಕೆಂಬ ಹೆಬ್ಬಯಕೆ ಹೊಂದಿದ್ದ ಮಾಜಿ ನಟಿ ರಕ್ಷಿತಾ ಕೂಡಾ ಇಂದು ನಾಳೆ ತಾಯಿಯಾಗುವ ಸಂಭ್ರಮದಲ್ಲಿದ್ದಾಳೆ. ಈ ಬಗ್ಗೆ ಬ್ರೇಕಿಂಗ್ ನ್ಯೂಸ್ ಕೊಡಲು ಟೀವಿಯವರು ಕಾಯುತ್ತಾ ಕುಳಿತುಕೊಂಡಿದ್ದಾರೆ.

ಮತ್ತೊಂದೆಡೆ ವಿಜಯ ರಾಘವೇಂದ್ರ ಕೂಡಾ ಮುಂದಿನ ವಾರದೊಳಗಾಗಿ ತಂದೆಯಾಗಿ ಬಡ್ತಿ ಪಡೆಯುವುದು ಬಹುತೇಕ ಖಚಿತವಾಗಿದೆ. ಅಂದರೆ, 2025ನೇ ಇಸವಿಯಲ್ಲಿ ಕನ್ನಡ ನಾಯಕ ನಾಯಕಿಯರ ಕೊರತೆ ಇರುವುದಿಲ್ಲ ಎಂದಾಯಿತು ಅಲ್ಲವೆ?


ಜೋಷಿ

ಜೋಶಿ 'ಜಾಲ'

ಟಿ.ಎನ್. ಸೀತಾರಾಮ್ ಅವರ ಬಲಗೈ ಬಂಟನಂತಿದ್ದ ನಾಗನಾಥ ಜೋಷಿ ಈಗ ಹೊಸ ಪ್ರತಿಭೆಗಳೊಂದಿಗೆ 'ಜಾಲ'ವನ್ನು ಬೇಧಿಸ ಹೊರಟಿದ್ದಾರೆ.

'ಮಾಯಾಮೃಗ', 'ಮನ್ವಂತರ' ಹಾಗೂ ಟಿಎನ್ನೆಸ್ ಮೊದಲ ಬಾರಿ ನಿರ್ದೇಶಿಸಿದ 'ಮತದಾನ' ಚಿತ್ರಗಳಿಗೆ ಅಸೋಸಿಯೇಟ್ ಆಗಿದ್ದ ಜೋಷಿ ಈಗ 'ಜಾಲ' ಎಂಬ ಚಿತ್ರವನ್ನು ನಿರ್ದೇಶಿಸುವ ಮೂಲಕ ಬೆಳ್ಳಿ ತೆರೆಗೂ ಎಂಟ್ರಿ ಕೊಡುತ್ತಿದ್ದಾರೆ.

'ಜಾಲ' ಎಂಬ ಶೀರ್ಷಿಕೆ ಕೇಳಿದಕೂಡಲೆ ಕುತೂಹಲಕಾರಿ ಸಿನೆಮಾ ಅನಿಸುವುದು ಸಹಜ. ಆದರೆ 'ಜಾಲ'ದ ಕಥಾವಸ್ತುವೇ ಬೇರೆಯಂತೆ. ದಟ್ಟ ಅರಣ್ಯದಲ್ಲಿ ಬಳಲುತ್ತಾ ಬೆಳೆಯುವ ಪ್ರೀತಿ ಮುಂದೆ ಯಾವ ರೀತಿ ಸಾಗುತ್ತದೆ ಎಂಬುದನ್ನು ಕುರಿತು ಕುತೂಹಲ ಹುಟ್ಟಿಸುವ ನವಿರಾದ ಕಥೆಯನ್ನು ಜೋಷಿ ಹೆಣೆದಿದ್ದಾರಂತೆ.

ಮತ್ತೆ ಬಂದ ವೀರಪ್ಪನ್!


ಕಾಡುಗಳ್ಳ ವೀರಪ್ಪನ್ ಸತ್ತು ಮೂರು ವರ್ಷವಾದರೂ ನಮ್ಮ ಸಿನಿಮಾ ಮಂದಿ ಮಾತ್ರ ಅವನನ್ನು ಬಿಡುತ್ತಿಲ್ಲ.

ಈ ಹಿಂದೆ ದೇವರಾಜ್ ಅಭಿನಯದ 'ವೀರಪ್ಪನ್' ಎಂಬ ಚಿತ್ರ ಬಂದಿತ್ತಾದರೂ ಈಗ ಮತ್ತೊಮ್ಮೆ ಆತನ ಕಥೆಯನ್ನಿಟ್ಟುಕೊಂಡು ಮತ್ತೊಂದು ಚಿತ್ರ ಸೆಟ್ಟೇರುತ್ತಿದೆ.

'ಸೈಕೋ' ಚಿತ್ರದ ಫೈನಾನ್ಶಿಯರ್ ಆಗಿರುವ ಕಿಮ್ಸ್ ಆಸ್ಪತ್ರೆಯ ಅಸಿಸ್ಟೆಂಟ್ ಪ್ರೊಫೆಸರ್ ಡಾ. ಕಿರಣ್ ಹಾಗೂ ಮುರಳೀಧರ ಹಾಲಪ್ಪ ಇಬ್ಬರೂ ಸೇರಿ ಈ ಚಿತ್ರವನ್ನು ನಿರ್ಮಿಸುತ್ತಿದ್ದಾರೆ. 'ಸೈನೇಡ್' ಚಿತ್ರದ ಎ.ಎಂ. ಆರ್ ರಮೇಶ್ 'ನಾನೇ ಈ ಚಿತ್ರದ ನಿರ್ದೇಶಕ' ಎಂದು ಹೇಳಿಕೊಳ್ಳುತ್ತಿದ್ದರು. ಆದರೆ ಈಗ ಬಂದಿರುವ ಸುದ್ದಿಯ ಪ್ರಕಾರ ರಮೇಶ್ ಕೈಯಿಂದ ತಪ್ಪಿಸಿಕೊಂಡಿರುವ 'ವೀರಪ್ಪನ್' 'ಸೈಕೋ' ಚಿತ್ರದ ನಿರ್ದೇಶಕ ದೇವದತ್ತರ ಪಾಲಾಗುವುದು ಬಹುತೇಕ ಖಚಿತವಾಗಿದೆ.



ಕುವೆಂಪು ಈಗ ಬೆಳ್ಳಿ ತೆರೆಗೆ



ರಾಷ್ಟ್ರಕವಿ ಕುವೆಂಪು ಅವರ ಜೀವನ ಚರಿತ್ರೆಯನ್ನು ಸಿನಿಮಾ ಮಾಡಲು ಹಿರಿಯ ನಟ ಸಿ.ಆರ್. ಸಿಂಹ ಮತ್ತುವರ ಮಗ ಋತ್ವಿಕ್ ಸಿಂಹ ಮುಂದಾಗಿದ್ದಾರೆ. ಮೊದಲಿನಿಂದಲೂ ತಮ್ಮ ತಂದೆಯಂತೆ ರಂಗಪ್ರಯೋಗಗಳಲ್ಲಿ ತನ್ನನ್ನು ತೊಡಗಿಸಿಕೊಂಡಿರುವ ಋತ್ವಿಕ್ ಸಿನಿಮಾ ಮಾಡಿದರೆ ಇಂಥಾ ಸಿನಿಮಾವನ್ನೇ ಮಾಡಬೇಕು ಎಂದು 'ರಸಋಷಿ ಕುವೆಂಪು' ಚಿತ್ರವನ್ನು ನಿರ್ದೇಶಿಸಲು ಸಕಲ ಸಿದ್ಧತೆಯೊಂದಿಗೆ ಅಣಿಯಾಗಿದ್ದಾರೆ.

ಕುವೆಂಪು ಎಂಬ ದೊಡ್ಡ ಪ್ರತಿಭೆಯನ್ನು, ಅದೂ ಕುವೆಂಪು ಅವರೇ ಬರೆದಿದ್ದ 'ನೆನಪಿನ ದೋಣಿ' ಆತ್ಮಕಥನವನ್ನು ಸಿನಿಮಾ ರೂಪಕ್ಕೆ ಅಳವಡಿಸುವುದು ಸುಲಭದ ಮಾತಲ್ಲ. ಆದರೆ ತಿಂಗಳುಗಟ್ಟಲೆ ತಂದೆ ಸಿ.ಆರ್. ಸಿಂಹರೊಂದಿಗೆ ಕೂತು ಋತ್ವಿಕ್ ಚಿತ್ರಕಥೆ ಸಿದ್ಧಪಡಿಸಿದ್ದಾರೆ. ಇದಕ್ಕೆ ಮತ್ತೊಬ್ಬ ಖ್ಯಾತ ಸಾಹಿತಿ ಎಚ್.ಎಸ್. ವೆಂಕಟೇಶಮೂರ್ತಿಯವರು ಸಂಭಾಷಣೆ ರಚಿಸಿದ್ದಾರೆ. ಜೊತೆಗೆ ವಿ. ಮನೋಹರ್ ಸಂಗೀತದಲ್ಲಿ ಕುವೆಂಪು ಅವರ ಆರು ಕವಿತೆಗಳು ಜೀವ ಪಡೆಯುತ್ತಿವೆ.



ಸಿ.ಆರ್.ಸಿಂಹ

ಕುವೆಂಪು ಅವರ ಬಾಲ್ಯದಿಂದ ಹಿಡಿದು ಅಂತ್ಯದವರೆಗೆ ಬರುವ ಮೂರು ಘಟ್ಟಗಳನ್ನು ಈ ಚಿತ್ರ ಒಳಗೊಂಡಿದೆ. ಬಾಲಕ ಕುವೆಂಪು ಆಗಿ ಅನಿಲ್ ಎಂಬ ಬಾಲಪ್ರತಿಭೆ ಪರಿಚಯಗೊಂಡರೆ ಪ್ರೌಢಾವಸ್ಥೆಯ ಕುವೆಂಪು ಆಗಿ 'ಅಮೆರಿಕ ಅಮೆರಿಕ' ಖ್ಯಾತಿಯ ನಟ ಹೇಮಾ ಪಂಚಮುಖಿಯ ತಮ್ಮ ಕಾಣಿಸಿಕೊಳ್ಳುತ್ತಿದ್ದಾನೆ. ಇನ್ನುಳಿದಂತೆ ವಯಸ್ಕ ಹಾಗೂ ವಯೋವೃದ್ಧ ಕುವೆಂಪು ಆಗಿ ಸ್ವತಃ ಸಿ.ಆರ್. ಸಿಂಹ ಅವರೇ ಅಭಿನಯಿಸುತ್ತಿದ್ದಾರೆ.

ಈ ಹಿಂದೆ ಸಂತ ಶಿಶುನಾಳ ಶರೀಫರ ಜೀವನವನ್ನು ಆಧರಿಸಿ ನಾಗಾಭರಣ ನಿರ್ದೇಶನದ ಚಿತ್ರ ಬಂದಿತ್ತಾದರೂ, ಆತ್ಮಕಥೆಗಳನ್ನು ಅದರಲ್ಲೂ ಮೇರು ಸಾಹಿತಿಯ ಜೀವನವನ್ನು ತೆರೆಗೆ ತರುವ ಪ್ರಯತ್ನವನ್ನು ಈವರೆಗೆ ಯಾರೂ ಮಾಡಿಲ್ಲ.

ಈ ನಿಟ್ಟಿನಲ್ಲಿ ಕುವೆಂಪು ಅವರ ಜೀವನ, ಕೃತಿ ಹಾಗೂ ಸಂದೇಶಗಳನ್ನು ಕುರಿತು ನಿರ್ಮಾಣವಾಗುತ್ತಿರುವ 'ರಸಋಷಿ ಕುವೆಂಪು' ಬರೀ ಕಲಾತ್ಮಕ ಚಿತ್ರವಾಗದೇ ಕಮರ್ಷಿಯಲ್ ಅಂಶಗಳನ್ನೂ ಒಳಗೊಂಡಿದೆಯಂತೆ.


ಏನೇ ಇರಲಿ, ಈ ಕಮರ್ಷಿಯಲ್ ಚಿತ್ರಗಳ ಅಬ್ಬರದ ನಡುವೆ ವಿಶ್ವಮಾನವನ ಜೀವನ ಸಂದೇಶವನ್ನು ಸಾರಲು ಹೊರಟಿರುವ ಋತ್ವಿಕ್ ಸಿಂಹ ಅವರಿಗೆ ಹ್ಯಾಟ್ಸಾಫ್ ಹೇಳಲೇಬೇಕು.

ವಿಲಕ್ಷಣವಾದರೂ ವಿಶೇಷವಾದ 'ಸೈಕೋ'



ಬಹಳ ಸಮಯದಿಂದ ನಿರೀಕ್ಷಿಸುತ್ತಿದ್ದ ದೇವದತ್ ನಿರ್ದೇಶನದ 'ಸೈಕೋ' ಚಿತ್ರ ಈ ವಾರ ತೆರೆಕಂಡಿದೆ. ಈ ಚಿತ್ರದ ನಾಯಕ, ನಾಯಕಿ ಇವರ ಫೋಟೋ ಮತ್ತು ಹೆಸರನ್ನು ಕೊನೇ ಕ್ಷಣದ ತನಕ ಎಲ್ಲೂ ಪ್ರಕಟಿಸದೇ ವಿಚಿತ್ರವಾದ ಕುತೂಹಲವನ್ನು ನಿರ್ದೇಶಕ ಆರಂಭದಲ್ಲಿ ಸೃಷ್ಟಿಸಿದ್ದರು. ಆನಂತರ ರಘು ದೀಕ್ಷಿತ್ ಸಂಗೀತ ನಿರ್ದೇಶನದ ಈ ಚಿತ್ರದ ಹಾಡುಗಳು ರೇಡಿಯೋದಲ್ಲಿ ಬರಲಾರಂಭಿಸಿದಾಗ ಚಿತ್ರದ ಬಗೆಗಿನ ಕುತೂಹಲ ಇಮ್ಮಡಿಯಾಯಿತು. ಯಾರು ಈ ರಘು ದೀಕ್ಷಿತ್ ಎಂದು ಎಲ್ಲರೂ ಮಾತನಾಡಿಕೊಳ್ಳುವಷ್ಟು ಹಾಡುಗಳು ಪಾಪ್ಯುಲರ್ ಆದವು.

ತಾಂತ್ರಿಕವಾಗಿ ಅತ್ಯದ್ಭುತವಾಗಿ ಮೂಡಿಬಂದಿರುವ 'ಸೈಕೋ' ಚಿತ್ರ ನೋಡುಗನನ್ನು ಪುಳಕಿತಗೊಳಿಸುತ್ತದೆ. ಅದರ ಹೆಚ್ಚಿನ ಕೀರ್ತಿ ಛಾಯಾಗ್ರಾಹಕ ಸಭಾಕುಮಾರ್ ಮತ್ತು ಚುರುಕಾದ ಸಂಕಲನ ಮಾಡಿರುವ ಕೆಂಪರಾಜ್‌ಗೆ ಸಲ್ಲುತ್ತದೆ. ಸಭಾಕುಮಾರ್ ಈ ಚಿತ್ರದ ಹೀರೋ ಎಂದರೂ ತಪ್ಪಾಗಲಾರದು. ಅಫ್‌ಕೋರ್ಸ್ ರಘು ದೀಕ್ಷಿತ್ ಮೂರು ಮಾಧುರ್ಯವಾದ ಹಾಡುಗಳಿಂದ ಮೊದಲ ಪ್ರಯತ್ನದಲ್ಲೇ ಜನಮನ ಗೆದ್ದಿದ್ದಾರೆ.



ಆದರೆ ಇಡೀ ಸಿನಿಮಾ ಎಕ್ಕುಟ್ಟಿಹೋಗಿರುವುದು ದೇವದತ್ ಅವರ ವಿಚಿತ್ರ, ವಿಕೃತ ಮತ್ತು ವಿಕ್ಷಿಪ್ತವಾದ ಕಥೆಯಿಂದಾಗಿ. ದೇವದತ್ ಚಿತ್ರ ನಿರ್ದೇಶನದ, ನಿರೂಪಣೆಯ ಎಲ್ಲ ಸೂಕ್ಷ್ಮಗಳನ್ನು ಬಲ್ಲವರಾಗಿದ್ದಾರೆ. ದೃಶ್ಯಮಾಧ್ಯಮವನ್ನು ಹೇಗೆ ಪ್ರಬಲವಾಗಿ ಪ್ರೇಕ್ಷಕರ ಮನಮುಟ್ಟುವಂತೆ ಹೇಳಬೇಕು ಎಂಬ ಸೂತ್ರವನ್ನೂ ಚೆನ್ನಾಗಿ ಅರಿತಿದ್ದಾರೆ. ಆದರೆ ಕಥಾವಸ್ತುವಿನ ಆಯ್ಕೆಯಲ್ಲಿ ದೇವದತ್ ಸಂಪೂರ್ಣವಾಗಿ ಮುಗ್ಗರಿಸಿದ್ದಾ... ಸ್ವಲ್ಪ ಹೆಚ್ಚು ಕಡಿಮೆಯಾಗಿದ್ದರೂ ಈ ಚಿತ್ರ ಇನ್ನೊಂದು 'ಪಟ್ರೆ ಲವ್ ಪದ್ಮ' ತರ... ತಾತ್ಸಾರಕ್ಕೆ ಗುರಿಯಾಗುತ್ತಿತ್ತು, ಆದರೆ ಸ್ವಲ್ಪದರಲ್ಲೇ 'ಸೈಕೋ' ಆ ಅಪಾಯದಿಂ... ಪಾರಾಗಲು ಕಾರಣ ಚಿತ್ರ ತಾಂತ್ರಿಕವಾಗಿ ಮತ್ತು ಸಂಗೀತಮಯವಾಗಿ ಅತ್ಯದ್ಭುತವಾ... ಮೂಡಿಬಂದಿರುವುದು. ನಾಯಕ ಧನುಷ್ ಮತ್ತು ನಾಯಕಿ ಅನಿತಾ ಕೂಡಾ ಹೊಸಬರಾದರೂ ತಮ್ಮ ಪಾತ್ರಗಳಿಗೆ ಜೀವ ತುಂಬಿದ್ದಾರೆ.





'ಸೈಕೋ'ದ ಕಥೆ ಆಯ್ಕೆಯಲ್ಲಿ ಮುಗ್ಗರಿಸಿದ್ದರೂ, ಹೊಸ ಛಾಯಾಗ್ರಾಹಕ, ನಾಯಕ, ನಾಯಕಿ, ಸಂಗೀತ ನಿರ್ದೇಶಕ ಮತ್ತು ನಿರ್ಮಾಪಕ ಇವರೆಲ್ಲರಿಂದ ಮೊದಲ ಪ್ರಯತ್ನದಲ್ಲೇ ಒಳ್ಳೆಯ ಕೆಲಸ ಪಡೆದ ದೇವದತ್‌ಗೆ ಒಳ್ಳೆಯ ಭವಿಷ್ಯವಿದೆ ಎಂದು ಹೇಳಬಹುದು.



ವಿಜಯ್ ತಾಕತ್ತು!



ಶುಭಾಪೂಂಜಾ



ಎಂ.ಎಸ್.ರಮೇಶ್

'ಬೆಳದಿಂಗಳಾಗಿ ಬಾ...' ಚಿತ್ರವನ್ನು ನಿರ್ಮಿಸಿದ್ದ ಎಂ.ಎಸ್. ರಮೇಶ್ ಮತ್ತು ಆತನ ಗೆಳೆಯರ ತಂಡ ಈಗ ತಮ್ಮ ದ್ವಿತೀಯ ಕಾಣಿಕೆಯಾಗಿ 'ತಾಕತ್ತು' ಪ್ರದರ್ಶಿಸಲು ಹೊರಟಿದೆ. ಇವರ ತಂಡದ ಆಧಾರಸ್ತಂಭ ರಾಜಶೇಖರ್ ಇತ್ತೀಚೆಗೆ ನಿಧನ ಹೊಂದಿದ್ದರೂ ಅವರ ಆಶಯದಂತೆ ಅಕ್ಟೋಬರ್ 30ರಂದೇ ಚಿತ್ರವನ್ನು ಆರಂಭಿಸಿದ್ದಾರೆ.

ವಿಜಯ್ ಈ ಚಿತ್ರದ ನಾಯಕನಟ. ಸಿಕ್ಸ್‌ಪ್ಯಾಕ್ ವಿಜಯ್ ಈ ಚಿತ್ರದಲ್ಲಿ ಫ್ಯಾಮಿಲಿ ಪ್ಯಾಕ್ ಮನರಂಜನೆ ನೀಡುತ್ತಾರೆ ಎಂದು ನಿರ್ದೇಶಕ ಎಂ.ಎಸ್. ರಮೇಶ್ ಭರವಸೆ ನೀಡಿದ್ದಾರೆ.

ಅದಕ್ಕಿಂತಲೂ ನಿಜವಾದ ಹೈಲೇಟ್ ಮತ್ತು 'ತಾಕತ್ತು' ಎಂದರೆ ಈ ಚಿತ್ರದಲ್ಲೂ ಮತ್ತೆ ವಿಜಯ್ ಮತ್ತು ಶುಭಾ ಪೂಂಜಾ ಜೊತೆಯಾಗಿ ನಟಿಸುತ್ತಿರುವುದು. ಇದು ಈ ಜೋಡಿಯ ಮೂರನೇ ಚಿತ್ರ. ಹ್ಯಾಟ್ರಿಕ್ ಜೋಡಿಯ 'ತಾಕತ್ತು' ಮೆಚ್ಚೋಣ.

'ಗಾಂಧಿ ಬಜಾರ್'ನ ಛಾಯಾಸಿಂಗ್

ಆರಕ್ಕೇರದ ಮೂರಕ್ಕಿಳಿಯದ ಕನ್ನಡದ ನಟಿ ಛಾಯಾಸಿಂಗ್ ನಟನೆಗೆ ಅಲ್ಪವಿರಾಮ ಹಾಕಿ, ಸಿನಿಮಾ ನಿರ್ದೇಶನ ಮಾಡಲು ಮುಂದಾಗಿದ್ದಾಳೆ.

ಚಿತ್ರದ ಹೆಸರು 'ಗಾಂಧಿ ಬಜಾರ್'! ಸಂಸ್ಕೃತಿ ತಿಳಿಯದ ಹುಡುಗನೊಬ್ಬನಿಗೆ ನಮ್ಮ ದೇಶದ ಕಲಾಚಾರಗಳನ್ನು ತಿಳಿಸಿಕೊಡುವುದು ಚಿತ್ರದ ಕಥೆಯಂತೆ. ಅದೂಅಲ್ಲದೆ ಈ ಚಿತ್ರ ಕನ್ನಡ, ತೆಲುಗು, ಮಲೆಯಾಳಂ ಮತ್ತು ಭೋಜ್‌ಪುರಿ ಭಾಷೆಗಳಲ್ಲಿ ತಯಾರಾಗುತ್ತಂತೆ.

ಒಂದೊಂದು ಭಾಷೆಯ ಸಿನಿಮಾ ಮಾಡುವುದಕ್ಕೇ ಹರಸಾಹಸಪಡಬೇಕಾದ ಇಂದಿನ ಪರಿಸ್ಥಿತಿಯಲ್ಲಿ ಈ ಛಾಯಾಸಿಂಗ್ ಒಂದೇ ಸಿನಿಮಾವನ್ನು ನಾಲ್ಕು ಭಾಷೆಯಲ್ಲಿ ನಿರ್ದೇಶಿಸುವುದಾಗಿ ಹೇಳಿಕೆ ನೀಡಿರುವುದು ಎಲ್ಲರನ್ನೂ ದಿಗ್ಭ್ರಾಂತಗೊಳಿಸಿದೆ.

ಒಟ್ಟಾರೆ ಛಾಯಾಸಿಂಗ್ ನಿಜಕ್ಕೂ ಈ ಸಿನಿಮಾವನ್ನು ನಿರ್ದೇಶಿಸುತ್ತಿದ್ದಾಳಾ ಅಥವಾ ಪ್ರಚಾರಕ್ಕಾಗಿ ಸುಮ್ನೇ ಕಾಗೆ ಹಾರಿಸ್ತಿದ್ದಾಳಾ ಅನ್ನೋದನ್ನು ಮಾತ್ರ ಕಾಲವೇ ತೀರ್ಮಾನಿಸಬೇಕಿದೆ.



PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore -4, Phone : 26676427, Fax : 26604536, E-mail :lankesh70@rediffmail.com, Printed at Rajhans Enterprises, # 134, 4th Main, Industrial Estate, Rajajinagar, Bangalore-4